ಸಂಪುಟ: 04 ಸಂಚಿಕೆ: 270 ಪುಟಗಳು: 08 ಶುಕ್ರವಾರ 13 ಡಿಸೆಂಬರ್ 2024
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833
₹5

ಮುಂಜಾನೆ ಮಾತು

ನೀವು ಇತರರಿಗೆ ಸಹಾಯ ಮಾಡಿದರೆ, ನೀವು ನಿಜವಾದ ಯಶಸ್ಸನ್ನು ಸಾಧಿಸಿದ್ದೀರಿ ಎಂದರ್ಥ. ಹಾಗಾಗಿ ಅಗತ್ಯವಿರುವವರಿಗೆ ಸಹಾಯ ಮಾಡಿ.

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಪಂಚಮ ಮೀಸಲು ಸರ್ಕಾರಕ್ಕೆ ಸವಾಲು

2ಎ ಮೀಸಲಾತಿ ಕಿಚ್ಚು

ಇದು ಚಾರ್ಜ್ ವಿಷಯ

ಸಿಎಂ ವಿರುದ್ಧ ಆಕ್ರೋಶ

- ಉಗ್ರ ಹೋರಾಟದ ಎಚ್ಚರಿಕೆ ನೀಡಿದ ಪಂಚಮಸಾಲಿ ಶ್ರೀ
- ವಿಧಾನಸಭೆ ಕಲಾಪದಲ್ಲಿ ಪ್ರತಿಧ್ವನಿಸಿದ ಪಂಚಮಸಾಲಿ ಹೋರಾಟಗಾರರ ಮೇಲಿನ ಲಾಠಿ ಚಾರ್ಜ್

ಪಂಚಮಸಾಲಿ ಮೀಸಲಾತಿ ಬೇಡಿಕೆಯೇ ಸಂವಿಧಾನ ವಿರೋಧಿ ಎಂಬ ಸಿಎಂ ಸಿದ್ದರಾಮಯ್ಯ ಹೇಳಿಕೆಗೆ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಕಿಡಿಕಾರಿದ್ರು. ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಸ್ವಾಮೀಜಿ, ಸಿಎಂ ಹೇಳಿಕೆಯೇ ಸಂವಿಧಾನ ವಿರೋಧಿಯಾಗಿದೆ ಅಂತ ಆಕ್ರೋಶ ಹೊರಹಾಕಿದ್ರು. ನಮ್ಮ ಬೇಡಿಕೆ ಸಂವಿಧಾನ ಬದ್ಧವಾಗಿದೆ. ಸಿಎಂ ಸುಳ್ಳು ಹೇಳುತ್ತಿದ್ದಾರೆ. ಈ ಮೂಲಕ ಹೋರಾಟದ ದಾರಿ ತಪ್ಪಿಸುವ ಪ್ರಯತ್ನ ಮಾಡುತ್ತಿದ್ದಾರೆ ಅಂತ ಸ್ವಾಮೀಜಿ ಆಕ್ರೋಶ ವ್ಯಕ್ತಪಡಿಸಿದ್ರು. ಇದನ್ನು ನಾವು ಸಹಿಸುವುದಿಲ್ಲ, ಮೀಸಲಾತಿ ಪಡೆದೇ ತೀರುತ್ತೇವೆ ಅಂತ ಸವಾಲು ಹಾಕಿದ್ದಾರೆ.

ಸಿಎಂ ವಿರುದ್ಧ ಜಯಮೃತ್ಯುಂಜಯ ಸ್ವಾಮೀಜಿ ಕಿಡಿ

- ಉದಯವಾಹಿನಿ, ಬೆಂಗಳೂರು

ಪಂಚಮಸಾಲಿ ಹೋರಾಟಗಾರರ ಮೇಲೆ ನಡೆದ ಲಾಠಿ ಚಾರ್ಜ್ ವಿಷಯ ವಿಧಾನಸಭೆಯಲ್ಲಿ ಪ್ರತಿಧ್ವನಿಸಿ ಕೋಲಾಹಲಕ್ಕೆ ಕಾರಣವಾಯಿತು. ಕಲಾಪ ಆರಂಭಗೊಳ್ಳುತ್ತಿದ್ದಂತೆ ಪ್ರತಿಪಕ್ಷದ ಶಾಸಕರು ಸರ್ಕಾರದ ವಿರುದ್ಧ ಧಿಕ್ಕಾರ ಕೂಗಲಾರಂಭಿಸಿದರು. ಸ್ಪೀಕರ್ ಯು.ಟಿ.ಖಾದರ್ ಸಂತಾಪ ಸೂಚಕ ನಿರ್ಣಯ ಪ್ರಸ್ತಾಪಿಸಿದರು. ಪ್ರತಿಪಕ್ಷದ ನಾಯಕ ಆರ್.ಅಶೋಕ್, ಹಿರಿಯ ಸದಸ್ಯ ಡಾ.ಸಿ.ಎನ್. ಅಶ್ವತ್ಥನಾರಾಯಣ, ಅರಗ ಜ್ಞಾನೇಂದ್ರ, ಸುನಿಲ್ ಕುಮಾರ್ ಮತ್ತು ಇತರರು ವಿಷಯ ಪ್ರಸ್ತಾಪಿಸಿ ಚರ್ಚೆಗೆ ಅವಕಾಶ ನೀಡಬೇಕೆಂದು ಆಗ್ರಹಿಸಿದರು. ಪ್ರತಿಕ್ರಿಯಿಸಿದ ಸ್ಪೀಕರ್, ಈ ಮನೆಯಲ್ಲಿ ನಮ್ಮ ನಿಮ್ಮ ಹಾಗೆ ಜನಸೇವೆ ಮಾಡಿದ್ದ ಇಬ್ಬರು ಶಾಸಕರಾದ ಜಯಣ್ಣ ಮತ್ತು ಆರ್.ನಾರಾಯಣ್ ಅವರು ನಮನ್ನು ಅಗಲಿದ್ದಾರೆ. ಅವರಿಗೆ ಮೊದಲು ಸಂತಾಪ ಸೂಚನೆ ಮಂಡಿಸಿ ಅವರ ಕುಟುಂಬದ ದುಃಖವನ್ನು ಕಡಿಮೆ ಮಾಡುವುದು ನಮ್ಮ ಕರ್ತವ್ಯ. ಮೊದಲು ಅದಕ್ಕೆ ಅವಕಾಶ ಮಾಡಿಕೊಡಿ. ನಿಮ್ಮ ಉತ್ಸಾಹ ನನಗೆ ಅರ್ಥವಾಗುತ್ತದೆ ಎಂದು ಹೇಳಿದರು. ಇದು ಉತ್ಸಾಹ ಅಲ್ಲ, ನೋವು ಎಂದು ಬಿಜೆಪಿಯ ಸುನಿಲ್ ಕುಮಾರ್ ಆಕ್ಷೇಪ ವ್ಯಕ್ತಪಡಿಸಿದರು. ಆ ನೋವಿಗೆ ಬಿಜೆಪಿಯೇ ಕಾರಣ ಎಂದು ಕಾಂಗ್ರೇಸ್ ಶಾಸಕ ಪಿ.ಎಂ.ನರೇಂದ್ರ ಸ್ವಾಮಿ ತಿರುಗೇಟು ನೀಡಿದರು. ಆಗ, ಮಾತಿನ ಚಕಮಕಿ ನಡೆಯಿತು. ಪ್ರತಿಪಕ್ಷದ ಸದಸ್ಯರನ್ನು ಸಮಾಧಾನಪಡಿಸಿದ ಸ್ಪೀಕರ್, ಪ್ರತಿಪಕ್ಷದವರು ಪ್ರಸ್ತಾಪಿಸುವ ವಿಷಯಕ್ಕೆ ಸಂತಾಪ ಸೂಚನೆ ಬಳಿಕ ಅವಕಾಶ ನೀಡುವುದಾಗಿ ಭರವಸೆ ನೀಡಿದರು. ನಂತರ ಸಂತಾಪ ಸೂಚನಾ ನಿರ್ಣಯ ಕೈಗೆತ್ತಿಕೊಂಡರು.

ಮಾಜಿ ಶಾಸಕರಿಗೆ ಸಂತಾಪ: ಮಾಜಿ ಶಾಸಕರಾದ ಆರ್.ನಾರಾಯಣ, ಎಸ್.ಜಯಣ್ಣ ನಿಧನಕ್ಕೆ ವಿಧಾನಸಭೆಯಲ್ಲಿ ಇಂದು ಸಂತಾಪ ಸೂಚಿಸಿ ನಿರ್ಣಯ ಕೈಗೊಳ್ಳಲಾಯಿತು. ಕಲಾಪದ ಆರಂಭದಲ್ಲಿ ಸ್ಪೀಕರ್ ಯು.ಟಿ.ಖಾದರ್ ಅವರು, ಸಂತಾಪ ಸೂಚನೆ ನಿರ್ಣಯ ಮಂಡಿಸಿ, ಮಾಜಿ ಶಾಸಕ ಆರ್.ನಾರಾಯಣ ಅವರು 7 ಜುಲೈ 1943 ರಂದು ತುಮಕೂರಿನಲ್ಲಿ ಜನಿಸಿದ್ದರು. ಬಿಎಸ್ಸಿ, ಕಾನೂನು ಪದವಿ ಪಡೆದಿದ್ದ ಅವರು ವಕೀಲರಾಗಿದ್ದರು. ಬೆಳಗಾವಿ ವಿಧಾನಸಭಾ ಕ್ಷೇತ್ರದಿಂದ ಪ್ರಥಮ ಬಾರಿಗೆ 9ನೇ ವಿಧಾನಸಭೆಗೆ ಪ್ರವೇಶಿಸಿ ನಂತರ 10, 11ನೇ ವಿಧಾನಸಭೆಗೆ ಪುನರ ಆಯ್ಕೆಯಾದರು. ಸಂತಾಪ ನಿರ್ಣಯದ ಮೇಲೆ ಉಪಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವರಾದ ಡಿ.ಕೆ.ಶಿವಕುಮಾರ್ ಮಾತನಾಡಿ, ಆರ್.ನಾರಾಯಣ್ ಕಾಂಗ್ರೇಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿದ್ದರು. ಹಾಗೂ ಪ್ರಸ್ತುತ ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷರಾಗಿದ್ದ ಜಯಣ್ಣ.ಎಸ್ ಸಹಿತ ಶಾಸಕರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ ಎಂದು ಸ್ಮರಿಸಿದರು. ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಕೃಷಿ ಸಚಿವ ಚಲವರಾಯಸ್ವಾಮಿ, ಸಮಾಜ ಕಲ್ಯಾಣ ಇಲಾಖೆ ಸಚಿವ ಹೆಚ್.ಸಿ.ಮಹಾದೇಪ್ಪ ಸೇರಿದಂತೆ ಇತರೆ ಶಾಸಕರು ಸಂತಾಪ ನಿರ್ಣಯದ ಮೇಲೆ ಮಾತನಾಡಿದರು. ನಂತರ ಮೃತರ ಗೌರವಾರ್ಥ ಸದನದಲ್ಲಿ ಒಂದು ನಿಮಿಷದ ಮೌನಾಚರಣೆ ಆಚರಿಸಲಾಯಿತು.



ಪಂಚಮಸಾಲಿ ಸಮಾಜದ ಶಾಸಕರೇ ಕುಮ್ಮಕ್ಕು

ಬೆಳಗಾವಿಯ ಸುವರ್ಣ ವಿಧಾನಸೌಧದ ಮುಂದೆ ಮೀಸಲಾತಿಗಾಗಿ ಹೋರಾಟ ನಡೆಸಿದ ಪಂಚಮಸಾಲಿ ಸಮಾಜದವರ ಮೇಲೆ ಲಾಠಿಚಾರ್ಜ್ ಮಾಡಿದ ವಿಷಯ ಗುರುವಾರ ಮತ್ತೆ ಪ್ರತಿಧ್ವನಿಸಿತು. ಬೆಳಗಾವಿ ಸಮೀಪದ ಹಿರೇಬಾಗೇವಾಡಿಯ ಟೋಲ್ ನಾಕಾ ಬಳಿ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಹೆದ್ದಾರಿ ಬಂದ್ ಮಾಡಿದರು. ಪಂಚಮಸಾಲಿ ಸಮಾಜದವರೇ ಆದ ಒಬ್ಬ ಶಾಸಕರೇ ಕುಮ್ಮಕ್ಕು ನೀಡಿ ಲಾಠಿಚಾರ್ಜ್ ಮಾಡಿಸಿದ್ದಾರೆ ಎಂದೂ ಸ್ವಾಮೀಜಿ ಗಂಭೀರ ಆರೋಪ ಮಾಡಿದರು. ಕೊಂಡಿ ಮಂಚಣ್ಣ ಇದ್ದ, ಮಲ್ಲಪ್ಪಶೆಟ್ಟಿ ಅಂಥವರು ಇನ್ನೂ ಇದ್ದಾರೆ. ತಮ್ಮ ಸಚಿವ ಸ್ಥಾನಕ್ಕಾಗಿ ಗೋಲಿಬಾರ್ ಬೇಕಾದರೂ ಮಾಡಿಸಲಿ ಎಂದೂ ಅವರು ಕಿಡಿ ಕಾರಿದರು.

ಜಗದ್ಗುರುಗಳ ಎದುರು ಸಿಎಂ ಕ್ಷಮೆ ಕೇಳಲಿ

ವಿಜಯಪುರ ಜಿಲ್ಲೆಯಾದ್ಯಂತ ಪ್ರತಿಭಟನೆ ನಡೆಯಿತು. ಚಡಚಣ, ಇಂಡಿ, ಮುದ್ದೇಬಿಹಾಳ, ಸಿಂದಗಿ ಪಟ್ಟಣ ಸೇರಿದಂತೆ ಹಲವೆಡೆ ಪಂಚಮಸಾಲಿ ಸಮುದಾಯದ ಮುಖಂಡರು ಪ್ರತಿಭಟನೆ ನಡೆಸಿದರು. ಚಡಚಣ, ಇಂಡಿಯಲ್ಲಿ ಹೆದ್ದಾರಿ ತಡೆದು ಪ್ರತಿಭಟನೆ ನಡೆಯಿತು. ಇಂಡಿ ಮಾಜಿ ಶಾಸಕ ರವಿಕಾಂತ ಪಾಟೀಲ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಲಾಠಿ ಚಾರ್ಜ್ ಮಾಡಿದ ಪೊಲೀಸ್ ಅಧಿಕಾರಿಗಳ ಅಮಾನತ್ತು ಮಾಡಿ, ಪಂಚಮಸಾಲಿ ಜಗದ್ಗುರುಗಳ ಬಳಿ ಸಿಎಂ ಕ್ಷಮೆ ಕೇಳುವಂತೆ ಆಗ್ರಹಿಸಿದರು.

1. ಪಂಚಮಸಾಲಿ ಪ್ರತಿಭಟನಾಕಾರರ ಮೇಲೆ ಲಾಠಿಚಾರ್ಜ್ ಸಮರ್ಥಿಸಿಕೊಂಡ ಪರಂ
2. ಬೆಳಗಾವಿಯಲ್ಲಿ ಜ್ವಾಲೆಯಾದ ಪಂಚಮಸಾಲಿ ಮೀಸಲು ಕಿಚ್ಚು
3. 2ಎ ಸೇರಿಸಲೇ ಬೇಕು ಎಂದು ಪಟ್ಟು ಹಿಡಿದಿರುವ ಪಂಚಮಸಾಲಿ ಲಿಂಗಾಯತರು

ಸೋನಿಯಾ ಮನವೊಲಿಸಲು ವಯನಾಡಿಗೆ ನೂರು ಮನೆ

- ಉದಯವಾಹಿನಿ, ಶಿವಮೊಗ್ಗ

ಕೇರಳದ ವಯನಾಡಿಗೆ ನೂರು ಮನೆ ಕಟ್ಟಿ ಕೊಡುವುದಾಗಿ ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ಅದು ಕರುಣೆಯೂ ಅಲ್ಲ, ಭಿಕ್ಷೆಯೂ ಅಲ್ಲ, ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಯವರ ಮನವೊಲಿಸಲು ಆ ರೀತಿ ಹೇಳಿದ್ದಾರೆ ಎಂದು ಮಾಜಿ ಡಿಸಿಎಂ ಕೆ.ಎಸ್ ಈಶ್ವರಪ್ಪ ವಾಗ್ದಾಳಿ ನಡೆಸಿದ್ದಾರೆ. ಈ ವೇಳೆ, ವಯನಾಡಿನಲ್ಲಿ ಪ್ರಿಯಾಂಕ ಗಾಂಧಿ ಗೆದ್ದಿರುವುದರಿಂದ, ಮುಸಲ್ಮಾನರನ್ನು ತೃಪ್ತಿ ಪಡಿಸಲು ಇವರು ಹೊರಟಿದ್ದಾರೆ. ರಾಜ್ಯದಲ್ಲೂ ಮನೆಗಳು ಬಿದ್ದಿವೆ, ಶಿವಮೊಗ್ಗದಲ್ಲಿ ಮನೆಗಳು ಬಿದ್ದಿವೆ. ಅವರಿಗೆ ಇನ್ನೂ ಪರಿಹಾರ ಬಂದಿಲ್ಲ. ಅವರಿಗೆ ಮೊದಲು ಪರಿಹಾರ ನೀಡಲಿ. ಕರ್ನಾಟಕದಲ್ಲಿ ಮನೆ ಬಿದ್ದಿರೋ ಕಡೆ ಸಿಎಂ, ಡಿಸಿಎಂ ಹೋಗಿ ಸಮಸ್ಯೆ ಕೇಳಿಲ್ಲ. ಅವರ ನಾಯಕರನ್ನು ತೃಪ್ತಿಪಡಿಸಲು ರಾಜ್ಯ ಸರ್ಕಾರದ ಅನುದಾನ ವಿನಿಯೋಗಿಸಬಾರದು ಎಂದಿದ್ದಾರೆ.

ಬೆಳಗಾವಿಯಲ್ಲಿ ಪಂಚಮಸಾಲಿ ಹೋರಾಟಗಾರರ ಮೇಲೆ ಲಾಠಿ ಚಾರ್ಜ್ ವಿಚಾರವಾಗಿ, ಇದರಲ್ಲಿ ಪೊಲೀಸ್ ಇಲಾಖೆ ವೈಫಲ್ಯ ಎದ್ದು ಕಾಣುತ್ತಿದೆ. ಯಾವುದೇ ಸಮಾಜ ಸ್ವಾಭಾವಿಕವಾಗಿ ಬೇಡಿಕೆಗಳಿಗೆ ಮನವಿ ಸಲ್ಲಿಸುತ್ತಾರೆ. ಅದನ್ನು ಹೇಗೆ ನಿಭಾಯಿಸಬೇಕು ಎಂಬುದನ್ನು ಸರ್ಕಾರ ತಿಳಿದಿರಬೇಕು. ಪಂಚಮಸಾಲಿಯವರು ಮೊದಲೇ ಪ್ರತಿಭಟನೆ ಬಗ್ಗೆ ತಿಳಿಸಿದ್ದರು. ಸರ್ಕಾರ ಹಾಗೂ ಪೊಲೀಸ್ ಇಲಾಖೆ ಸಂಪೂರ್ಣ ವೈಫಲ್ಯ ಇದರಲ್ಲಿ ಎದ್ದು ಕಾಣುತ್ತಿದೆ ಎಂದು ಅವರು ಆಕ್ರೋಶ ಹೊರಹಾಕಿದ್ದಾರೆ.

ಸ್ಪೀಕರ್ ಮನಸೋ ಇಚ್ಛೆ ಅಧಿವೇಶನ ನಡೆಸುತ್ತಿದ್ದಾರೆ

- ಉದಯವಾಹಿನಿ, ಬೆಳಗಾವಿ

ಪಂಚಮಸಾಲಿ ಸಮುದಾಯದ ಹೋರಾಟಗಾರರ ಮೇಲೆ ಲಾಠಿ ಚಾರ್ಜ್ ಮಾಡಿರುವ ಪೊಲೀಸರ ಕ್ರಮ ಪ್ರಕರಣ ವಿಧಾನಸಭೆಯಲ್ಲಿ ಪ್ರತಿಧ್ವನಿಸಿದ್ದು ಗದ್ದಲ-ಕೋಲಾಹಲಕ್ಕೆ ಕಾರಣವಾಗುತ್ತಿದ್ದಂಯ ಸ್ಪೀಕರ್ ಯು.ಟಿ.ಖಾದರ್ ಕಲಾಪವನ್ನು ಮುಂದೂಡಿದ್ದಾರೆ. ಸ್ಪೀಕರ್ ನಡೆಗೆ ವಿಪಕ್ಷ ಬಿಜೆಪಿ ನಾಯಕರು ತಿವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಬೆಳಗಾವಿ ಸುವರ್ಣಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ವಿಪಕ್ಷ ನಾಯಕ ಆರ್.ಅಶೋಕ್, ಸ್ಪೀಕರ್ ಯು.ಟಿ.ಖಾದರ್ ಪಂಚಮಸಾಲಿ ಹೋರಾಟಗಾರರ ಮೇಲೆ ಲಾಠಿ ಚಾರ್ಜ್ ಬಗ್ಗೆ ಚರ್ಚಿಸಲು ಅವಕಾಶ ಕೊಟ್ಟಿಲ್ಲ. ಬೇರೆ ವಿಷಯಗಳ ಚರ್ಚೆಗೆ ಅವಕಾಶ ನೀಡಿದ್ದಾರೆ. ಸ್ಪೀಕರ್ ಯು.ಟಿ.ಖಾದರ್ ಮನಸೋ ಇಚ್ಛೆ ಅಧಿವೇಶನ ನಡೆಸುತ್ತಿದ್ದಾರೆ ಎಂದು ಕಿಡಿಕಾರಿದರು. ಲಾಠಿ ಚಾರ್ಜ್ ಬಗ್ಗೆ ಚರ್ಚೆಯಾಗಬೇಕು. ಅದನ್ನು ಬಿಟ್ಟು ಬೇರೆ ವಿಷಯಗಳ ಬಗ್ಗೆ ಚರ್ಚೆಗೆ ಅವಕಾಶ ನೀಡುತ್ತಿದ್ದಾರೆ ಪಾಯಿಂಟ್ ಆಫ್ ಆರ್ಡರ್ ಎತ್ತಿದರೂ ಗಮನ ಹರಿಸುತ್ತಿಲ್ಲ ಎಂದು ವಾಗ್ದಾಳಿ ನಡೆಸಿದರು.

ಸಾಲ ಮಾಡಿದರೂ ಕೂಡ ಮಾನದಂಡ ಮೀರಿಲ್ಲ

- ಉದಯವಾಹಿನಿ, ಬೆಳಗಾವಿ

ಬಜೆಟ್ ನಲ್ಲಿ 3 ಲಕ್ಷದ 71 ಸಾವಿರ ಕೋಟಿ ರೂ.ಗಳನ್ನು ಅಭಿವೃದ್ಧಿಗಳಿಗೆ ನೀಡಲಾಗುತ್ತಿದೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಆರೋಗ್ಯವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ವಿಧಾನಪರಿಷತ್ತಿನಲ್ಲಿ ಸದಸ್ಯ ಕೆ.ಎ.ತಿಪ್ಪೇಸ್ವಾಮಿಯವರ ಪ್ರಶ್ನೆಗೆ ಉತ್ತರಿಸಿದ ಸಿಎಂ ಸಿದ್ದರಾಮಯ್ಯ, 2024-25ರ ಅವಧಿಯಲ್ಲಿ 1 ಲಕ್ಷ 4 ಸಾವಿರ ಕೋಟಿ ಸಾಲ ಮಾಡಿದರೂ ಕೂಡ ಮಾನದಂಡ ಮೀರಿಲ್ಲ. ಶೇ.25 ರ ಒಳಗಡೆಯೇ ಇದೆ ಎಂದು ಹೇಳಿದರು. ಯಾವುದೇ ಸರ್ಕಾರ ತನ್ನ ಖರ್ಚುಗಳನ್ನು ಮಾಡಬೇಕಾದರೆ ಸಾಲವನ್ನು ಮಾಡಬೇಕಾಗುತ್ತದೆ. ನಮ್ಮ ಇತಿಮಿತಿಗಳನ್ನು ಪರಿಶೀಲಿಸಿ ಸಾಲ ಮಾಡಲಾಗುತ್ತದೆ. ಒಟ್ಟು ಸಾಲ ಶೇ.25 ವರೆಗೂ ಮೀರಬಾರದು ಎಂಬ ಮಾನದಂಡಗಳಿದ್ದು ನಮ್ಮ ಸರ್ಕಾರದ ಸಾಲ ಮಿತಿಯ ಒಳಗಡೆ ಇದೆ. ರಾಜ್ಯ ಸರ್ಕಾರ 1 ಲಕ್ಷದ 4 ಸಾವಿರ ಕೋಟಿ ರೂಗಳ ಸಾಲವನ್ನು ಮಾಡಲಾಗಿದೆ.

ವಯನಾಡಿಗೆ 100 ಮನೆ ಗುಲಾಮಗಿರಿಯ ಸಂಕೇತ

- ಉದಯವಾಹಿನಿ, ಚಿಕ್ಕಮಗಳೂರು

ಕೇರಳದ ವಯನಾಡಿಗೆ 100 ಮನೆಗಳನ್ನು ನೀಡಲು ಮುಂದಾಗಿರುವ ಸಿಎಂ ಸಿದ್ದರಾಮಯ್ಯನವರ ನಡೆ, ರಾಜಕೀಯ ಗುಲಾಮಗಿರಿಯ ಸಂಕೇತ ಎಂದು ಮಾಜಿ ಸಚಿವ ಸಿ.ಟಿ. ರವಿ ವಾಗ್ದಾಳಿ ನಡೆಸಿದ್ದಾರೆ.

ನಗರದ ಬೋಳರಾಮೇಶ್ವರ ದೇಗುಲದ ಬಳಿ ದತ್ತಜಯಂತಿಯ ಮೊದಲ ದಿನದ ಅನುಸೂಯ ಜಯಂತಿ ಕಾರ್ಯಕ್ರಮಕ್ಕೆ ಆಗಮಿಸಿದ್ದ ವೇಳೆ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಈ ವೇಳೆ, ಸಿದ್ದರಾಮಯ್ಯನವರು ಕೇರಳದ ವಯನಾಡಿನಲ್ಲಿ 100 ಮನೆ ಕಟ್ಟಿಸಿ ಕೊಡುತ್ತೇವೆ ಎಂದು ಪತ್ರ ಬರೆದಿರುವ ವಿಚಾರವಾಗಿ ತೀವ್ರ ಆಕ್ರೋಶ ಹೊರಹಾಕಿದ್ದಾರೆ. ಇಡೀ ಅಖಂಡ ಭಾರತ ಒಂದು. ಇಡೀ ವಿಶ್ವವೇ ಒಂದು ಮನೆ ಎಂಬ ಉದಾತ್ತ ಮನೋಭಾವನೆ ಹೊಂದಿರುವವರು ನಾವು. ಅಕ್ಕಪಕ್ಕದವರಿಗೆ ಸಹಾಯ ಮಾಡುವುದು ತಪ್ಪಲ್ಲ. ಆದರೆ, ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ ಗಾಂಧಿ ಪ್ರತಿನಿಧಿಸುವ ಕ್ಷೇತ್ರ ಎಂದು ಜಿಲ್ಲೆಗೆ ಮಾತ್ರ ಈ ರೀತಿ ಮನೆ ನೀಡಲು ಮುಂದಾಗಿರುವುದು ರಾಜಕೀಯ ಗುಲಾಮಗಿರಿಯ ಸಂಕೇತವಾಗಿದೆ ಎಂದು ಅವರು ಕುಟುಕಿದ್ದಾರೆ.

ರಾಜ್ಯದ ರೈತರಿಗೆ ಸೂಕ್ತ ಪರಿಹಾರ ನೀಡಿಲ್ಲ. ಇಲ್ಲಿಯ ಸಂತ್ರಸ್ತರು ಬೀದಿಯಲ್ಲಿದ್ದಾರೆ. ಇಲ್ಲಿಯವರನ್ನು ಬಿಟ್ಟು ಅಲ್ಲಿಯವರಿಗೆ ಸಹಾಯ ಮಾಡುವುದು ರಾಜಕೀಯದ ಗುಲಾಮಗಿರಿ. ಕನ್ನಡಿಗರ ಕಷ್ಟಕ್ಕೆ ಸ್ಪಂದಿಸದೆ, ಕನ್ನಡಿಗರ ತೆರಿಗೆ ಹಣವನ್ನು ಅಲ್ಲಿ ವಿನಿಯೋಗಿಸುವುದು ಎಷ್ಟರ ಮಟ್ಟಿಗೆ ಸರಿ? ರಾಜ್ಯದ ಜನರ ಸಂಕಷ್ಟಗಳನ್ನ ಕಡೆಗಣಿಸಿ ಖರ್ಚು ಮಾಡುವುದು ಸೂಕ್ತವಾದ ನಡವಳಿಕೆ ಅಲ್ಲ ಎಂದಿದ್ದಾರೆ.

ಪ್ರಧಾನಿ ಮೋದಿ ಕನಸು ಅನಾವರಣಗೊಳಿಸಿದ ಹೆಚ್‌ಡಿಕೆ

- ಉದಯವಾಹಿನಿ, ನವದೆಹಲಿ

ಉಕ್ಕು ಕ್ಷೇತ್ರದಲ್ಲಿ ಹಸಿರು ಕ್ರಾಂತಿ ಮಾಡುವ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿಯವರ ಕನಸಿನ ಕೂಸಾದ 'ಸಾಂಸ್ಥಿಕ ರಚನೆಗಳ ವೈಜ್ಞಾನಿಕ ವರ್ಗೀಕರಣ' ವರದಿಯನ್ನು ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಬಿಡುಗಡೆಗೊಳಿಸಿದರು.

ಉಕ್ಕು ಸಚಿವಾಲಯ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪರಿಸರ'ಪೂರಕವಾದ ಗ್ರೀನ್ ಸ್ಟೀಲ್ ತಯಾರಿಕೆಗೆ ಪ್ರಾಮುಖ್ಯತೆ ನೀಡಲು ವರದಿಯನ್ನು ಬಿಡುಗಡೆಗೊಳಿಸಿ ಮಾತನಾಡಿದರು. ಭಾರತವು ಪರಿಸರ ರಕ್ಷಣೆಗೆ ಎಲ್ಲಾ ಉಪಕ್ರಮಗಳನ್ನು ಕೈಗೊಂಡಿದೆ. ಪ್ರಧಾನಿ ಮೋದಿ ಅವರು ಈ ನಿಟ್ಟಿನಲ್ಲಿ ಹೆಚ್ಚು ಒತ್ತಾಸೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಟ್ಯಾಕ್ಸಾನಮಿಯನ್ನು ಬಿಡುಗಡೆಗೊಳಿಸಲಾಗಿದೆ. ಇದು ದೇಶದ ಅತ್ಯಂತ ಪ್ರಮುಖ ಉದ್ಯಮಗಳಲ್ಲಿ ಒಂದಾದ ಉಕ್ಕು ಉದ್ಯಮದ ಸುಸ್ಥಿರತೆಯನ್ನು ವೃದ್ಧಿಸುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆಯಾಗಿದೆ. ಟ್ಯಾಕ್ಸಾನಮಿ ಬಿಡುಗಡೆಯು ಒಂದು ಐತಿಹಾಸಿಕ ಹೆಜ್ಜೆ ಎಂದು ನಾನು ಹೇಳಬಯಸುತ್ತೇನೆ. ಏಕೆಂದರೆ, ಇದು ಉಕ್ಕಿನ ಉತ್ಪಾದನೆಯನ್ನು ಸಂಪೂರ್ಣವಾಗಿ ಮಾಲಿನ್ಯ ಮುಕ್ತಗೊಳಿಸಲು ಸಮಗ್ರವಾಗಿ ಕೆಲಸ ಮಾಡುತ್ತದೆ. ಅಲ್ಲದೆ, ಪರಿಸರಕ್ಕೆ ಪೂರಕವಾಗಿ ಹೊಣೆಗಾರಿಕೆಯನ್ನು ಉತ್ತೇಜಿಸುವ ಕಾರ್ಯವನ್ನೂ ಮಾಡುತ್ತದೆ ಎಂದು ಹೇಳಿದರು. ಪ್ರಧಾನಿಯವರ ನಾಯಕತ್ವದಲ್ಲಿ ಭಾರತದ ಉಕ್ಕಿನ ಕ್ಷೇತ್ರವು ತನ್ನ ಬೆಳವಣಿಗೆಯ ಪಥವನ್ನು ಮತ್ತಷ್ಟು ವಿಸ್ತೃತಗೊಳಿಸಿಕೊಂಡು, ಸುಸ್ಥಿರ ಜಾಗತಿಕ ಪರಿವರ್ತನೆಗೆ ನಾಂದಿ ಹಾಡಿದೆ. ಅಲ್ಲದೆ, ಜಾಗತಿಕ ಮಟ್ಟದಲ್ಲಿ ಭಾರತವು ನಿರ್ಣಾಯಕ ಪಾತ್ರ ವಹಿಸುತ್ತಿದೆ. ರಾಷ್ಟ್ರೀಯ ಗ್ರೀನ್ ಸ್ಟೀಲ್ ಮಿಷನ್‌ನ ಕಾರ್ಯಸೂಚಿಯ ಪ್ರಕಾರ, ಹೈಡ್ರೋಜನ್ ಆಧಾರಿತ ಉಕ್ಕು ಉತ್ಪಾದನೆ ಮತ್ತು ಇಂಗಾಲ ಹೊರಸೂಸುವಿಕೆಯನ್ನು ಶೂನ್ಯ ಮಟ್ಟಕ್ಕೆ ತರುವುದು. ಸುಸ್ಥಿರ ಅಭಿವೃದ್ಧಿಗೆ ಹಸಿರು ಪೂರಕ ತಂತ್ರಜ್ಞಾನಗಳನ್ನು ಉತ್ತೇಜಿಸುವುದು. ಉಕ್ಕಿನ ಮರುಬಳಕೆ ಹೆಚ್ಚಳ ಮಾಡುವುದು ಮತ್ತು ಉತ್ತೇಜಿಸುವುದು. ಉಕ್ಕಿನ ಸುಸ್ಥಿರ ಉತ್ಪಾದನೆಗೆ ಹಾಗೂ ಸಂಶೋಧನೆ ಅ

ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

ವಿವಾದಿತ ಮಂದಿರ ಮಸೀದಿಗಳು

ಹನ್ನೆರಡನೆಯದಾಗಿ ಮಾಲ್ದಾದ ಆದಿನಾ ಮಸೀದಿ. ಪಶ್ಚಿಮ ಬಂಗಾಳದಲ್ಲಿನ ಈ ಮಸೀದಿಯನ್ನು 1374 ರಲ್ಲಿ ಸಿಕಂದರ್ ಷಾ ನಿರ್ಮಿಸಿದನೆಂದು ಹೇಳಲಾಗುತ್ತಿದೆ. ಆದರೆ ಇದು ಮೊದಲು ಹಿಂದುಗಳ ಆದಿನಾಥ ಮಂದಿರವಾಗಿತ್ತು ಎಂಬ ವಾದವಿದೆ. ಈ ಮಸೀದಿಯಲ್ಲಿ ಹಿಂದು ದೇವತೆಗಳ ವಿಗ್ರಹ ಹಾಗೂ ಶಿವಲಿಂಗ ಪತ್ತೆಯಾಗಿರುವುದು ಈ ಅಭಿಪ್ರಾಯವನ್ನು ಬಲಪಡಿಸುತ್ತವೆ. ಹದಿಮೂರನೆಯದಾಗಿ ಅಹಮದಾಬಾದ್ ನ ಜಾಮಾ ಮಸೀದಿ. ಗುಜರಾತ್ ನಲ್ಲಿರುವ ಈ ಮಸೀದಿ ಮೊದಲು ಹಿಂದುಗಳ ಭದ್ರಕಾಳಿ ದೇವಸ್ಥಾನವಾಗಿತ್ತೆಂದೂ, ಒಂಭತ್ತನೇ ಶತಮಾನದಿಂದ ಹದಿನಾಲ್ಕನೇ ಶತಮಾನದವರೆಗೆ ಆಳಿದ ರಜಪೂತರು ಹಾಗೂ ರಾಜಸ್ಥಾನದ ಮಾಳ್ವರು ಈ ದೇವಸ್ಥಾನವನ್ನು ನಿರ್ಮಿಸಿದರೆಂದೂ, 1424 ರಿಂದ 1452 ರ ಅವಧಿಯಲ್ಲಿ ಮೊದಲನೇ ಅಹ್ಮದ್ ಷಾನ ಆಳ್ವಿಕೆಯಲ್ಲಿ ಈ ದೇವಸ್ಥಾನವು ಮಸೀದಿಯಾಗಿ ಮಾರ್ಪಟ್ಟಿತೆಂದೂ ನಂಬಲಾಗಿದೆ. ಅಹಮದಾಬಾದ್ ಗೆ ಮೊದಲು ಕರ್ಣಾವತಿ ಭದ್ರಾ ರಾಜನಗರ ಅಸಾವಲ್ ಎಂಬ ಹೆಸರುಗಳಿದ್ದವೆಂಬುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಡಿಸೆಂಬರ್ 13ರಿಂದ ರಾಜ್ಯ ಸಚಿವ ಸಂಪುಟ ಸಭೆಯ ಸಮಯ ಬದಲು.!

• ಉದಯವಾಹಿನಿ , ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಡಿಸೆಂಬರ್ 13ರ ಸಂಜೆ 6 ಗಂಟೆಗೆ ಮಹತ್ವದ ರಾಜ್ಯ ಸಚಿವ ಸಂಪುಟ ಸಭೆ ನಡೆಸಲು ಸಮಯ ನಿಗದಿಯಾಗಿದೆ. ದಿನಾಂಕ: 13.12.2024, ಶುಕ್ರವಾರ ಸಂಜೆ 4:00 ಗಂಟೆಗೆ ಬೆಳಗಾವಿಯ ಸುವರ್ಣ ವಿಧಾನ ಸೌಧದ ಸಚಿವ ಸಂಪುಟ ಸಭಾಮಂದಿರದಲ್ಲಿ ಕರೆಯಲಾಗಿದ್ದ 2024ನೇ ಸಾಲಿನ 26ನೇ ಸಚಿವ ಸಂಪುಟ ಸಭೆಯನ್ನು ಅದೇ ದಿನದಂದು ಸಂಜೆ 6:00 ಗಂಟೆಗೆ ಮುಂದೂಡಲಾಗಿದೆ.

ರಾಜ್ಯದಲ್ಲಿ ಆಂಟಿಬಯೋಟಿಕ್ಸ್ ದುರ್ಬಳಕೆ ತಡೆಗೆ ಮಹತ್ವದ ಕ್ರಮ

• ಉದಯವಾಹಿನಿ , ಬೆಂಗಳೂರು

ಆಂಟಿಬಯೋಟಿಕ್ಸ್ ದುರ್ಬಳಕೆ ತಡೆಗೆ ನಮ್ಮ ಸರ್ಕಾರ ಕಾರ್ಯಪ್ರವೃತ್ತವಾಗಿದೆ. ಈಗಾಗಲೇ ರಾಜ್ಯಾದ್ಯಂತ ವೈದ್ಯರ ಸಲಹೆ ಮತ್ತು ಚೀಟಿ ಇಲ್ಲದೆ ಔಷಧಿ ನೀಡಬಾರದು ಎಂಬುದು ಸೇರಿದಂತೆ ಮಹತ್ವದ ಮಾರ್ಗಸೂಚಿಗಳಿರುವ ಜಾಗೃತಿ ಫಲಕಗಳ ಅಳವಡಿಕೆ ಕಡ್ಡಾಯ ಮಾಡಲಾಗಿದೆ. ಇದನ್ನು ಕಟ್ಟುನಿಟ್ಟಾಗಿ ಅನುಸರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ಸಚಿವರು, ರಾಜ್ಯದ ಜನರ ಆರೋಗ್ಯ ರಕ್ಷಣೆಗೆ ನಮ್ಮ ಸರ್ಕಾರ ಬದ್ಧವಾಗಿದೆ. ಜನರಿಗೆ ತಲುಪುವ ಪ್ರತಿ ಆರೋಗ್ಯ ಸೇವೆಗಳಲ್ಲಿ ಎಲ್ಲಾ ರೀತಿಯ ಸುಧಾರಣೆಗು ಕ್ರಮ ಕೈಗೊಂಡಿದೆ. ಜನರ ಆರೋಗ್ಯ ಕಾಪಾಡುವ ಉದ್ದೇಶದಿಂದ ಮಿತಿಮೀರಿದ ಆಂಟಿಬಯೋಟಿಕ್ಸ್ ದುರ್ಬಳಕೆಗೆ ನಿಯಂತ್ರಣ ಹೇರಿದೆ. ಔಷಧಿ ಅಂಗಡಿಗಳಲ್ಲಿ ಆರೋಗ್ಯ ಇಲಾಖೆಯ ಜಾಗೃತಿ ಫಲಕಗಳನ್ನು ಕಡ್ಡಾಯವಾಗಿ ಅಳವಡಿಸಲಾಗಿದೆ. ಆಂಟಿಬಯೋಟಿಕ್ಸ್‌ಗಳನ್ನು ವೈದ್ಯರ ಸಲಹೆ ಹಾಗೂ ಚೀಟಿ ಇಲ್ಲದೆ ಜನರಿಗೆ ನೀಡಬಾರದು ಎಂಬುದು ಸೇರಿದಂತೆ ಅನೇಕ ಮಾರ್ಗಸೂಚಿಗಳನ್ನು ಈ ಜಾಗೃತಿ ಫಲಕಗಳು ಒಳಗೊಂಡಿವೆ ಎಂದು ಹೇಳಿದ್ದಾರೆ.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟನೆಗೆ ಸಿಎಂಗೆ ಅಧಿಕೃತ ಆಹ್ವಾನ

• ಉದಯವಾಹಿನಿ , ಬೆಂಗಳೂರು

ಮಂಡ್ಯದಲ್ಲಿ ಡಿಸೆಂಬರ್ 20 ರಿಂದ 22 ರವರೆಗೆ ನಡೆಯಲಿರುವ 87 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟನೆಗೆ ಮುಖ್ಯ ಮಂತ್ರಿ ಸಿದ್ದರಾಮಯ್ಯರವರನ್ನು ಕೃಷಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿಯವರು ಇಂದು ಅಧಿಕೃತವಾಗಿ ಆಹ್ವಾನಿಸಿದರು. ವ್ಯವಹಾರ ಕರ್ನಾಟಕ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಮಹೇಶ್ ಜೋಶಿ, ಸಚಿವರಾದ ಚಲುವರಾಯಸ್ವಾಮಿ ನೇತೃತ್ವದ ಜಿಲ್ಲಾಡಳಿತದ ನಿಯೋಗ ಸುವರ್ಣ ಸೌಧದಲ್ಲಿ ಸಿದ್ದರಾಮಯ್ಯ ಅವರನ್ನು ಸಾಹಿತ್ಯ ಸಮ್ಮೇಳನಕ್ಕೆ ಆಹ್ವಾನಿಸಿತು. ಬೆಳಗಾವಿಯ ಸುವರ್ಣಸೌಧದ ಮುಖ್ಯಮಂತ್ರಿಗಳ ಕಚೇರಿಯಲ್ಲಿ ಮುಖ್ಯಮಂತ್ರಿಗಳಿಗೆ ಆಹ್ವಾನ ನೀಡಿದ ಮಂಡ್ಯ ಜಿಲ್ಲಾಡಳಿತ ಹಾಗೂ ಮಂಡ್ಯ ಕ್ಷೇತ್ರದ ಶಾಸಕ ರವಿಕುಮಾರ್ ಗಣಿಗ, ಶ್ರೀರಂಗಪಟ್ಟಣ ಶಾಸಕ ರಮೇಶ್ ಬಂಡಿಸಿದ್ದೇಗೌಡ, ವಿಧಾನಪರಿಷತ್ ಸದಸ್ಯ ಮಧು ಮಾದೇಗೌಡ, ಕನ್ನಡ ಸಾಹಿತ್ಯ ಷರಿಷತ್ ಅಧ್ಯಕ್ಷ ಮಹೇಶ್ ಜೋಶಿ, ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್ ಸೇರಿದಂತೆ ಇತರ ಗಣ್ಯರು ಇದೇ ವೇಳೆ ಹಾಜರಿದ್ದರು..

ಹಿಂದುಳಿದ ವರ್ಗಗಳ ಮೀಸಲಾತಿಗೆ ಆಗ್ರಹ

• ಉದಯವಾಹಿನಿ , ಬೆಂಗಳೂರು

ಪಂಚಮಸಾಲಿ ಲಿಂಗಾಯತ ಸಮುದಾಯಕ್ಕೆ ಹಿಂದುಳಿದ ನ ವಾಣಿಜ್ಯ ವರ್ಗಗಳ 20 ಪಟ್ಟಿಗೆ ಸೇರಿಸಬೇಕು ಎಂದು ಆಗ್ರಹಿಸಿ ನಡೆಯುತ್ತಿರುವ ಪ್ರತಿಭಟನೆಗೆ ಪ್ರತಿಪಕ್ಷ ಬಿಜೆಪಿ ಬೆಂಬಲ ವ್ಯಕ್ತಪಡಿಸಿದ್ದು, ಹೋರಾಟ ಮತ್ತಷ್ಟು ತೀವ್ರಗೊಂಡಿದೆ. ಜಯಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಮೀಸಲಾತಿಗಾಗಿ ಹೋರಾಟ ನಡೆಯುತ್ತಿದ್ದು, ಮಂಗಳವಾರ ಪ್ರತಿಭಟನಾಕಾರರ ಮೇಲೆ ಲಾಠಿ ಚಾರ್ಜ್ ಮಾಡಲಾಗಿತ್ತು. ಪ್ರಸ್ತುತ ಪಂಚಮಸಾಲಿ ಲಿಂಗಾಯತರು ಪ್ರವರ್ಗ 3 ಬಿ ಮೀಸಲಾತಿಯನ್ನು ಪಡೆದುಕೊಳ್ಳುತ್ತಿದ್ದಾರೆ. ಈ ಸಮುದಾಯವನ್ನು ಪ್ರವರ್ಗ 2 ಎ ಗೆ ಬದಲಾಯಿಸಿ ಮೀಸಲಾತಿ ಕೊಡಬೇಕು ಎಂಬ ಬೇಡಿಕೆ ಇದೆ. ಇದಕ್ಕಾಗಿ ಸರ್ಕಾರದ ಮೇಲೆ ಒತ್ತಡ ತರುತ್ತಿದ್ದಾರೆ. ಪ್ರತಿಭಟನಾಕಾರರ ಮೇಲೆ ಪೊಲೀಸರ ಲಾಠಿ ಚಾರ್ಜ್ ವಿರೋಧಿಸಿ ಸುವರ್ಣಸೌಧದ ಬಳಿ ಇರುವ ಅಂಬೇಡ್ಕರ್ ಪ್ರತಿಮೆ ಎದುರು ವಿಪಕ್ಷ ನಾಯಕ ಆರ್, ಅಶೋಕ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ವಿಧಾಪರಿಷತ್ ವಿಪಕ್ಷ ನಾಯಕ ಚಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮತ್ತಿತರ ಅನೇಕ ಶಾಸಕರು, ವಿಧಾನಪರಿಷತ್ ಸದಸ್ಯರು ಪಾಲ್ಗೊಂಡರು.

ಆಸ್ತಿ ತೆರಿಗೆ ಕಟ್ಟಲು ನಿವಾಸಿಗಳ ನಿರಾಕರಣೆ

• ಉದಯವಾಹಿನಿ , ಬೆಂಗಳೂರು

ಸರ್ಜಾಪುರ ರಸ್ತೆಯ ಹಾಲನಾಯಕನಹಳ್ಳಿ ನಿವಾಸಿಗಳಿಗೆ ಮಹತ್ವದ ದಿನವಾಗಿದೆ. ಸುಮಾರು ಆರು ವರ್ಷಗಳಿಂದ ಹದಗೆಟ್ಟಿದ್ದ ರಸ್ತೆ ಸರಿಪಡಿಸುವಂತೆ ನಿರಂತರ ಒತ್ತಾಯದ ನಂತರ 3 ಕಿ. ಮೀ ರಸ್ತೆಯಲ್ಲಿದ್ದ 250 ಗುಂಡಿಗಳನ್ನು ಮೂರು ದಿನಗಳ ಕೆಲಸದ ಬಳಿಕ ಮುಚ್ಚಲಾಗಿದೆ. ಆಸ್ತಿ ತೆರಿಗೆ ಕಟ್ಟುವುದಿಲ್ಲ ಎಂಬ ನಾಗರಿಕರಿಂದ ಬೆದರಿಕೆ ಬಂದ ಹಿನ್ನೆಲೆಯಲ್ಲಿ ಹಾಲನಾಯಕನಹಳ್ಳಿ ಪಂಚಾಯಿತಿಯ 15 ಸದಸ್ಯರು ತಮ್ಮ ಜೇಬಿನಿಂದ ಸುಮಾರು 5 ಲಕ್ಷ ರೂ. ಪಾವತಿಸಿದ್ದಾರೆ. ಖಾಸಗಿ ಬಿಲ್ಡರ್ ಆದರ್ಶ್ ಬಿಲ್ಡರ್ಸ್ ಜನರಿಗಾಗಿ ಉಚಿತವಾಗಿ ಡಾಂಬರೀಕರಣ ಮಾಡಿರುವುದಾಗಿ ಸ್ಥಳೀಯರು ಹೇಳುತ್ತಾರೆ. ದೊಡ್ಡಕನಹಳ್ಳಿ-ಚಿಕ್ಕನಾಯಕನಹಳ್ಳಿ ಮುಖ್ಯರಸ್ತೆ ಎಂದು ಕರೆಯಲ್ಪಡುವ ಈ ರಸ್ತೆಯು ವೈಟ್ ಫೀಲ್ಡ್, ಬೆಳ್ಳಂದೂರಿನಿಂದ ಗಟಹಳ್ಳಿ ಮೂಲಕ ಎಲೆಕ್ಟ್ರಾನಿಕ್ ಸಿಟಿಗೆ ಹೋಗುವ ಶಾರ್ಟ್ ಕಟ್ ಆಗಿದೆ. ಮಹಾದೇವಪುರ ವಲಯದಡಿ ಬರುವ ಇಲ್ಲಿ ಎಲ್ಲಾ ಬಿಬಿಎಂಪಿ ವಲಯಗಳಿಗಿಂತ ಅತಿ ಹೆಚ್ಚು ತೆರಿಗೆ ಪಾವತಿದಾರರು ಇದ್ದಾರೆ. ಇಲ್ಲಿರುವ ಸುಮಾರು 8,000 ಕುಟುಂಬಗಳಿಗಾಗಿ ರಸ್ತೆ ಬೇಡಿಕೆಯನ್ನು ಬೆಂಗಳೂರು ಪೂರ್ವ ನಾಗರಿಕ ಸಂಘಟನೆಯೊಂದು ಮೊದಲು ಆರಂಭಿಸಿತು. ಬಳಿಕ ಚಿಕ್ಕ ಸ್ವಯಂ ಸೇವಾ ಸಂಸ್ಥೆಗಳು ಕೂಡಾ ಇದಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದವು.

ಶಿಸ್ತು ಸಮಿತಿಗೆ ವಿವರಣೆ ನೀಡಿದ ನಂತರವೂ ಸುಮ್ಮನಿಲ್ಲ ಯತ್ನಾಳ್

ಬಿ.ಎಸ್. ಯಡಿಯೂರಪ್ಪ, ವಿಜಯೇಂದ್ರ ವಿರುದ್ಧ ಭಿನ್ನಮತೀಯರನ್ನು ಒಗ್ಗೂಡಿಸುತ್ತಿರುವ ಯತ್ನಾಳ್

• ಉದಯವಾಹಿನಿ , ಬೆಂಗಳೂರು

ಬಸನಗೌಡ ರಾಮನಗೌಡ ಪಾಟೀಲ ಯತ್ನಾಳ್ ಹೊಂದಾಣಿಕೆ ಮಾಡಿಕೊಳ್ಳುವ ರಾಜಕಾರಣಿ ಅಲ್ಲವೇ ಅಲ್ಲ. ಇದು ಅವರ ಸಮೀಪವರ್ತಿಗಳ ಅನಿಸಿಕೆ ಮಾತ್ರವಲ್ಲ, ವಿರೋಧಿಗಳ ಅಭಿಪ್ರಾಯವೂ ಹೌದು ನಾಲ್ಕು ಬಾರಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಮತ್ತು ಅವರ ಪುತ್ರ ಬಿಜೆಪಿ ರಾಜ್ಯ ಅಧ್ಯಕ್ಷ ಬಿ ವೈ ವಿಜಯೇಂದ್ರ ವಿರುದ್ಧ ಕಳೆದ ಹಲವು ದಿನಗಳಿಂದ ಸಮರ ಸಾರಿದ್ದಾರೆ. ಇದಕ್ಕಾಗಿ ಯತ್ನಾಳ್‌ಗೆ ಶೋಕಾಸ್ ನೋಟಿಸ್ ನೀಡಲಾಗಿದೆ. ಕೇಂದ್ರ ಶಿಸ್ತು ಸಮಿತಿಗೆ ವಿವರಣೆ ನೀಡಿದ ನಂತರವೂ ಸುಮ್ಮನಿಲ್ಲ ರಾಜ್ಯದಲ್ಲಿ ಬಿಜೆಪಿ ಅಧಿಕಾರ ರಚಿಸಬೇಕು ಮತ್ತು ಒಬ್ಬ ಪ್ರಾಮಾಣಿಕ ವ್ಯಕ್ತಿ ಮುಖ್ಯಮಂತ್ರಿಯಾಗಬೇಕು.

ಆತ ಭ್ರಷ್ಟನಾಗಿರಬಾರದು ಮತ್ತು ವಂಶಪಾರಂಪರ್ಯದಿಂದ ಬಂದಿರಬಾರದು ಎಂದು ಪರೋಕ್ಷವಾಗಿ ವಿಜಯೇಂದ್ರ ಮುಖ್ಯಮಂತ್ರಿ ಆಗಬಾರದು ಎಂದು ಗುಡುಗಿದ್ದಾರೆ.

ಯಡಿಯೂರಪ್ಪ ಮತ್ತು ಅವರ ಪುತ್ರ ವಿಜಯೇಂದ್ರ ಅವರನ್ನು ಗುರಿಯಾಗಿಸಿಕೊಂಡು ಯತ್ನಾಳ್ ಟೀಕೆ ಮಾಡುತ್ತಿರುವುದು ಇದೇ ಮೊದಲಲ್ಲ. ಯಡಿಯೂರಪ್ಪ ವಿರುದ್ಧ ಸದಾ ವಾಗ್ದಾಳಿ ನಡೆಸಲು ಯತ್ನಾಳ್ ಹಿಂದೆ ಬಿಜೆಪಿ ಕೇಂದ್ರ ವರಿಷ್ಠರು ಇದ್ದಾರೆ ಎಂಬ ಸಂಶಯ ಬಾರದೆ ಇರದು. ಸಂಘ ಪರಿವಾರದ ಹಿನ್ನೆಲೆ ಇರುವ ಹಿಂದುತ್ವದ ಪ್ರಖರವಾದಿ, ಲಿಂಗಾಯತ ನಾಯಕ

ಉದಯವಾಹಿನಿ ಚಿತ್ರ

ಮತ್ತು ಮಾಜಿ ಕೇಂದ್ರ ಸಚಿವರೂ ಆದ ಯತ್ನಾಳ್ ಅವರನ್ನು ಉಚ್ಚಾಟಿಸುವುದು ಅಷ್ಟು ಸುಲಭದ ಕೆಲಸ ಅಲ್ಲ. 2019 ರಲ್ಲಿ ಪ್ರವಾಹ ಪರಿಸ್ಥಿತಿ ಎದುರಾದಾಗ ಕೇಂದ್ರ ನೆರವು ನೀಡುವುದು ತಡವಾಗಿತ್ತು. ಆಗ ಯತ್ನಾಳ್, ಪ್ರಧಾನಿ ಮೋದಿ ವಿರುದ್ಧವೇ ಗುಡುಗಿದ್ದರು. ಆಗಲೂ ಯತ್ನಾಳ್ ಗೆ ನೋಟಿಸ್ ನೀಡಲಾಗಿತ್ತಾದರೂ ಅದು ಅಂತಹ ಗಂಭೀರ ಪರಿಣಾಮವನ್ನೇನೂ ಬೀರಿರಲಿಲ್ಲ. ವಿಡಿಯೊ ನಾನು ಯಾರೊಬ್ಬರಿಗೂ ಹೆದರುವುದಿಲ್ಲ.

ನನ್ನ ಮೂರು ದಶಕಗಳ ಸಾರ್ವಜನಿಕ ಬದುಕಿನಲ್ಲಿ ಜನರಿಗಾಗಿ ಮತ್ತು ಅಭಿವೃದ್ಧಿಗಾಗಿ ಮಾತನಾಡುತ್ತೇನೆ ಎಂದು ತಮ್ಮ ವಿವಾದಾತ್ಮಕ ಹೇಳಿಕೆಗಳನ್ನು ಸಮರ್ಥಿಸಿಕೊಳ್ಳುತ್ತಾ ಬಂದಿದ್ದಾರೆ. ಉತ್ತರ ಪ್ರದೇಶಯೋಗಿ ಆದಿತ್ಯನಾಥ ರೀತಿಯಲ್ಲೇ ಯತ್ನಾಳ್ ಸಹ ಪ್ರಚೋದಕ ಹೇಳಿಕೆಗಳಿಂದಲೇ ಪ್ರಚಾರಕ್ಕೆ

> ವಾಜಪೇಯಿ ಅವರು 2002ರಲ್ಲಿ ಯತ್ನಾಳ್ ಅವರನ್ನು ತಮ್ಮ ಸಂಪುಟಕ್ಕೆ ಸೇರ್ಪಡೆ ಮಾಡಿಕೊಂಡಿದ್ದರು. - ವೀಡಿಯೊ ಇಂತಹ ಫೈರ್ ಬ್ರಾಂಡ್ ಯತ್ನಾಳ್ ಅವರನ್ನು ಮಂತ್ರಿ ಮಾಡುವುದರ ಹಿಂದೆ ದಿವಂಗತ ಅನಂತಕುಮಾರ್ ಅವರ ಬಲವೂ ಇತ್ತು.ಯಡಿಯೂರಪ್ಪ ಅವರಿಗೆ ಪರ್ಯಾಯವಾಗಿ ಮತ್ತೊಬ್ಬ ವೀರಶೈವ ಲಿಂಗಾಯತ ನಾಯಕನನ್ನು ಯತ್ನಾಳ್ ಅವರಲ್ಲಿ ಕಂಡಿದ್ದರು.

ಕ್ಷೇತ್ರದಿಂದ ಮೊದಲ ಬಾರಿಗೆ ಶಾಸನ ಸಭೆಗೆ ಆಯ್ಕೆ

ಬಂದಿದ್ದಾರೆ. 1994ರಲ್ಲಿ ಬಿಜಾಪುರ ನಗರ ಕ್ಷೇತ್ರದಿಂದ ಮೊದಲ ಬಾರಿಗೆ ಶಾಸನ ಸಭೆಗೆ ಆಯ್ಕೆಯಾಗಿದ್ದರು.1999ರಲ್ಲಿ ಲೋಕಸಭೆಗೆ ಆಯ್ಕೆಯಾದರು.

ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ನಿಲ್ಲಿಸಬೇಕು ಎಂದು ಅಂದಿನ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಕೇಂದ್ರದ ಮೇಲೆ ಒತ್ತಡ ಹೇರಿ ಎನ್ ಡಿಎ ಒಕ್ಕೂಟದಿಂದ ಹೊರಬರುವುದಾಗಿ ಘೋಷಿಸಿದ್ದರು. ಆಗ ಯತ್ನಾಳ್ ತಮ್ಮ ಲೋಕಸಭಾ ಸ್ಥಾನಕ್ಕೆ ರಾಜೀನಾಮೆ ನೀಡುವ ಬೆದರಿಕೆ ಹಾಕಿದ್ದರು. ಪಕ್ಷ ವಿರೋಧಿ ಚಟುವಟಿಕೆಗಳಿಗಾಗಿ ಯತ್ನಾಳ್ ಅವರನ್ನು ಬಿಜೆಪಿ 2010 ಮತ್ತು

> ವಿಪಕ್ಷಗಳ ನಾಯಕರು ಯತ್ನಾಳ್ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸುತ್ತಾರೋ ಇಲ್ಲವೋ, ಆದರೆ ಅವರ ಅಭಿಮಾನಿಗಳು ಹಿಂದೂ ಹುಲಿ ಎಂದು ಕರೆಯುವುದನ್ನು ಬಿಟ್ಟಿಲ್ಲ. ಯತ್ನಾಳ್ ಹಿಂದೂಗಳಿಗೆ ಮಾತ್ರ ಕೆಲಸ ಮಾಡಿ ಮುಸಲ್ಮಾನರಿಗೆ ಅಲ್ಲ ಎಂದು ಪಾಲಿಕೆ ಸದಸ್ಯರಿಗೆ ಕರೆ ನೀಡಿದ್ದರು. ಬುದ್ಧಿಜೀವಿಗಳಿಗೆ ಗುಂಡು ಹೊಡೆಯಬೇಕು ಎಂದೂ ಹೇಳಿಕೆ ನೀಡಿದ್ದರು.

2015ರಲ್ಲಿ ಎರಡು ಬಾರಿ ಉಚ್ಚಾಟಿಸಲಾಗಿತ್ತು. 2010ರಲ್ಲಿ ಉಚ್ಚಾಟಿಸಿದಾಗ ಯತ್ನಾಳ್ ಜೆಡಿಎಸ್ ಸೇರ್ಪಡೆಯಾಗಿದ್ದರು. ಮೂರು ವರ್ಷಗಳ ನಂತರ 2013ರಲ್ಲಿ ಬಿಜೆಪಿಗೆ ಮರಳಿದ್ದರು. 2015ರಲ್ಲಿ ವಿಧಾನಪರಿಷತ್ ಚುನಾವಣೆಗೆ ಪಕ್ಷದ ರೆಬೆಲ್ ಅಭ್ಯರ್ಥಿಯಾಗಿ ಸ್ಪರ್ಧಿಸಿದಾಗ ಅವರನ್ನು ಉಚ್ಚಾಟಿಸಲಾಗಿತ್ತು. ಆದರೂ ಯತ್ನಾಳ್ ಗೆಲುವು ಸಾಧಿಸಿದ್ದರು. ಒಂದು ಕಾಲದಲ್ಲಿ ಬಿಜೆಪಿ ನಾಯಕರು ಮಾತನಾಡಲು ಹೆದರುತ್ತಿದ್ದ ಕಾಲದಲ್ಲಿ ಯತ್ನಾಳ್ ಧೈರ್ಯವಾಗಿ ಮಾತನಾಡುತ್ತಿದ್ದರು. ಆ ಪಟ್ಟಿಗೆ ರಮೇಶ್ ಜಾರಕಿಹೊಳಿ, ಅರವಿಂದ ಲಿಂಬಾವಳಿ, ಕುಮಾರ್ ಬಂಗಾರಪ್ಪ, ಪ್ರತಾಪ್ ಸಿಂಹ, ಜಿಎಂ ಸಿದ್ದೇಶ್ವರ್ ಮೊದಲಾದವರು ಸೇರ್ಪಡೆಯಾಗಿದ್ದಾರೆ.

ರೈತರೇ ತಪ್ಪದೇ ಕೃಷಿ ಬೆಳೆಗಳಿಗೆ ವಿಮೆ ಮಾಡಿಸಿಕೊಳ್ಳಿ!

• ಉದಯವಾಹಿನಿ , ಬೆಂಗಳೂರು

ಪುಸ್ತಕ ಸಾಲಿನ ಹಿಂಗಾರು ಹಂಗಾಮಿಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ಕೃಷಿ ಬೆಳೆಗಳಿಗೆ ವಿಮೆ ನೋಂದಣಿ ಪ್ರಾರಂಭಿಸಿದ್ದು ರೈತರು ತಮ್ಮ ವಿವಿಧ ಕೃಷಿ ಬೆಳೆಗಳಿಗೆ ಬೆಳೆ ವಿಮೆ ಮಾಡಿಕೊಳ್ಳಬೇಕು. ರೈತರಿಗೆ ನೈಸರ್ಗಿಕ ಪ್ರಕೃತಿ ವಿಕೋಪಗಳಿಂದಾಗಿ ಬೆಳೆ ಹಾನಿಯಾದರೆ ವಿಮಾ ಯೋಜನೆಯಿಂದ ರೈತರಿಗೆ ಬಹಳಷ್ಟು ಅನುಕೂಲವಾಗುತ್ತದೆ.

ನೋಂದಣಿ ಕುಸುಮೆ, ಜೋಳ, ಸೂರ್ಯಕಾಂತಿ, ಮೆಕ್ಕೆ ಜೋಳ ಬೆಳೆಗಳಿಗೆ ಡಿ.16 ಕೊನೆಯ ದಿನ. ಕಡಲೆ ಬೆಳೆಗೆ ಡಿ.31 ಕೊನೆಯ ದಿನವಾಗಿದೆ. ಬೆಳೆಗಳ ವಿಮೆ ನೋಂದಣಿಗೆ ತಾಲ್ಲೂಕು, ಹೋಬಳಿ, ಗ್ರಾಮ ಪಂಚಾಯತಿಗಳಿಗೆ ನಿಗದಿ ಪಡಿಸಿದ್ದು, ನಿಗದಿತ ಘಟಕದಲ್ಲಿ ಬೆಳೆ ನೋಂದಣಿ ಮಾಡಲಾಗುವುದು. ಬೆಳೆ ವಿಮೆ ನೋಂದಣಿಗಾಗಿ

ಉದಯವಾಹಿನಿ ಚಿತ್ರ

ಹತ್ತಿರದ ಸಾಮಾನ್ಯ ಸೇವಾ ಕೇಂದ್ರ, ಗ್ರಾಮ ಓನ್ ಕೇಂದ್ರ, ರೈತರು ತಮ್ಮ ವ್ಯವಹಾರದ ಬ್ಯಾಂಕ್ಗಳಿಗೆ ಸಂಪರ್ಕಿಸಬಹುದು.

ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯ ಹೆಚ್ಚಿನ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ವಿಮಾ ಸಂಸ್ಥೆಯ ತಾಲ್ಲೂಕು ಪ್ರತಿನಿಧಿಗೆ (7996453241) ಸಂಪರ್ಕಿಸಬಹುದು ಎಂದು ಸಹಾಯಕ ಕೃಷಿ ನಿರ್ದೇಶಕ ದಯಾನಂದ.ಎ ಅವರು ತಿಳಿಸಿದ್ದಾರೆ.

ಡ್ರೋನ್ ಪ್ರತಾಪ್ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಆಗ್ರಹ

• ಉದಯವಾಹಿನಿ , ಬೆಂಗಳೂರು

ಕನ್ನಡದ ಜನಪ್ರಿಯ ರಿಯಾಲಿಟಿ ಶೋ ಬಿಗ್‌ಬಾಸ್ ಸೀಸನ್ 10ರ ರನ್ನರ್ ಅಪ್‌ಡ್ರೋನ್ ಪ್ರತಾಪ್ ಇತ್ತೀಚಿನ ದಿನಗಳಲ್ಲಿ ತುಂಬಾ ಸದ್ದು ಮಾಡುತ್ತಿದ್ದು, ಕೆಲ ದಿನಗಳ ಹಿಂದಷ್ಟೇ ತಾವು ನಾಯಕನಾಗಿ ನಟಿಸುತ್ತಿರುವುದಾಗಿ ಘೋಷಿಸಿದ್ದರು.

ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯ ಆಯಕ್ಟಿವ್ ಆಗಿರುವ ಪ್ರತಾಪ್ ಇದೀಗ ತಾವು ಮಾಡಿರುವ ಒಂದು ಕೆಲಸದಿಂದ ಜ

ಉಚಿತ ನಿವೇಶನ ಹಂಚಿಕೆ ರಾಜಕೀಯ: ಡಾ. ಎಂ.ಸಿ. ಸುಧಾಕರ್

● ವಸತಿ ಯೋಜನೆಯಡಿ ಜಿಲ್ಲಾ ಕೇಂದ್ರದಲ್ಲಿನ ನಿವಾಸಿಗಳಿಗೆ ಉಚಿತ ನಿವೇಶನ ವಿತರಣೆ ಪ್ರಕ್ರಿಯೆಗೆ ತೊಡಕು

• ಉದಯವಾಹಿನಿ, ಚಿಕ್ಕಬಳ್ಳಾಪುರ

ನಿರಂತರ ರಾಜಕೀಯ ಗಲಾಟೆಯಿಂದಾಗಿ ವಸತಿ ಯೋಜನೆಯಡಿ ಜಿಲ್ಲಾ ಕೇಂದ್ರದಲ್ಲಿನ ನಿವಾಸಿಗಳಿಗೆ ಉಚಿತ ನಿವೇಶನ ವಿತರಣೆ ಪ್ರಕ್ರಿಯೆಗೆ ತೊಡಕಾಗಿದೆ.

ಬಡಜನರಿಗೆ ಸೂರು ಕಲ್ಪಿಸುವ ನಿಟ್ಟಿನಲ್ಲಿ ಹಕ್ಕುಪತ್ರ ಪಡೆದವರಿಗೆ ನಿವೇಶನಗಳನ್ನು ಬಹುಬೇಗ ವಿತರಿಸಿ ಎಂಬುದಾಗಿ ಸಂಸದ ಕೆ.ಸುಧಾಕರ್ ಮನವಿ ಮಾಡುತ್ತಿದ್ದಾರೆ.

ಇದಕ್ಕೆ ಶಾಸಕ ಪ್ರದೀಪ್ ಈಶ್ವರ್ ಈಗಾಗಲೇ ಚುನಾವಣಾ ದೃಷ್ಟಿಯಲ್ಲಿ ವಿತರಣೆಯ ಹಕ್ಕುಪತ್ರಗಳು ನಕಲಿ ಎನ್ನುತ್ತಿದ್ದರೆ, ಆತುರಾತುರವಾಗಿ ನಿವೇಶನಗಳ ಹಂಚಿಕೆಗೆ ಗುರುತಿಸಿದ ಜಾಗ ಯೋಗ್ಯವಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಸಿ. ಸುಧಾಕರ್ ಹೇಳುತ್ತಿದ್ದಾರೆ. ಹೀಗೆ ಬಿಜೆಪಿ ಮತ್ತು ಕಾಂಗ್ರೇಸ್ ನಾಯಕರ ನಡುವಿನ ಪರಸ್ಪರ ಸವಾಲುಗಳು, ಮಾತಿನ ಚಕಮಕಿ ಜೋರಾಗಿ ನಡೆಯುತ್ತಿದೆ. ಮತ್ತೊಂದಡೆ ವಸತಿರಹಿತರು ಸೌಲಭ್ಯಕ್ಕಾಗಿ ಚಾತಕ ಪಕ್ಷಿಗಳಂತೆ ಕಾಯುತ್ತಿದ್ದಾರೆ.

ಸಂಸದರಿಗೆ ಸಚಿವರ ಸವಾಲು: ಹಕ್ಕುಪತ್ರಗಳ ವಿತರಣೆ, ಗುರುತಿಸಿದ ಜಾಗ ಯೋಗ್ಯವಾಗಿರುವುದು, ಜನರಿಗೆ ಅನುಕೂಲ ವಿಚಾರವಾಗಿ ಖುದ್ದು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸುವ ಪ್ರವಾಸ ಕೈಗೊಳ್ಳುವ ಬಗ್ಗೆ ಸಂಸದ ಡಾ. ಕೆ.ಸುಧಾಕರ್ ಅವರಿಗೆ ಸಚಿವ ಡಾ. ಎಂ.ಸಿ. ಸುಧಾಕರ್ ಸವಾಲು ಹಾಕಿದ್ದಾರೆ.

ಸಂಸದರಿಗೆ ಸಚಿವರ ಸವಾಲು

ಒಳ್ಳೆಯ ಕೆಲಸಕ್ಕೆ ಅಭ್ಯಂತರವಿಲ್ಲ, ಆದರೆ, ಅವೈಜ್ಞಾನಿಕ ನಿರ್ಧಾರಗಳಿಗೆ ಸಮ್ಮತಿಸಲು ಆಗುವುದಿಲ್ಲ. ಸಂಸದರು ಒಪ್ಪಿದರೆ ಬಸ್‌ನಲ್ಲಿ ಜನರು ಮತ್ತು ಮಾಧ್ಯಮದವರೊಂದಿಗೆ ಸ್ಥಳಕ್ಕೆ ಕರೆದುಕೊಂಡು ಹೋಗಲಾಗುವುದು. ಅಲ್ಲಿ ಜಾಗ ಯೋಗ್ಯವಾಗಿರುವ ಬಗ್ಗೆ ಹೆಚ್ಚಿನ ಅಭಿಪ್ರಾಯ ವ್ಯಕ್ತವಾದರೆ ಒಪ್ಪಿಕೊಳ್ಳಲಾಗುವುದು. ಸಂಸದರು ಬರುತ್ತಾರಾ? ಎಂದು ಪ್ರಶ್ನಿಸಿದ್ದಾರೆ.

ಹಕ್ಕುಪತ್ರ ಪಡೆದಿದ್ದ ಫಲಾನುಭವಿಗಳು ಸ್ವಂತ ಸೂರಿನ ಸೌಲಭ್ಯ ಸಿಕ್ಕಿತೆಂದು ಸಂತಸಗೊಂಡಿದ್ದರು. ಆದರೆ, ಈಗ ಕೈಗೆ ಬಂದ ತುತ್ತು ಬಾಯಿಗೆ ಇಲ್ಲ ಎನ್ನುವ ಆತಂಕದಲ್ಲಿದ್ದಾರೆ. ಆಡಳಿತ ಪಕ್ಷದವರು ಫಲಾನುಭವಿಗಳ ಆಯ್ಕೆ ಬಗ್ಗೆ, ಹಲವು ಅನುಮಾನ ವ್ಯಕ್ತಪಡಿಸುತ್ತಿದ್ದಾರೆ. ಅನರ್ಹರ ಆಯ್ಕೆ, ಪ್ರಭಾವಿಗಳ ಪಾತ್ರ, ಬಡವರನ್ನು ಕೈಬಿಟ್ಟಿರುವುದು ಸೇರಿ ವಿವಿಧ ಆರೋಪ ಕೇಳಿ ಬಂದಿವೆ. ಇದರಿಂದ ಮತ್ತೆ ಹೊಸದಾಗಿ ಫಲಾನುಭವಿಗಳ ಆಯ್ಕೆ ಪಟ್ಟಿ ತಯಾರಿಸುವ ಲಕ್ಷಣಗಳು ಗೋಚರವಾಗುತ್ತಿವೆ. ಇದರಿಂದ ನಿವೇಶನ ಹಂಚಿಕೆಯ ಪ್ರಕ್ರಿಯೆ ಕೆಲಸ ಮತ್ತಷ್ಟು ವಿಳಂಬವಾಗಿ, ಫಲಾನುಭವಿಗಳು ಕಾಯಲೇಬೇಕಾಗುತ್ತದೆ ಎಂದು ಹೇಳಲಾಗುತ್ತಿದೆ. ಈ ಹಿಂದೆ ಜಿಲ್ಲೆಯಲ್ಲಿ 22 ಸಾವಿರ ನಿವೇಶನಗಳನ್ನು ವಿತರಿಸುವುದಾಗಿ ಘೋಷಿಸಿದ್ದು, ಆಯಾ ಕ್ಷೇತ್ರ ವ್ಯಾಪ್ತಿಯಲ್ಲಿ ಎಕರೆಗಟ್ಟಲೇ ಜಾಗವನ್ನು ಗುರುತಿಸಲಾಗಿದೆ. ಅದರಲ್ಲೂ ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ 10 ಸಾವಿರ ನಿವೇಶನ ಹಂಚಿಕೆಯ ಪ್ರಚಾರ ದೊಡ್ಡ ಸದ್ದು ಮಾಡಿದ್ದು ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೂಲಕ ಡಾ. ಕೆ.ಸುಧಾಕರ್ ಫಲಾನುಭವಿಗಳಿಗೆ ನಿವೇಶನ ಮಂಜೂರಾತಿ ಹಕ್ಕುಪತ್ರ ಕೊಡಿಸಿದ್ದರು.

ಆದರೆ, ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ಚುನಾವಣೆಯ ಬೆಳವಣಿಗೆ ಬಳಿಕ ಪ್ರಮಾಣಪತ್ರಗಳು ನಕಲಿ ಎಂಬುದಾಗಿ ಹೇಳುತ್ತಿದ್ದು, ಸ್ಥಳೀಯ ಜನಪ್ರತಿನಿಧಿಗಳ ಗಲಾಟೆ, ಒತ್ತಡದ ಹಿನ್ನೆಲೆಯಲ್ಲಿ ಅಧಿಕಾರಿಗಳು ಅಸಲಿತನದ ಬಗ್ಗೆ ಸ್ಪಷ್ಟನೆ ನೀಡುತ್ತಿಲ್ಲ. ಇತ್ತ ಸಂಸದರು, ಅತ್ತ ಉಸ್ತುವಾರಿ ಸಚಿವರು ಮತ್ತು ಶಾಸಕರ ಮಾತಿಗೆ ತಕ್ಕಂತೆ ತಲೆಯಾಡಿಸುತ್ತಿದ್ದಾರೆ. ಇದರ ವಿಚಾರವಾಗಿ ಸಭೆಗಳಲ್ಲಿ ಆಕ್ಷೇಪದ ಮಾತುಗಳು ಕೇಳಿ ಬಂದು ಇಕ್ಕಟ್ಟಿಗೆ ಸಿಲುಕುವಂತಾಗಿದೆ.

ಚಿಕ್ಕಬಳ್ಳಾಪುರವು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಮೀಪದಲ್ಲಿರುವುದರಿಂದ ಈ ಭಾಗದಲ್ಲಿ ಭೂಮಿಯ ಬೆಲೆಯು ದುಬಾರಿಯಾಗಿದೆ.

ಉದಯವಾಹಿನಿ ಚಿತ್ರ

ಒಳ್ಳೆಯ ಕೆಲಸಕ್ಕೆ ರಾಜಕೀಯ ಬಿಟ್ಟು ಎಲ್ಲರೂ ಸಹಕರಿಸಬೇಕು. ಜನರಿಗೆ ವಸತಿ ಯೋಜನೆ ಕಲ್ಪಿಸಿಕೊಟ್ಟರೆ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳಿಗೆ ಹೆಸರು ಬರುತ್ತದೆ. ಜಿಲ್ಲೆಯಲ್ಲಿ ವಸತಿ ಯೋಜನೆಗೆ ಜಮೀನನ್ನು ಮಂಜೂರು ಮಾಡಿಸಿಕೊಂಡು ಬಂದಿರುವುದರ ಹಿಂದೆ ದೊಡ್ಡ ಪರಿಶ್ರಮ ಇದೆ

-ಡಾ. ಕೆ.ಸುಧಾಕರ್, ಸಂಸದ

ಅಧಿಕಾರಿಗಳ ಅಸಡ್ಡೆ

ಒಂದು ನಿವೇಶನದ ದರವು (30X40) ಮಾರುಕಟ್ಟೆಯಲ್ಲಿ ಕನಿಷ್ಠ 20 ಲಕ್ಷ ರೂ. ಗಳಿಂದ ಗರಿಷ್ಠ 45 ಲಕ್ಷ ರೂ.ವರೆಗೂ ಇದೆ. ಹೊಸ ಬಡಾವಣೆ ನಿರ್ಮಾಣ ಜೋರಾಗಿದೆ. ಇದರ ನಡುವೆ ವಸತಿರಹಿತರ ಸಂಖ್ಯೆಯೂ ಹೆಚ್ಚಾಗುತ್ತಿದ್ದು ವಿವಿಧ ವಸತಿ ಯೋಜನೆಗಳಡಿ ಸ್ವಂತ ಮನೆ ಹೊಂದುವ ಆಸೆಯಲ್ಲಿ ಎದುರು ನೋಡುತ್ತಿದ್ದಾರೆ. ಆದರೆ, ಸ್ಥಳೀಯ ಜನಪ್ರತಿನಿಧಿಗಳ ರಾಜಕೀಯ ಲೆಕ್ಕಾಚಾರ ಮತ್ತು ಅಧಿಕಾರಿಗಳ ಅಸಡ್ಡೆ ಧೋರಣೆಯಿಂದ ಅರ್ಹರು ಸೌಲಭ್ಯದಿಂದ ವಂಚಿತರಾಗುವಂತಾಗಿದೆ.

ಹೆಸರಿಗಷ್ಟೇ ಬಸ್ ನಿಲ್ದಾಣ: ಬಸ್‌ಗಳೇ ಬರಲ್ಲ

• ಉದಯವಾಹಿನಿ, ಗುಡಿಬಂಡೆ

ತಾಲ್ಲೂಕು ಕೇಂದ್ರದಲ್ಲಿರುವ ಏಕೈಕ ಸಾರಿಗೆ ಬಸ್ ನಿಲ್ದಾಣ ನೋಡುವುದಕ್ಕೆ ಸ್ವಚ್ಛವಾಗಿ ಸುಂದರವಾಗಿ ಕಂಡರೂ, ಸಾರಿಗೆ ಬಸ್‌ಗಳೇ ಇಲ್ಲದೆ ಪಾಳು ಬಿದ್ದ ಮನೆಯಂತೆ ಕಾಣುತ್ತದೆ. ಗುಡಿಬಂಡೆ ತಾಲೂಕು ಡಾ.ನಂಜುಂಡಪ್ಪ ವರದಿಯಂತೆ ರಾಜ್ಯದಲ್ಲಿಯೇ ಅತಿ ಸಣ್ಣ ಮತ್ತು ಹಿಂದುಳಿದ ತಾಲ್ಲೂಕು ಆಗಿದ್ದು, ಸಾರಿಗೆ, ಶಿಕ್ಷಣ, ವೈದ್ಯಕೀಯ ಹಾಗೂ ಇನ್ನಿತರೆ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದೆ. ಗುಡಿಬಂಡೆ ತಾಲೂಕು ಆಂಧ್ರಪ್ರದೇಶ ರಾಜ್ಯಕ್ಕೆ ಅಂಟಿಕೊಂಡಿದ್ದರು, ಈ ಭಾಗದಿಂದ ಒಂದು ಸರ್ಕಾರಿ ಸಾರಿಗೆ ಸಂಪರ್ಕ ಸಹ ಇರುವುದಿಲ್ಲ. ಗುಡಿಬಂಡೆ ಮಾರ್ಗವಾಗಿ ಅಂತರರಾಜ್ಯ ರಾಜಧಾನಿ ಬೆಂಗಳೂರಿಗೆ ಮತ್ತು ಯಾತ್ರಸ್ಥಳಗಳಾದ ಧರ್ಮಸ್ಥಳ, ತಿರುಪತಿ, ಮೈಸೂರು ಇತರೆಡೆಗೆ ಕಾರ್ಯಾಚರಣೆಗೊಳ್ಳುತ್ತಿದ್ದ ಬಸ್‌ಗಳು ಒಂದೊಂದಾಗಿ ಸ್ಥಗಿತಗೊಳ್ಳುತ್ತಿವೆ. ಸಾಲು ಸಾಲು ಹಬ್ಬಗಳು ಮಂತ್ರಿ ಮಹೋದಯರ, ರಾಜಕೀಯ ಕಾರ್ಯಕ್ರಮಗಳು ಬಂದರೆ ಈ ಭಾಗದ ಬಸ್‌ಗಳು ಅಂದು ಹೇಳದೆ ಕೇಳದೆ ಕಾಣೆಯಾಗಿ, ದಿನನಿತ್ಯದ ಪಾಸ್ ಹೊಂದಿರುವ ವಿದ್ಯಾರ್ಥಿಗಳ, ಬೇರೆಡೆ ಕೆಲಸ ಮಾಡುವವರ ಮತ್ತು ಬಸ್‌ಗಳನ್ನೇ ನಂಬಿಕೊಂಡು ಓಡಾಡುವವರ ಪಾಡಂತು ಹೇಳ ತೀರದು.

ಉದಯವಾಹಿನಿ ಚಿತ್ರ

ಸುಮಾರು ದಶಕಗಳ ಹೋರಾಟದ ಫಲವಾಗಿ ಪಟ್ಟಣದಲ್ಲಿ ಒಂದು ಈ ಬ್ರೇಕಿಂಗ್ ಸುದ್ದಿ ಸುಸಜ್ಜಿತ ಬಸ್ ನಿಲ್ದಾಣವೇನೋ ನಿರ್ಮಿಸಿ ಲೋಕಾರ್ಪಣೆ ಮಾಡಿದ್ದಾರೆ. ಆದರೆ, ಇಂದು ಸಾರಿಗೆ ನಿಲ್ದಾಣದ ಕಟ್ಟಡ ಎಸ್‌ಬಿಐ ಬ್ಯಾಂಕ್ ಕಟ್ಟಡವಾಗಿ, ಹೊರ ಭಾಗದ ಬ್ಯಾಂಕಿಗೆ ನಡೆದುಕೊಂಡು ಹೋಗುವವರಿಗೆ ಸ್ವಲ್ಪ ಹೊತ್ತು ಕುಳಿತುಕೊಂಡು ಎದ್ದು ಹೋಗುವ ಆಶ್ರಯ ತಾಣವಾಗಿದೆಯೇ ಹೊರತು ಸಾರಿಗೆ ಬಸ್ ನಿಲ್ದಾಣವಂತೂ ಆಗಿಲ್ಲ ಎನ್ನುವುದು ಸ್ಥಳೀಯರ ಆರೋಪವಾಗಿದೆ.

ವೈದ್ಯೆಯಾಗಬೇಕೆಂಬ ಕನಸು ಹೊತ್ತಿದ್ದ ವಂದನಾಳ ದುರಂತ ಅಂತ್ಯ

• ಉದಯವಾಹಿನಿ, ಕೋಲಾರ

ಮುರುಡೇಶ್ವರ ಬೀಚ್ ನಲ್ಲಿ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಕೊತ್ತೂರು ಮೊರಾರ್ಜಿ ವಸತಿ ಶಾಲೆಯ ವಿದ್ಯಾರ್ಥಿನಿಯರು ಪ್ರವಾಸಕ್ಕೆ ಹೋದಾಗ ನಾಲ್ವರು ವಿದ್ಯಾರ್ಥಿನಿಯರು ಸಾವನ್ನಪ್ಪಿದ್ದಾರೆ. ವಿದ್ಯಾರ್ಥಿನಿಯರ ತವರೂರಿಗೆ ಅವರ ಮೃತದೇಹಗಳನ್ನು ರವಾನಿಸಲಾಗಿದೆ.

ಈಗ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ದೊಡ್ಡ ಗುಟ್ಟಳ್ಳಿ ಗ್ರಾಮದ ವಂದನಾ ಎಂಬ ವಿದ್ಯಾರ್ಥಿನಿ ವೈದ್ಯೆಯಾಗಿ ತನ್ನ ತಾಯಿಯನ್ನು ಸಾಕುವ ಕನಸು ಹೊತ್ತಿದ್ದಳು. ಆದರೆ ಮುಡೇಶ್ವರದಲ್ಲಿ ನಡೆದ ಆ ಒಂದು ಘಟನೆ ಅವಳ ಜೀವವನ್ನೇ ಬಲಿ ಪಡೆಯಿತು. ಹೌದು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ದೊಡ್ಡ ಗುಟ್ಟಳ್ಳಿ ನಿವಾಸಿಯಾದ ವಂದನಾ ಸಹೋದರಿ ಚಾಂದನಿ ಈ ಕುರಿತು ಹೇಳಿಕೆ ನೀಡಿದ್ದಾಳೆ, ಪ್ರವಾಸಕ್ಕೆ ಹೊರಡುವ ಒಂದು ವಾರ ಮೊದಲು ಅಪರಿಚಿತ ವಿದ್ಯಾರ್ಥಿನಿಯರ ಕೊಠಡಿಗೆ ನುಗ್ಗಿದ್ದ. ಕೊತ್ತೂರಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಅಪರಿಚಿತ ಒಬ್ಬ ನುಗ್ಗಿದ್ದ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಕೊತ್ತೂರು ಬಳಿ ಇರುವ ಮೊರಾರ್ಜಿ ವಸತಿ ಶಾಲೆ ಹೆಣ್ಣುಮಕ್ಕಳ ಕೊಠಡಿಗೆ ಅಪರಿಚಿತ ನುಗ್ಗಿದ್ದರ ಬಗ್ಗೆ ಪ್ರಾಂಶುಪಾಲೇಗೆ ದೂರು ನೀಡಲಾಗಿತ್ತು. ಆಗ ನನ್ನ ತಂಗಿ ವಂದನ ವಿರುದ್ಧವೇ ಪ್ರಿನ್ಸಿಪಾಲ್ ಶಶಿಕಲಾ ಆರೋಪ ಮಾಡಿದ್ದರು.

ಮೊರಾರ್ಜಿ ಶಾಲೆ ಪ್ರಿನ್ಸಿಪಾಲ್ ಶಶಿಕಲಾ ನಡೆಯಿಂದ ವಂದನ ಕುಗ್ಗಿ ಹೋಗಿದ್ದಳು. ನನ್ನ ತಾಯಿಯನ್ನು ಕೂಲಿ ಮಾಡಿಯಾದರೂ ಸಾಕುತ್ತೇನೆ ಎಂದು ವಂದನ ತಿಳಿಸಿದ್ದಳು.

ಚೆನ್ನಾಗಿ ಓದಿ ವೈದ್ಯೆಯಾಗಬೇಕು ಎಂದು ವಂದನ ಮಹದಾಸೆ ಹೊಂದಿದ್ದಳು. ಆದರೆ ಪ್ರವಾಸಕ್ಕೆ ಹೋಗಿ ಮುರುಡೇಶ್ವರದಲ್ಲಿ ಸತ್ತಿದ್ದಾಳೆ ಎಂದು ಸಹೋದರಿ ಚಾಂದನಿ ಕಣ್ಣೀರು ಹಾಕಿದ್ದಾಳೆ. ನನ್ನ ತಂದೆ ವಿಕಲಚೇತನ ತಾಯಿ ಒಂದು ಹಸು ಕಟ್ಟಿಕೊಂಡು ಮನೆ ನಿರ್ವಹಿಸುತ್ತಿದ್ದಾರೆ ನಮ್ಮ ತಾಯಿಯೇ ಇಡೀ ಕುಟುಂಬ ನಿರ್ವಹಣೆ ಮಾಡುತ್ತಿದ್ದಾರೆ.

ಬಹಳ ಕಷ್ಟದಲ್ಲಿ ನಮ್ಮ ಕುಟುಂಬಕ್ಕೆ ಯಾರೊಬ್ಬರೂ ಕೂಡ ಸಹಾಯ ಮಾಡಲಿಲ್ಲ. ವಸತಿ ಶಾಲೆಗೆ ಯಾರು ಅಕ್ರಮವಾಗಿ ಪ್ರವೇಶಿಸಿದಾಗ ಪ್ರಿನ್ಸಿಪಾಲ್ ವಂದನಾ ವಿರುದ್ಧ ಆರೋಪಿಸಿದ್ದಾರೆ. ಇದರಿಂದ ವಂದನ ಶಾಲೆಗೆ ರಜೆ ಹಾಕಿ ಊರಿಗೆ ಬಂದಿದ್ದಳು ವಂದನಾಗೆ ಧೈರ್ಯ ಹೇಳಿ ಡಿಸೆಂಬರ್ 31 ಮತ್ತೆ ನಾವು ಶಾಲೆಗೆ ಕಳುಹಿಸಿದೆವು. ಆದರೆ ಈ ಒಂದು ದುರಂತ ನಡೆಯುತ್ತಿದೆ ಎಂದು ಅಂದುಕೊಂಡಿರಲಿಲ್ಲ ಎಂದು ಕಣ್ಣೀರು ಹಾಕಿದಳು.

• ಉದಯವಾಹಿನಿ, ಹನೂರು

ನಗರಸಭೆ ಚಿಲ್ಲರೆ ಲಂಚಾವತಾರ: ಗುಬ್ಬಿ ಮೇಲೆ ಬ್ರಹ್ಮಾಸ್ತ್ರ

ಚಾಮರಾಜನಗ ಜಿಲ್ಲೆ ಶಾಪಗ್ರಸ್ತ ಜಿಲ್ಲೆಯೆಂಬ ಕಳಂಕವನ್ನು ತಮ್ಮ ಹಲವು ಭೇಟಿಗಳಿಂದ ಮುಕ್ತಗೊಳಿಸಿ ಚೆಲುವ ಚಾಮರಾಜನಗರ ಜಿಲ್ಲೆಯ ಹೆಸರನ್ನು ಉಳಿಸಿದ ಕೀರ್ತಿ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಸಲ್ಲಬೇಕು. ಜಿಲ್ಲಾ ಕೇಂದ್ರದ ಚಾಮರಾಜನಗರ ನಗರಸಭೆಯ ಲಂಚಾವತಾರ ಕೊನೆಗಾಣಿಸಲು ಸ್ವತಃ ಮುಖ್ಯಮಂತ್ರಿಗಳೇ ಬರಬೇಕಾಗಬಹುದೇನೋ..!? ಎಂಬುವಷ್ಟರ ಮಟ್ಟಿಗೆ ಮಿತ ಮೀರಿ ತಾಂಡವವಾಡುತ್ತಿದೆ ಭ್ರಷ್ಟಾಚಾರ.

ಜನನ ಪ್ರಮಾಣಪತ್ರಕ್ಕೆ 200 ರೂಪಾಯಿ ಪಡೆದ ಚಿಲ್ಲರೆ ಲಂಚಾವತಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಹೊರಗುತ್ತಿಗೆ ನೌಕರರೊಬ್ಬರನ್ನು ಅಮಾನತು ಮಾಡಿರುವುದು ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಹೂಡಿದಂತಿದೆ. ನಗರಸಭೆಯ ಹಿರಿಯ ಅಧಿಕಾರಿಯ ಗಮನಕ್ಕೆ ಬರದೆ ಇದೆಲ್ಲ ನಡೆಯಲು ಸಾಧ್ಯವೆ..? ಸಾರ್ವಜನಿಕರು ಲಂಚಾವತಾರದ ಬಗ್ಗೆ ಸಾಕ್ಷಾತ್ ವಿಡಿಯೋ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟು ಅದು ಮಾಧ್ಯಮದಲ್ಲಿ ವರದಿಯಾದ್ದರಿಂದ ಲಂಚಾವತಾರ ಜಗಜ್ಜಾಹೀರಾಗಿ ವಿಧಿಯಿಲ್ಲದೆ ಸಾರ್ವಜನಿಕರ ಕಣ್ಣೊರೆಸಲಷ್ಟೆ ಈ ಕ್ರಮ ಕೈಗೊಂಡಿರುವುದು ಎಂಬುದು ಸಾಮಾನ್ಯನಿಗೂ ತಿಳಿದ ಅಸಾಮಾನ್ಯ ಸಂಗತಿಯಾಗಿದೆ. ಚಿಲ್ಲರೆ ಲಂಚ ಪಡೆದ ಹೊರಗುತ್ತಿಗೆ ನೌಕರರೊಬ್ಬರನ್ನು ಅಮಾನತು ಮಾಡಿರುವುದು ಸರಿ. ಆದರೆ ಕೇವಲ ಆರೋಗ್ಯ ಶಾಖೆಯ ಜನನ ಮರಣ ಪ್ರಮಾಣ ಪತ್ರದ ಭಾಗದಲ್ಲಿ ಮಾತ್ರ ಭ್ರಷ್ಟಾಚಾರ ನಡೆಯುತ್ತಿತ್ತೇ ಉಳಿದ ಶಾಖೆಗಳು ಆರೋಪ ಮುಕ್ತವೇ..? ಉದ್ದಿಮೆ ಪರವಾನಿಗೆ ಪಡೆಯಲು ಹರಸಾಹಸ ಪಡಬೇಕು.

ಉದಯವಾಹಿನಿ ಚಿತ್ರ

ಆರೋಗ್ಯ ನಿರೀಕ್ಷಕರಿಗಾಗಿ ಜಾತಕ ಪಕ್ಷಿಯಂತೆ ಕಾಯಬೇಕು. ಹಿರಿಯ ಆರೋಗ್ಯ ನಿರೀಕ್ಷರೊಬ್ಬರು ಅವರ ಕುರ್ಚಿಯಲ್ಲಿ ಕುಳಿತಿಕೊಳ್ಳುವುದೇ ವಿರಳ.. ಬಿಟ್ಟರೆ ಕೈಗೆ ಸಿಗದ ಆಸಾಮಿ. ಅವರಿಗೆ ತಲುಪಬೇಕಾದ ಹಣ ತಲುಪಿದರೆ ಮಾತ್ರ ಪರವಾನಿಗೆ ಸಿದ್ದ, ಇಲ್ಲದಿದ್ದಲ್ಲಿ ಇಲ್ಲ ಸಲ್ಲದ ಸಬೂಬು ಹೇಳಿ ತಿಂಗಳಾನುಗಟ್ಟಲೆ ಕಡತ ಕೊಳೆಯುವಂತೆ ಮಾಡಿ ಚಕಾರವೆತ್ತಿದವರಿಗೆ ದುಪ್ಪಟ್ಟು ಘನತ್ಯಾಜ್ಯ ವಿಲೇವಾರಿ ವೆಚ್ಚ ವಿಧಿಸಿ ಪರವಾನಿಗೆಯನ್ನು ಪಡೆಯದಂತೆ ಮಾಡಲಾಗುತ್ತದೆ ಎಂಬುದು ಅನೇಕ ಉದ್ಯಮಿಗಳ ನೇರ ಅಳಲು.

ಕಾಂಚಾಣದ ಸದ್ದಿಲ್ಲದೆ ಕಡತ ವಿಲೇವಾರಿ ಆಗೋದಿಲ್ಲ

ಪೌರಕಾರ್ಮಿಕರಿಂದ ಹಾಜರಾತಿಗೆ ಹಣ, ಉಪಹಾರದ ಬಿಲ್ ಗೆ ಹಣ ಹೀಗೆ ಕಾಂಚಾಣದ ಸದ್ದಿಲ್ಲದೆ ಕಡತ ವಿಲೇವಾರಿ ಆಗೋದಿಲ್ಲ. ಇನ್ನು ಕಂದಾಯ ವಿಭಾಗದ ದುಸ್ಥಿತಿ ಇಡೀ ಜಿಲ್ಲೆಗೆ ಜಗಜ್ಜಾಹೀರಾತು. ಲಂಚವಿಲ್ಲದೆ ನಿಮ್ಮ ಕಂದಾಯ ಪಾವತಿ ಬುಕ್ ನಲ್ಲಿ ಎಂಟ್ರಿ ಕೂಡಾ ಆಗುವುದಿಲ್ಲ.

ಜನಪ್ರತಿನಿಧಿಗಳು , ಕನ್ನಡಪರ ಹಾಗೂ ವಿವಿಧ ಸಂಘಟನೆಗಳವರು ಸೇರಿದಂತೆ ನಾಗರೀಕರು ದೂರುಗಳ ಮಹಾಪೂರವನ್ನೇ ಹರಿಸಿದ್ದರೂ/ಹರಿಸುತ್ತಿದ್ದರೂ ಸಹ ಕಣ್ಣಿದ್ದು ಕುರುಡಾಗಿ ಕಿವಿಯಿದ್ದು ಕಿವುಡಾಗಿರುವ ಜಿಲ್ಲಾಡಳಿತ ಒಮ್ಮೆಯಾದರೂ ಭ್ರಷ್ಟಾಚಾರದಲ್ಲೇ ಮುಳುಗಿರುವ ಯಾವೊಬ್ಬ ವಿಷಯ ನಿರ್ವಾಹಕ , ಕಂದಾಯ ನಿರೀಕ್ಷಕ, ಕಂದಾಯಾಧಿಕಾರಿ ಇವರುಗಳ ಮೇಲಾಗಲಿ ಅಥವಾ ಇ-ಸ್ವತ್ತು ತೆಗೆಯುವ ಗಣಕಯಂತ್ರ ಸಿಬ್ಬಂದಿಗಳ ವಿರುದ್ಧವಾಗಲಿ ಕ್ರಮ ಕೈಗೊಂಡ ಇತಿಹಾಸವೇ ಇಲ್ಲ.

ಆರೋಗ್ಯ ಶಿಬಿರ, ಕ್ರಿಕೆಟ್: ಸಿದ್ಧತಾ ಸಭೆ

• ಉದಯವಾಹಿನಿ ಸೋಮವಾರಪೇಟೆ

ಕೊಡಗು ಪತ್ರಕರ್ತರ ಸಂಘದ ತಾಲ್ಲೂಕು ಸಮಿತಿ ಆಯೋಜಿಸುವ ಆರೋಗ್ಯ ಶಿಬಿರ ಮತ್ತು ಜಿಲ್ಲಾ ಮಟ್ಟದ ಟೆನಿಸ್ ಬಾಲ್ ಕ್ರಿಕೆಟ್ ಪಂದ್ಯಾಟದ ಪೂರ್ವ ಭಾವಿ ಸಭೆ ಇಲ್ಲಿನ ಪತ್ರಿಕಾಭವನದಲ್ಲಿ ಸಂಘದ ಅಧ್ಯಕ್ಷ ಎಚ್.ಆರ್. ಹರೀಶ್ ಕುಮಾರ್ ಅಧ್ಯಕ್ಷತೆಯಲ್ಲಿ ನಡೆಯಿತು.

ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿ ಮತ್ತು ಅವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿದ್ಯಾನಿಧಿ ಸ್ಥಾಪಿಸುವ ನಿಟ್ಟಿನಲ್ಲಿ ಆರೋಗ್ಯ ಶಿಬಿರ ಮತ್ತು ಪಂದ್ಯಾಟವನ್ನು ಡಿ.22ರಂದು ಬಳಗುಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮೈದಾನದಲ್ಲಿ ನಡೆಸಲು ಉದ್ದೇಶಿಸಲಾಗಿದ್ದು, ಜಿಲ್ಲೆಯ ನಾಲ್ಕು ತಂಡಗಳಿಗೆ ಆಡಲು ಅವಕಾಶ ಮಾಡಿಕೊಡಲಾಗಿದೆ.

ವಿಜೇತ ತಂಡಕ್ಕೆ ಟ್ರೋಫಿ ಮತ್ತು ನಗದು ಬಹುಮಾನ ವಿತರಿಸಲಾಗುವುದು. ಈ ನಿಟ್ಟಿನಲ್ಲಿ ನಾಲ್ಕು ತಂಡಗಳನ್ನು ರಚಿಸಲಾಯಿತು ಸಂಘದ ಜಿಲ್ಲಾ ಸಮಿತಿ ಅಧ್ಯಕ್ಷ ಎಸ್.ಎ. ಮುರಳೀಧರ

ಅಂತರಾಳದಿಂದ... EDITORIAL

ನ್ಯಾಯಮೂರ್ತಿಯ ಅನುಚಿತ ಮಾತು!

ನ್ಯಾಯಾಂಗದ ಘನತೆಗೆ ಚ್ಯುತಿ

ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಶೇಖರ್ ಕುಮಾರ್ ಯಾದವ್ ಅವರು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ಮಾಡಿದ ಭಾಷಣದಲ್ಲಿನ ಮಾತುಗಳು ಕಳವಳ ಮೂಡಿಸುವಂತಹವು. ಆ ಮಾತುಗಳಲ್ಲಿ ಆಳವಾದ ಪೂರ್ವಗ್ರಹಗಳು ಹಾಗೂ ಅಲ್ಪಸಂಖ್ಯಾತ ಸಮುದಾಯದ ಕುರಿತ ದ್ವೇಷ ಕಾಣಿಸುತ್ತಿವೆ. ನ್ಯಾಯಾಂಗದಲ್ಲಿ ದೊಡ್ಡ ಹುದ್ದೆಗಳಲ್ಲಿ ಇರುವವರು ರಾಜಕೀಯ ವಿಚಾರಗಳ ಬಗ್ಗೆ ಬಹಿರಂಗವಾಗಿ ಮಾತನಾಡುವುದು ಅಪೇಕ್ಷಣೀಯವಲ್ಲ. ಯಾವುದೇ ವಿಷಯದ ಬಗ್ಗೆ ಮಾತನಾಡುವಾಗ ಅವರು ಸಂಯಮ ಪ್ರದರ್ಶಿಸಬೇಕು. ಏಕೆಂದರೆ ಅವರು ವ್ಯಕ್ತಪಡಿಸುವ ಅಭಿಪ್ರಾಯಗಳು, ಅವರು ನ್ಯಾಯದಾನದ ಸ್ಥಾನದಲ್ಲಿ ಕುಳಿತು ನೀಡುವ ತೀರ್ಪು, ಆದೇಶಗಳ ಮೇಲೆ ಪ್ರಭಾವ ಬೀರುತ್ತವೆ ಎಂಬ ಅನುಮಾನ ಯಾರಲ್ಲೂ ಬರಬಾರದು. ವಿವಾದಕ್ಕೆ ಎಡೆಮಾಡಿಕೊಡುವಂತಹ ಕೆಲಸಗಳನ್ನು ಮಾಡಿರುವ, ನಿಲುವುಗಳನ್ನು ತಾಳಿರುವ ಬಲಪಂಥೀಯ ಸಂಘಟನೆಯೊಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನ್ಯಾಯಮೂರ್ತಿ ಸ್ಥಾನದಲ್ಲಿ ಇರುವವರು ಭಾಗವಹಿಸಿದ್ದೇ ತಪ್ಪು. ಸಂವಿಧಾನಕ್ಕೆ ಬದ್ಧವಾಗಿ ನಡೆದುಕೊಳ್ಳುವುದಾಗಿ ನ್ಯಾಯಮೂರ್ತಿಗಳು ಪ್ರಮಾಣ ಮಾಡಿರುತ್ತಾರೆ.

ಅವರು ಈ ಮಾತಿಗೆ ಬದ್ಧವಾಗಿ ನಡೆದುಕೊಳ್ಳಬೇಕು.

ಸಮಾನತೆ. ಭ್ರಾತೃತ್ವ, ನ್ಯಾಯದ ತತ್ವಗಳಿಗೆ ಅನುಗುಣವಾಗಿ ನಡೆದುಕೊಳ್ಳಬೇಕು ಎಂಬುದು ಈ ರೀತಿ ಪ್ರಮಾಣ ಮಾಡುವುದರ ಉದ್ದೇಶ.

ಆದರೆ ನ್ಯಾಯಮೂರ್ತಿ ಯಾದವ್ ಅವರು ತಮ್ಮ ಸ್ಥಾನಕ್ಕೆ ಸೂಕ್ತವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದಾರೆ. ದ್ವೇಷದ ಮಾತುಗಳ ಮೂಲಕ ಅವರು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ವರ್ತಿಸಿದ್ದಾರೆ. ಅವರು ತಮ್ಮನ್ನು ಹಿಂದೂ ಸಮುದಾಯದ ಜೊತೆ ಬಹಿರಂಗವಾಗಿ ಗುರುತಿಸಿಕೊಂಡಿದ್ದಾರೆ. ಮುಸ್ಲಿಮರ ಕುರಿತು ಅಸಹಿಷ್ಣುತೆಯನ್ನು ತೋರಿಸಿದ್ದಾರೆ. 'ಇದು ಹಿಂದೂಸ್ತಾನ ಎಂದು ಹೇಳುವಲ್ಲಿ ನನಗೆ ಯಾವ ಅಳುಕೂ ಇಲ್ಲ; ಹಿಂದೂಸ್ತಾನದಲ್ಲಿ ಇರುವ ಬಹುಸಂಖ್ಯಾತರ ಇಚ್ಛೆಗೆ ಅನುಗುಣವಾಗಿ ಈ ದೇಶ ವರ್ತಿಸುತ್ತದೆ. ಇದು ಕಾನೂನು' ಎಂದು ಅವರು ಹೇಳಿದ್ದಾರೆ. ನ್ಯಾಯಮೂರ್ತಿ ಯಾದವ್ ಅವರು ಆಡಿದ ಮಾತುಗಳನ್ನು ಸಾಮಾನ್ಯ ವ್ಯಕ್ತಿಯೊಬ್ಬ ಆಡಿದ್ದಿದ್ದರೆ ಅದನ್ನು ದ್ವೇಷದ ಮಾತು ಎಂದು ಪರಿಗಣಿಸಲಾಗುತ್ತಿತ್ತು. ಈ ಮಾತುಗಳ ವಿಚಾರವಾಗಿ ಕ್ರಮ ಜರುಗಿಸುವ ಅಗತ್ಯ ಇದೆ.

ಮುಸ್ಲಿಮರನ್ನು ಗುರಿಯಾಗಿಸಿಕೊಂಡ ಒರಟಾದ ನಿಂದನೆ ಇರುವ ಮಾತನ್ನು ಕೂಡ ಅವರು ಆಡಿದ್ದಾರೆ. ಒಂದು ಸಮುದಾಯದ ಮಕ್ಕಳಿಗೆ ಸಹಿಷ್ಣುತೆ, ಕರುಣೆ, ಅಹಿಂಸೆಯನ್ನು ಕಲಿಸಲಾಗುತ್ತದೆ. ಮತ್ತೊಂದು ಸಮುದಾಯದ ಮಕ್ಕಳು ಪ್ರಾಣಿ ಬಲಿಯನ್ನು ನೋಡುವ ಕಾರಣ ಅವರು ಸಹಿಷ್ಣುಗಳಾ ಗಲಿ ಎಂದು ನಿರೀಕ್ಷಿಸಲು ಸಾಧ್ಯವಿಲ್ಲ ಎಂದು ಅವರು ಹೇಳಿದ್ದಾರೆ. ಅವರು ಮಾಡಿದ ಭಾಷಣದ ವಿಷಯ ಏಕರೂಪ ನಾಗರಿಕ ಸಂಹಿತೆಯ ಸಾಂವಿಧಾನಿಕ ಅಗತ್ಯದ ಕುರಿತು. ದೇಶವು ಏಕರೂಪಿ ಕಾನೂನನ್ನು ಖಂಡಿತವಾಗಿಯೂ ತರುತ್ತದೆ. ಅದನ್ನು ಬಹಳ ಬೇಗ ತರಲಾಗುತ್ತದೆ ಎಂದೂ ನ್ಯಾಯಮೂರ್ತಿ ಯಾದವ್ ಹೇಳಿದ್ದಾರೆ.

ಏಕೆಂದರೆ, ಈ ಮಾತುಗಳು ನ್ಯಾಯಾಂಗದ ಮೇಲೆ ಪರಿಣಾಮ ಉಂಟುಮಾಡಬಹುದು. ನ್ಯಾಯಮೂರ್ತಿ ಯಾದವ್ ಅವರು ಈ ಹಿಂದೆಯೂ ವಿವಾದಾತ್ಮಕ ಮಾತುಗಳನ್ನು ಆಡಿದ್ದಾರೆ. ಈ ಮಾತುಗಳು ನ್ಯಾಯಾಂಗದ ಅಧಿಕಾರಿಯಾಗಿ ಅವರ ನಡತೆಯ ಬಗ್ಗೆ ಪ್ರಶ್ನೆಗಳನ್ನು ಮೂಡಿಸಿವೆ. ಮುಸ್ಲಿಂ ವ್ಯಕ್ತಿಯೊಬ್ಬರ ಅರ್ಜಿಯು ನ್ಯಾಯಮೂರ್ತಿ ಯಾದವ್ ಅವರ ಮುಂದೆ ವಿಚಾರಣೆಗೆ ಬಂದರೆ ಆ ವ್ಯಕ್ತಿಗೆ ನ್ಯಾಯ ಸಿಗುವ ವಿಶ್ವಾಸ ಇರುವುದಿಲ್ಲ.

ನ್ಯಾಯಮೂರ್ತಿ ಯಾದವ್ ಆಡಿರುವ ಮಾತುಗಳನ್ನು ಗಮನಿಸಿರುವ ಸುಪ್ರೀಂ ಕೋರ್ಟ್, ಅಲಹಾಬಾದ್ ಹೈಕೋರ್ಟ್‌ನಿಂದ ವಿವರ ಕೇಳಿದೆ. ನ್ಯಾಯಮೂರ್ತಿ ಯಾದವ್ ಅವರು ನ್ಯಾಯಾಂಗದ ವಿಶ್ವಾಸಾರ್ಹತೆಗೆ ಧಕ್ಕೆ ತರುವ ರೀತಿಯಲ್ಲಿ ವರ್ತಿಸಿರುವ ಕಾರಣಕ್ಕೆ ಅವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಈಗ ಅವರ ವಿರುದ್ಧ ವಾಗ್ದಂಡನೆ ಪ್ರಕ್ರಿಯೆಗೆ ಸಿದ್ಧತೆ ನಡೆದಿದೆ ಎಂದು ವರದಿಗಳು ಹೇಳಿವೆ. ನ್ಯಾಯಮೂರ್ತಿ ಸ್ಥಾನದಲ್ಲಿ ಇರುವ ವ್ಯಕ್ತಿಗೆ ಇಂತಹ ಮಾತುಗಳನ್ನು ಆಡಲು ಧೈರ್ಯ ಕೊಡುವ ವ್ಯವಸ್ಥೆಯೊಂದು ದೇಶದಲ್ಲಿ ಸಕ್ರಿಯವಾಗಿ ಇರುವುದು ಕಳವಳಕಾರಿ. ಇಂತಹ ನ್ಯಾಯಮೂರ್ತಿಯು ಕರ್ತವ್ಯದಲ್ಲಿ ಇರಲು ಅವಕಾಶ ಮಾಡಿಕೊಡುವ ವ್ಯವಸ್ಥೆಯು ನ್ಯಾಯಸಮ್ಮತವಾಗಿ ಇದೆ ಎಂದು ಪರಿಗಣಿತವಾಗದು.

ತಿರುವಣ್ಣಾಮಲೈ ತಮಿಳುನಾಡಿನಲ್ಲಿ

ಕಾರ್ತಿಕ ದೀಪೋತ್ಸವ ಆಚರಣೆ

ಎ.ಎಂ.ಎಸ್.ಗೋಪಿ

• ಉದಯವಾಹಿನಿ, ವಿಶೇಷ

ತಿರುವಣ್ಣಮಲೈ (ತಮಿಳುನಾಡು) ಇಲ್ಲಿ ಕಾರ್ತಿಕ ಮಾಸ ಕೃತ್ತಿಕ ದಿನದಂದು, ಅಂದರೆ 13 ಡಿಸೆಂಬರ್ 2024ರಂದು ಅರುಣಾಚಲ ಪರ್ವತದ ಮೇಲೆ ಸಾಯಂಕಾಲ 6 ಗಂಟೆಗೆ ಕಾರ್ತಿಕ ದೀಪವನ್ನು ಪ್ರಜ್ವಲಿಸುತ್ತದೆ. ಪ್ರತಿವರ್ಷ ಕಾರ್ತಿಗೈ ಮಾಸದ ಕೃತ್ತಿಕ ದಿನ ತಿರುವಣ್ಣಾಮಲೈ ಅರುಣಾಚಲೇಶ್ವರ ದೇವಸ್ಥಾನದಲ್ಲಿ ಮತ್ತು ಅಲ್ಲಿನ ಅರುಣಾಚಲ ಪರ್ವತದ ಮೇಲೆ ಸುಂದರವಾದ ಒಂದು ದೊಡ್ಡ ದೀಪವನ್ನು ಪ್ರಜ್ವಲಿಸಲಾಗುತ್ತದೆ. ಮತ್ತು ನಂತರ ಕಾರ್ತಿಕ ದೀಪೋತ್ಸವವನ್ನು ಆಚರಿಸಲಾಗುತ್ತದೆ.ಇಲ್ಲಿ ಹಚ್ಚಲಾಗುವ ದೊಡ್ಡ ದೀಪದಲ್ಲಿ ಬಹುತೇಕ ಮೂರೂವರೆ ಸಾವಿರ ಕಿಲೋಗಳಿಗಿಂತ ಹೆಚ್ಚು ತುಪ್ಪ ಮತ್ತು 1 ಸಾವಿರ ಮೀಟರ್‌ನಷ್ಟು ಬಟ್ಟೆಯನ್ನು ಬತ್ತಿಗಾಗಿ ಉಪಯೋಗಿಸಲಾಗುತ್ತದೆ. ಅದಕ್ಕೂ ಮೊದಲು ಪ್ರಾತಃಕಾಲ 4 ಗಂಟೆಗೆ ಅರುಣಾಚಲೇಶ್ವರ ದೇವಸ್ಥಾನದಲ್ಲಿ ಕಾರ್ತಿಕ ದೀಪವನ್ನು ಪ್ರಜ್ವಲಿಸಲಾಗುತ್ತದೆ ಮತ್ತು ನಂತರ ಅದೇ ದೀಪವನ್ನು ಅರ್ಚಕರು ಮತ್ತು ಗ್ರಾಮಸ್ಥರು ಒಟ್ಟಿಗೆ ಪರ್ವತದ ಮೇಲೆ ತೆಗೆದುಕೊಂಡು ಹೋಗುತ್ತಾರೆ. ಸಾಯಂಕಾಲ ಸರಿಯಾಗಿ 6 ಗಂಟೆಗೆ 'ಕಾರ್ತಿಕ ದೀಪಮ್ ಪ್ರಜ್ವಲಿಸಲಾಗುತ್ತದೆ.

ಈ ದೀಪೋತ್ಸವದ ನೇರಪ್ರಸಾರವನ್ನು ಟಿವಿ ದೂರದರ್ಶನವಾಹಿನಿ ಮೂಲಕ ಪ್ರಸಾರ ಮಾಡಲಾಗುತ್ತದೆ.ತಿರುವಣ್ಣಾಮಲೈ ದೇವಸ್ಥಾನ ಕಾರ್ತಿಕ ದೀಪಮ್ ಉತ್ಸವವನ್ನು ನೋಡಬಹುದು ಮತ್ತು ಪ್ರತಿಯೊಬ್ಬರು 'ಕಾರ್ತಿಕ ದೀಪಮ್ ಪ್ರಜ್ವಲಿಸಿ ಒಂದು ರೀತಿಯಲ್ಲಿ ಈ ಉತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ಇದು ತಮಿಳುನಾಡು ರಾಜ್ಯದ ಪ್ರಮುಖ ತೀರ್ಥ ಕ್ಷೇತ್ರಗಳ ಪೈಕಿ ಒಂದಾಗಿದೆ. ತಿರುವಣ್ಣಾಮಲೈ' ಮತ್ತು 'ಅರುಣಾಚಲ' ಹೆಸರುಗಳು ಪವಿತ್ರ ಅಗ್ನಿ ಬೆಟ್ಟವನ್ನು ಸೂಚಿಸುತ್ತವೆ. ನಂತರ ರಾಜರು ಮತ್ತು ಪ್ರಸಿದ್ಧ ಸಿಬ್ಬಂದಿಗಳು ಶಿವನ ಸ್ಮರಣಾರ್ಥ ಬೆಟ್ಟದ ಮೇಲೆ ದೇವಾಲಯವನ್ನು ನಿರ್ಮಿಸಿದರು. ಈ ನಿರ್ದಿಷ್ಟ ಸ್ಥಳದಲ್ಲಿ ಈ ಹಬ್ಬವನ್ನು ಅದ್ಭುತವಾಗಿ ಆಚರಿಸಲಾಗುತ್ತದೆ.

ತಿರುವಣ್ಣಾಮಲೈ ಕ್ಷೇತ್ರ..

ತಿರುವಣ್ಣಾಮಲೈ ದೇವಸ್ಥಾನಕ್ಕೆ ಬೆಂಗಳೂರಿನಿಂದ ಹೊಸೂರು, ಕೃಷ್ಣಗಿರಿ ಚೆಂಗಂ ಮೂಲಕ ಸುಲಭವಾಗಿ ಬಸ್ಸುಗಳಲ್ಲಿ ತೆರಳಬಹುದು. ಬೆಂಗಳೂರಿನಿಂದ 220 ಕಿ.ಮೀ ಹಾಗೂ ಚೆನ್ನೈ ನಗರದಿಂದ 185 ಕಿ.ಮೀ ಗಳಷ್ಟು ದೂರದಲ್ಲಿ ನೆಲೆಸಿರುವ ತಿರುವಣ್ಣಾಮಲೈ ಅಣ್ಣಾಮಲೈ ಬೆಟ್ಟಗಳ ಬುಡದಲ್ಲಿ ರೂಪಗೊಂಡ ಪಟ್ಟಣವಾಗಿದೆ. ಈ ಎರಡೂ ಪ್ರಮುಖ ನಗರಗಳಿಂದ ಇಲ್ಲಿಗೆ ರಸ್ತೆಯ ಮೂಲಕ ಸುಲಭವಾಗಿ ತೆರಳಬಹುದಾಗಿದೆ. ತಿರುವಣ್ಣಾಮಲೈಯಲ್ಲಿ ಹುಣ್ಣಿಮೆಯ ದಿನ ಗಿರಿವಲಂ ನಡೆಯುತ್ತದೆ. ಗಿರಿವಲಂ ಅಂದರೆ ಈ ಪವಿತ್ರ ಬೆಟ್ಟ ಗುಡ್ಡದ ಸುತ್ತ ಪ್ರದಕ್ಷಿಣೆ ಹಾಕುವುದು. ಇದಕ್ಕಾಗಿ ರಸ್ತೆಯ ಮಾರ್ಗವಿದ್ದು ಭಕ್ತಾದಿಗಳು ಈ ಬೆಟ್ಟವನ್ನು ಸುಮಾರು 14 ಕಿ.ಮೀ ಕಾಲ್ನಡಿಗೆಯಲ್ಲಿ ಚಲಿಸಿ ಪ್ರದಕ್ಷಿಣೆ ಹಾಕಬಹುದು. ಕಲಿಯುಗದ ಈ ಒಂದು ಪ್ರದಕ್ಷಿಣೆಯು ಸಾವಿರ ಕುದುರೆ ತ್ಯಾಗಕ್ಕೆ ಸಮ ಎಂದು ಹೇಳಲಾಗಿದೆ ಹಾಗೂ ನಿರಂತರ ಭೇಟಿ ಹಾಗೂ ಪ್ರದಕ್ಷಿಣೆಯಿಂದ ಜೀವನ್ಮರಣಗಳ ಕಾಲ ಚಕ್ರದಿಂದ ಮುಕ್ತಿ ಪಡೆಯಬಹುದು ಎಂದೂ ಸಹ ಹೇಳಲಾಗಿದೆ.ಇಲ್ಲಿರುವ ಎಂಟು ಶಿವಲಿಂಗಗಳು ಹಾಗೂ ಅವುಗಳನ್ನು ಪೂಜಿಸುವುದರಿಂದ ದೊರಕುವ ಫಲಗಳು.

ಶಿವಲಿಂಗಗಳು ದಿಕ್ಕು ಸ್ಥಾಪಿಸಿದವರು ಅಧಿಪತಿ ಪ್ರತಿಫಲಗಳು

- ಇಂದ್ರ ಲಿಂಗಂ ಪೂರ್ವ ಇಂದ್ರ, ಆಕಾಶ ದೇವತೆಗಳ ದೊರೆ ಸೂರ್ಯ ಹಾಗೂ ಶುಕ್ರ ಆಯುಷ್ಯ ವೃದ್ಧಿ ಹಾಗೂ ಪ್ರಸಿದ್ಧಿ.
- ಅಗ್ನಿ ಲಿಂಗಂ ನೈರುತ್ಯ ಅಗ್ನಿ ದೇವ ಚಂದ್ರ ಭಯ ಹಾಗೂ ರೋಗಗಳಿಂದ ಮುಕ್ತಿ.
- ಯಮ ಲಿಂಗಂ ದಕ್ಷಿಣಯಮ ದೇವ ಮಂಗಳ ಸುದೀರ್ಘ ಜೀವನ.
- ನಿರುತಿ ಲಿಂಗಂ ಆಗ್ನೇಯ ನಿರುತಿ ದೈತ್ಯಗಳ ದೊರೆ ರಾಹು ಆರೋಗ್ಯ, ಭಾಗ್ಯ, ಸಂತಾನ ಪ್ರಾಪ್ತಿ.
- ವರುಣ ಲಿಂಗಂ ಪಶ್ಚಿಮ ವರುಣ ದೇವರು ಶನಿ ನೀರು ಸಂಬಂಧಿ ಕಾಯಿಲೆಗಳಿಂದ ಮುಕ್ತಿ.
- ವಾಯು ಲಿಂಗಂ ವಾಯವ್ಯ ವಾಯು ದೇವರು ಕೇತು ಶ್ವಾಸಕೋಶ, ಹೃದಯ ಸಂಬಂಧಿ ತೊಂದರೆಗಳಿಂದ ಮುಕ್ತಿ.
- ಕುಬೇರ ಲಿಂಗಂ ಉತ್ತರ ಕುಬೇರ ಗುರು ಧನ ಪ್ರಾಪ್ತಿ ಹಾಗೂ ಪ್ರತಿಷ್ಠೆ.
- ಈಶಾನ್ಯ ಲಿಂಗಂ ಈಶಾನ್ಯ ಈಶಾನ್ಯನ್ ಬುಧ ನೆಮ್ಮದಿ ಹಾಗೂ ಮನಶ್ಶಾಂತಿ.

ಕಲಾ ಸಾಹಿತ್ಯ

ವೈ.ಕೆ. ಸಂಧ್ಯಾಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

ಅರ್ಕಾ- ನೃತ್ಯ ನಿರಂತರದ ದ್ವಿತೀಯಾರ್ಪಣೆ

• ಉದಯವಾಹಿನಿ , ಬೆಂಗಳೂರು

ಭರತನಾಟ್ಯ ಕಲಾವಿದೆಯರಲ್ಲಿ ತಮ್ಮದೇ ಆದ ಅಸ್ಮಿತೆಯನ್ನು ಸಾಬೀತುಗೊಳಿಸಿರುವ ವಿದುಷಿ ಭಾನುಪ್ರಿಯ ರಾಕೇಶ್ ಅವರ ಸ್ಥಾನ ವಿಶಿಷ್ಟವಾದದ್ದು. ನಿರಂತರ ಪ್ರಯೋಗ ಅವರ ಕ್ರಿಯಾತ್ಮಕ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ. ಬೆಂಗಳೂರಿನ ಜೆ.ಪಿ. ನಗರದಲ್ಲಿ ಕಲಾತ್ಮಕ ಚಟುವಟಿಕೆಗಳಿಗಾಗಿಯೇ ತಾವೇ ನಿರ್ಮಿಸಿದ ಅರ್ಕಾ ಥಿಯೇಟರ್ ಮತ್ತು ಆಡಿಟೋರಿಯಂನಲ್ಲಿ ನಿರಂತರ ನೃತ್ಯ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಬದ್ಧತೆಯ ನೃತ್ಯಗುರುವೂ ಆದ ಭಾನುಪ್ರಿಯ ತಮ್ಮ ನೃತ್ಯ ಅಕಾಡೆಮಿಯಲ್ಲಿ ಲಿಂಗಾತೀತ, ವಯಸ್ಸಿನ ಮಿತಿಯಿಲ್ಲದೆ ಕಲಿಯುವ ಪ್ರತಿಭೆಗಳಿಗೆ ಆದ್ಯತೆ ನೀಡಿ ಆಸಕ್ತಿಯಿಂದ ನೃತ್ಯ ಕಲಿಸುತ್ತಾರೆ. ಕಲಾಪ್ರೀತಿಯಿಂದ ಕಲಿಯಲು ಬರುವ ಎಲ್ಲಾರಿಗೂ, ಅವರು ಅಗಾಧ ಮಮತೆಯಿಂದ, ಸಮಯದ ಪರಿವೆಯಿಲ್ಲದೆ ನಿಷ್ಠೆಯಿಂದ ನೃತ್ಯ ಸಾಧನೆಗೆ ಅನುವು ಮಾಡಿಕೊಡುತ್ತಿರುವುದು ಅವರ ವೈಶಿಷ್ಟ್ಯ.

ಅದರಂತೆ ಭಾನುಪ್ರಿಯರ ನೂತನ ಪ್ರಯೋಗ- ವಿವಿಧ ವಯೋಮಾನದ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿ, ಅವರಿಗೆ ಸೂಕ್ತ ನೃತ್ಯ ತರಬೇತಿ ನೀಡಿ ಅವರ ನೃತ್ಯ ಪ್ರದರ್ಶನಕ್ಕೆ ವೇದಿಕೆ ಒದಗಿಸುತ್ತಿರುವುದು ಸ್ವಾಗತಾರ್ಹ. ಎಂಟನೆಯ ತರಗತಿಯಲ್ಲಿ ಓದುವ ಪುಟ್ಟ ವಿದ್ಯಾರ್ಥಿನಿಯಿಂದ ಹಿಡಿದು, ಕಾಲೇಜು ಅಭ್ಯಾಸಿ, ಪಿ.ಹೆಚ್.ಡಿ ಉನ್ನತ ಅಧ್ಯಯನ ನಡೆಸುತ್ತಿರುವ ಕಲಾವಿದ, ಶಿಕ್ಷಕಿಯ ಉದ್ಯೋಗಸ್ಥೆ ಹಾಗೂ ಗೃಹಿಣಿಯವರೆಗೂ ಸುಮಾರು 12 ರಿಂದ 45 ವಯೋಮಾನದ ನೃತ್ಯಾಕಾಂಕ್ಷಿಗಳ ಐದು ಜನರ ನೃತ್ಯತಂಡ, ವೇದಿಕೆಯ ಮೇಲೆ ತಮ್ಮ ಪ್ರತಿಭಾ ಪ್ರದರ್ಶನ ಮಾಡಲು ಅವಕಾಶವನ್ನು ಒದಗಿಸಿದ್ದಾರೆ.

ದಿನಾಂಕ: ಡಿಸೆಂಬರ್ 14 ಶನಿವಾರ ಸಂಜೆ 6 ಗಂಟೆಗೆ ಜೆ.ಪಿ. ನಗರದ 'ಅರ್ಕಾ' ಥಿಯೇಟರ್ ಆಡಿಟೋರಿಯಂನಲ್ಲಿ ಭಾನುಪ್ರಿಯರ ಶಿಷ್ಯರಾದ ಶ್ರೀಮತಿ ರೇವತಿ ಚಂದ್ರನ್, ಕು. ಸುಧಾ ಸಿ,ಶ್ರೇಷ್ಠ ಸುಧೀಲ್, ಗಾನವಿ ಎ.ಟಿ. ಶ್ರೀ ನಾಗಾರ್ಜುನ್, ಉತ್ಸಾಹ-ಚೈತನ್ಯದಿಂದ ನರ್ತಿಸಲಿದ್ದಾರೆ. ಈ ಕಲೋತ್ಸವವನ್ನು ಕಣ್ತುಂಬಿಕೊಳ್ಳಲು ಸರ್ವರಿಗೂ ಆದರದ ಸ್ವಾಗತ.

ಸಾಮಾಜಿಕ ಕಳಕಳಿ

ಹೆಚ್.ಎಸ್.ಪ್ರತಿಮಾ ಹಾಸನ್
ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ

■ ಉದಯವಾಹಿನಿ, ವಿಶೇಷ

ತಾಳೆಯನು ಹಾಕುತಲಿ ಬದುಕನ್ನು ನಡೆಸುವರು
ನಾಳೆ ಬದುಕನ್ನು ಬಲ್ಲವರು ಇಲ್ಲ
ಉಳುಮೆಯು ಮಾಡಲದು ರೈತರಿಗೆ ಮಳೆಗಾಗಿ
ಕೇಳುವರು ದೇವರಿಗೆ ಲಕ್ಷ್ಮಿದೇವಿ....

ಭಾವಾರ್ಥ : ಪ್ರತಿಯೊಂದರಲ್ಲೂ ತಾಳೆಯನು ಹಾಕಬೇಕು,ಸರಿ-ತಪ್ಪುಗಳ ಸಮಾನತೆಯನ್ನು ಗಮನಿಸುತಲಿ ಸಾಗಬೇಕು. ಬದುಕು ಶಾಶ್ವತವಲ್ಲ,ನೀರಿನ ಗುಳ್ಳೆಯ ರೀತಿಯಾವಾಗ ಹೊಡೆಯುವುದೋ ತಿಳಿಯದು. ಅಂತದರಲ್ಲಿ ಒಳ್ಳೆಯ ಬದುಕು ಇರಬೇಕು. ಯಾರನ್ನು ಸಹ ನಂಬಿಸಿ ಮೋಸ ಮಾಡಬಾರದು. ಮೋಸ ಹೋದೆವು ಎಂದರೇ ಅವರೇ ಆ ಕರ್ಮ ಅನುಭವಿಸುವುದು ಶತ ಸಿದ್ದ. ನಮ್ಮದ್ದು ಯಾವುದೋ ಕರ್ಮ ಕಳೆಯಿತು ಎಂದು ತಿಳಿದು ನಾವು ಬೇರೆಯವರಿಗೆ ಮೋಸ ಮಾಡದೆ ಸಾಗಬೇಕು.

ದಿನಕ್ಕೊಂದು ಮುಕ್ತಕ -51

ಪ್ರತಿಯೊಬ್ಬರು ಪ್ರೀತಿಯಿಂದ ಸಾಗಿದರೆ ಬದುಕು ಸಾರ್ಥಕ. ಪ್ರತಿಯೊಂದರಲ್ಲೂ ತುಲನೆ ಮಾಡಿ ಜೀವಿಸಬೇಕು ಹೇಗೆಬೇಕೆಂದರೆ ಹಾಗೆ ಜೀವಿಸಲು ಸಾಧ್ಯವಿಲ್ಲ ಲೆಕ್ಕಾಚಾರ ಬೇಕು. ನಾಳೆಯ ಬದುಕು ಹೇಗೆ ಎಂಬುದನ್ನು ತಿಳಿಯದು ಅಂತಹ ಜೀವನವನ್ನು ಸಾರ್ಥಕತೆಯಲ್ಲಿ ಬಾಳಬೇಕು. ರೈತರಿಗೆ ಮಳೆ ಮುಖ್ಯ. ಅದಕ್ಕಾಗಿ ದೇವರಿಗೆ ಪ್ರಾರ್ಥನೆ ಮಾಡುತ್ತಾರೆ. ಉಳುಮೆ ಮಾಡಲು ರೈತರಿಗೆ ನೀರು ಮುಖ್ಯ.

ರಾಮಾಯಣ

ಶಬಳೆಯು ವಿಶ್ವಾಮಿತ್ರನ ಸೈನ್ಯವನ್ನು ಪರಾಜಯಗೊಳಿಸಿದ್ದು

• ಹಿಂದಿನ ಸಂಚಿಕೆಯಿಂದ 35 ನೆಯ ಅಧ್ಯಾಯ

ನಾನು ಆ ಮುನೀಶ್ವರನ ಒಡವೆ ಯಾವುದನ್ನು ಅಪಹರಿಸಿದೆನೊ । ಅಪರಾಧವಿಲ್ಲದಿದ್ದರೆ ನನ್ನನ್ನು ಧರಿಷ್ಯನಾದ ವಸಿಷ್ಠ ಮುನೀಶ್ವರನು ಏಕೆ ಬಿಡುತ್ತಾನೆ!' ಎಂದು ಚಿಂತಿಸಿ ವಿಶ್ವಾಮಿತ್ರನನ್ನು ಅತಿಕ್ರಮಿಸಿ ವಿಶ್ವಾಮಿತ್ರನ ಭಟರನ್ನು ಕೊಡಹಿ ಬಿಡಿಸಿಕೊಂಡು ಅತಿವೇಗದಿಂದ ವಸಿಷ್ಠ ಮುನೀಶ್ವರನ ಪಾದಗಳ ಸಮೀಪಕ್ಕೆ ಬಂದು ಅಳುತ್ತಾ ಕಣ್ಣೀರು ಸುರಿಸುತ್ತಾ ಗಂಭೀರಸ್ವರದಿಂದ ಆತನನ್ನು ಕುರಿತು ಷಡ್ಗುಣೈಶ್ವರ ಸಂಪನ್ನರಾದ ವಸಿಷ್ಠ ಮುನೀಶ್ವರರೆ, ಯಾವ ಕಾರಣದಿಂದ ನನ್ನನ್ನು ಬಿಟ್ಟಿರಿ ನಾನು ನಿಮ್ಮ ಒಡವೆ

ಯಾವುದನ್ನು ಅಪಹರಿಸಿದೆನು ಏಕೆ ವಿಶ್ವಾಮಿತ್ರನ ಭಟರು ನನ್ನನ್ನು ಬಲಾತ್ಕಾರದಿಂದ ಎಳೆದುಕೊಂಡು ಹೋಗುತ್ತಲಿದ್ದಾರೆ ' ಎಂದು ಕೇಳಿತು.

ವಸಿಷ್ಠ ಮುನೀಶ್ವರನು ಆ ಶಬಳೆಯನ್ನು ನೋಡಿ ದುಃಖದಿಂದ ರೋದನ ಮಾಡುತ್ತಿರುವ ಒಡಹುಟ್ಟಿದವಳನ್ನು ಸಂತವಿಡುವಂತೆ ' ಎಲೈ ಕಾಮಧೇನುವೆ, ನಾನು ನಿನ್ನನ್ನು ಬಿಟ್ಟು ಬಿಡಲಿಲ್ಲ, ನೀನು ನನ್ನ ಒಡವೆ ಯಾವುದನ್ನೂ ಅಪಹರಿಸಿಲ್ಲ. ವಿಶ್ವಾಮಿತ್ರನು ಮಹಾಬಲವಂತನು ಈತನಿಗೆ ಸಮಾನವಾದ ಒಲವು ನನಗಿಲ್ಲ. ಈತನು ಕ್ಷತ್ರಿಯನು. ರಾಜ್ಯಾಧಿಪತಿಯು. ಈತನಿಗೆ ಒಂದು ಅಕ್ಷಹಿಣಿ ಚತುರಂಗಬಲವಿದೆ. ಈತನಿಗಿಂತಲೂ ಬಲವಂತರಿನ್ನೊಬ್ಬರಿಲ್ಲ' ಎಂದು ನುಡಿದನು.

ಆ ಶಬಳೆಯು ವಸಿಷ್ಠ ಮುನೀಶ್ವರ

ತೊಗರಿ ಫಸಲು ಕೊಡದ ಸರ್ಕಾರಿ ಬೀಜ; ನಿರೀಕ್ಷೆಯಲ್ಲಿದ್ದ ರೈತ ಕಂಗಾಲು

ಸರ್ಕಾರದಿಂದಲೇ ವಿತರಣೆ ಮಾಡಿದ ಬಿತ್ತನೆ ಬೀಜಗಳು ಕಾಯಿ ಕಟ್ಟುವಲ್ಲಿ ವಿಫಲ, ರೈತರು ಸಂಕಷ್ಟಕ್ಕೆ ಸಿಲುಕುವಂತಾಗಿದೆ

• ಉದಯವಾಹಿನಿ, ವಿಜಯಪುರ

ಜಿಲ್ಲೆಯ ಪ್ರಮುಖ ಬೆಳೆ ತೊಗರಿ ಈ ಬಾರಿ ಕೂಡ ಸಾಕಷ್ಟು ಹಾನಿ ಅನುಭವಿಸಿದೆ. ಕಳೆದ ಬಾರಿ ಬರ ಗಾಲದಿಂದ ರೈತರು ನಷ್ಟಕ್ಕೆ ಸಿಲುಕಿದ್ದರು. ಈ ಬಾರಿ ಒಳ್ಳೆಯ ಮಳೆಯಿಂದ ಉತ್ತಮ ಫಸಲಿನ ನಿರೀಕ್ಷೆ ಯಲ್ಲಿದ್ದರು. ಆದರೆ, ಸರ್ಕಾರದಿಂದಲೇ ವಿತರಣೆ ಮಾಡಿದ ಬಿತ್ತನೆ ಬೀಜಗಳು ಕಾಯಿ ಕಟ್ಟುವಲ್ಲಿ ವಿಫಲವಾಗಿದೆ. ಇದರಿಂದ ಇಳುವರಿ ಕುಸಿತವಾಗಿ ಮತ್ತೆ ರೈತರು ಸಂಕಷ್ಟಕ್ಕೆ ಸಿಲುಕುವಂತಾಗಿದೆ. ಜಿಲ್ಲಾದ್ಯಂತ 5,34,565 ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬಿತ್ತನೆ ಮಾಡಲಾಗಿದೆ. ಕೃಷಿ ಇಲಾಖೆಯು ವಿವಿಧ ಏಜೆನ್ಸಿಗಳ ಮೂಲಕ 152 ಬಿತ್ತನೆ ಬೀಜಗಳನ್ನು ವಿತರಿಸಲಾಗಿದೆ. ಇದೇ ಬೀಜಗಳನ್ನು ಬಿತ್ತಿದ ಹೊಲಗಳಲ್ಲಿ ಆರೇಳು ಅಡಿ ಎತ್ತರಕ್ಕೆ ತೊಗರಿ ಗಿಡ ಬೆಳೆದು ನಿಂತಿದೆ.

ಉದಯವಾಹಿನಿ ಚಿತ್ರ

ಬೆಳೆಯು ಕವಲು ಒಡೆದಿಲ್ಲ

ಈ ತಳಿಗಳು ಪ್ರತಿ ಎಕರೆಗೆ ಕನಿಷ್ಠ 5ರಿಂದ 8 ಕ್ವಿಂಟಲ್ ತೊಗರಿ ಇಳುವರಿ ಕೊಡಬೇಕಿತ್ತು. ಆದರೆ, ಕಾಯಿಯೂ ಕಟ್ಟದೆ ಫಸಲೇ ಬಂದಿಲ್ಲ. ಹೀಗಾಗಿ ಯೇ ಕೃಷಿ ಇಲಾಖೆಯ ಮನವಿ ಮೇರೆಗೆ ಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳ ತಂಡವು ಕ್ಷೇತ್ರ ಅಧ್ಯಯನ ಮಾಡಿದೆ. ಜಿಲ್ಲೆಯ ಬಸವನಬಾಗೇವಾಡಿ, ಮುದ್ದೇಬಿಹಾಳ, ಸಿಂದಗಿ, ಆಲಮೇಲ ಮತ್ತು ಇಂಡಿ ತಾಲ್ಲೂಕಿನ ವಿವಿಧ ಗ್ರಾಮ ಗಳಿಗೆ ಭೇಟಿ ಕೊಟ್ಟು ತಾಂತ್ರಿಕ ವರದಿಯನ್ನು ಸಿದ್ಧ ಪಡಿಸಲಾಗಿದೆ. ಬಿತ್ತಿದ ತೊಗರಿ ಬೀಜಗಳು ಮೊಳಕೆ ಒಡೆದಿವೆ.

> ಈ ಬಗ್ಗೆ ಅಧ್ಯಯನ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ. ಇದೀಗ ಕಟಾವು ಆರಂಭವಾಗಿದ್ದು, ಜನವರಿಯವರೆಗೂ ರಾಶಿ ಕಾರ್ಯ ನಡೆಯುತ್ತಿದೆ. ಬೆಳೆ ಕಟಾವು ಪ್ರಯೋಗದ ನಂತರ ಎಷ್ಟು ಪ್ರಮಾಣದ ಇಳುವರಿ ಕುಂಠಿತವಾಗಿದೆ ಎಂಬ ನಿಖರವಾದ ಮಾಹಿತಿ ಸಿಗಲಿದೆ
>
> – ರೂಪಾ ಎಲ್.
> ಜಂಟಿ ನಿರ್ದೇಶಕಿ, ಕೃಷಿ ಇಲಾಖೆ

ಸಾಲಿನಿಂದ ಸಾಲಿನಿಂದ ಸರಿಯಾದ ಅಂತರದಲ್ಲಿ ಬಿತ್ತನೆಯನ್ನೂ ಮಾಡಲಾಗಿದೆ. ಆದರೆ, ಗಿಡದಿಂದ ಗಿಡಕ್ಕೆ ದಟ್ಟವಾಗಿ ಬಿತ್ತಲಾಗಿದೆ. ಇದರಿಂದ ಗಿಡಗಳು ಯಾವುದೇ ಕವಲುಗಳಿಲ್ಲದೆ ಎತ್ತರಕ್ಕೆ ಬೆಳೆದು ಎಲೆಗಳು ಸಂಪೂರ್ಣವಾಗಿ ಉದುರಿ, ಹೂ ಮತ್ತು ಕಾಯಿ ಕಟ್ಟಿಲ್ಲ. ಜತೆಗೆ ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ಹವಾಮಾನ ವೈಪರೀತ್ಯದಿಂದ ಮಂಜಿನ ಬಾಧೆಗೆ ತೊಗರಿ ಬೆಳೆ ತುತ್ತಾಗಿದೆ. ಹೂವುಗಳ ಉದುರಿ ಕಡಿಮೆ ಪ್ರಮಾಣದಲ್ಲಿ ಕಾಯಿಗಳು ಕಟ್ಟಿವೆ. ಎಲೆ ಚುಕ್ಕೆ, ಗೊಡ್ಡು ರೋಗ ಭಾದೆಯೂ ಕಂಡುಬದಿದೆ. ಇದು ಇಳುವರಿ ಮೇಲೆ ಪರಿಣಾಮ ಬೀರಿದೆ ಎಂದು ವಿಜ್ಞಾನಿಗಳು ವರದಿ ನೀಡಿದ್ದಾರೆ. ಇದರ ಆಧಾರದ ಮೇಲೆ ತೊಗರಿ ಇಳುವರಿ ಕುಂಠಿತವಾಗಿದೆ ಎಂದು ಸರ್ಕಾರಕ್ಕೆ ಕೃಷಿ ಇಲಾಖೆಯು ವರದಿಯನ್ನೂ ಸಲ್ಲಿಸಿದೆ.

ಆದರೆ, ಈ ವರದಿ ಬಗ್ಗೆಯೂ ರೈತರು ಹಾಗೂ ಮುಖಂಡರು ಅನುಮಾನ ವ್ಯಕ್ತಪಡಿಸಿದ್ದಾರೆ.

ರೈತರು ತಾವೇ ಸಂಸ್ಕರಿಸಿದ ಬಿತ್ತನೆ ಮಾಡಿದ ಬೀಜ ಬೆಳೆ ತುಂಬಾ ಚೆನ್ನಾಗಿ ಬಂದಿದೆ. ಸರ್ಕಾರ ದಿಂದ ಏಜೆನ್ಸಿಗಳ ಮೂಲಕ ಬಿತ್ತನ ಮಾಡಿದ ಬೀಜವು ಕೇವಲ ಶೇ.10ರಿಂದ 20ರಷ್ಟು ಮಾತ್ರ ಕಾಯಿ ಕಟ್ಟಿದೆ. ಆದ್ದರಿಂದ ಬೀಜದ ಬಗ್ಗೆ ತನಿಖೆಯಾಗಬೇಕು.

ಮೇಲಾಗಿ ರೈತರು ಕಡಿಮೆ ಅಂತರದಲ್ಲಿ ಬಿತ್ತನೆ ಮಾಡಿದ್ದರಿಂದ ಬೆಳೆಯು ಕವಲು ಒಡೆದಿಲ್ಲ ಎಂಬ ಸಬೂಬನ್ನು ವಿಜ್ಞಾನಿಗಳ ಮೂಲಕ ಹೇಳಿಸಲಾಗಿದೆ.

ತೊಗರಿ ಬೀಜ ಪೂರೈಕೆ

ತೊಗರಿ ಹೂ ಗಿಡದ ಕೆಳಗೆ ಬಿಡುತ್ತದೋ, ಮೇಲ್ಭಾಗದಲ್ಲಿ ಬಿಡುತ್ತದೋ?, ರೈತರಿಗೆ ಹೇಗೆ ಬಿತ್ತನೆ ಮಾಡಬೇಕೆಂದು ಗೊತ್ತಿಲ್ಲವೇ ಎಂದು ಬಿಜೆಪಿ ರೈತ ಮೋರ್ಚಾದ ರಾಜ್ಯಾಧ್ಯಕ್ಷ ಎ.ಎಸ್.ಪಾಟೀಲ್ ನಡಹಳ್ಳಿ ಖಾರವಾಗಿ ಪ್ರಶ್ನಿಸುತ್ತಾರೆ. ಜಿಲ್ಲೆಯಲ್ಲಿ ಅನುಮೋದಿತ ಸುಮಾರು 10 ಏಜೆನ್ಸಿಗಳ ಮೂಲಕ ತೊಗರಿ ಬೀಜ ಪೂರೈಕೆಯಾಗಿದೆ. ಹವಾಮಾನ ವೈಪರೀತ್ಯದಿಂದ ತೊಗರಿ ಹೂವು ಉದುರುವಿಕೆಯಿಂದ ಇಳುವರಿ ಮೇಲೆ ಪರಿಣಾಮ ಬೀರಿದೆ.

11 ಮಧ್ಯಮ ನೀರಾವರಿ ಯೋಜನೆಗಳು ಸಕ್ರಿಯಗೊಳಿಸಲು ಆಗ್ರಹ

• ಉದಯವಾಹಿನಿ,ಚಿಂಚೋಳಿ

ಕಲ್ಯಾಣ ಕರ್ನಾಟಕದ ಕಲಬುರ್ಗಿ, ಬೀದರ, ಯಾದಗಿರಿ ಮೂರು ಜಿಲ್ಲೆಗಳಲ್ಲಿ 11ಮಾಧ್ಯಮ ನೀರಾವರಿ ಯೋಜನೆಗಳಿದ್ದು ಅಪಾರ ವಾದ ಪ್ರತಿಶತಃ 90ರಷ್ಟು ನೀರು ಸಂಗ್ರಹವಿದ್ದರು ರೈತರ ಜಮೀನುಗಳಿಗೆ ನೀರು ಹರಿಯದೆ ರೈತರು ಕಂಗಾಲಾಗಿದ್ದಾರೆ ಕಾರಣ ಯೋಜನೆ ಸಕ್ರಿಯಗೊಳಿಸಲು ಸಮಿತಿ ರಚನೆ ಮಾಡಬೇಕು ಎಂದು ಭೀಮಾ ಮಿಷನ್ ಅಧ್ಯಕ್ಷ ಭೀಮಶೇಟ್ಟಿ ಮುಕ್ಕಾ ಆಗ್ರಹಿಸಿದರು.

ರಾಜ್ಯದ ಮುಖ್ಯಮಂತ್ರಿಗಳಿಗೆ ಪತ್ರ ಬರೆದ ಅವರು **ಕಲಬುರ್ಗಿ:** ಜಿಲ್ಲೆಯಲ್ಲಿ 06 ಜಲಾಶಯಗಳಿದ್ದು ನೀರಿನ ಸಂಗ್ರಹ ಒಟ್ಟು ಸಾಮರ್ಥ್ಯ 14.848 ಟಿಎಂಸಿ,2024ರ ಸೆ.23ರಂತೆ 13.564 ಟಿಎಂಸಿ ಸಂಗ್ರಹಯಿದೆ,ಜಲಾಶಯಗಳಿಂದ 1,67,294.78 ಏಕರೆಯಷ್ಟು ನೀರಾವರಿ ಆಗಬೇಕು ಶೇ.90ರಷ್ಟು ನೀರಿದೆ ಆದರೆ ರೈತರಿಗೆ ಉಪಯೋಗ ಆಗುತ್ತಿಲ್ಲ,ಕಾಲುವೆಯಿದೆ ರೈತರ ಜಮೀನುಗಳಿಗೆ ನೀರು ಹರಿಯುತ್ತಿಲ್ಲ.

ಬೀದರ:- ಜಿಲ್ಲೆಯಲ್ಲಿ 03 ಜಲಾಶಯಗಳು ನೀರಿನಿಂದ ತುಂಬಿವೆ, ಒಟ್ಟು ನೀರಿನ ಸಂಗ್ರಹ ಸಾಮರ್ಥ್ಯ 9.378 ಟಿಎಂಸಿ ಇದೆ, 2024ರ ಸೆ.23ರಂತೆ ಮೂರು ಜಲಾಶಯಗಳಲ್ಲಿ 8.988 ಟಿಎಂಸಿ ನೀರುಯಿದ್ದು ಪ್ರತಿಶತಃ 96ರಷ್ಟು ನೀರಿದೆ,ಈ ಜಲಾಶಯಗಳಿಂದ 73,965.99 ಏಕರೆಯಷ್ಟು ನೀರಾವರಿ ಸೌಲಭ್ಯ ರೈತರು ಪಡೆಯಬೇಕು, ಆದರೆ ಕಾಲುವೆ ಮೂಲಕ ನೀರು ಹರಿಯುತ್ತಿಲ್ಲ ರೈತರಿಗೆ ಮುಟ್ಟುತ್ತಿಲ್ಲ.

ಯಾದಗಿರಿ:- ಜಿಲ್ಲೆಯಲ್ಲಿ 02 ಜಲಾಶಯಗಳಿದ್ದು ಒಟ್ಟು ನೀರಿನ ಸಂಗ್ರಹ ಸಾಮರ್ಥ್ಯ 0.639 ಟಿಎಂಸಿ ಯಿದೆ, 2024ರ ಸೆ.23ರಂತೆ ಎರಡು ಜಲಾಶಯಗಳಿಂದ 0.638 ಟಿಎಂಸಿ ನೀರಿದ್ದು,ಅಂದರೆ ಶೇಕಡಾ 100ರಷ್ಟು ನೀರಿದೆ,ಇವುಗಳಿಂದ 8,801.88ಏಕರೆಯಷ್ಟು ನೀರಾವರಿಯಾಗಬೇಕು ಆದರೆ ರೈತರ ಜಮೀನುಗಳಿಗೆ ನೀರು ಹರಿದಿಲ್ಲ.

> ಯಾವುದೇ ಡಿಸ್ಟ್ರಿಬೂಟರ್ ನಿಂದ ನೀರು ಬಿಟ್ಟಿಲ್ಲ,ಬಿಟ್ಟಿದೆ ಆದರೆ ಎಷ್ಟು ರೈತರಿಗೆ ಉಪಯೋಗವಾಗಿದೆ,ಎಷ್ಟು ನೀರು ಬಿಡಲಾಗಿದೆ,ಎಷ್ಟು ಏಕರೆಗೆ ನೀರು ಸರಬರಾಜು ಆಗಿದೆ,ಎಷ್ಟು ಹಣ ತೆರಿಗೆ ರೂಪದಲ್ಲಿ ಬಂದಿದೆ ಎಂದು ಸ್ಪಷ್ಟಪಡಿಸಲಿ ಎಂದು ತಾವು ಬೆಳಗಾವಿ ಅಧಿವೇಶನದಲ್ಲಿ ಚರ್ಚಿಸಿ ಸಮಿತಿ ರಚನೆ ಮಾಡಿ ತನಿಖೆ ನಡೆಸಿ ವರದಿ ಸಿದ್ದಪಡಿಸಬೇಕು
>
> –ಭೀಮಶೇಟ್ಟಿ ಮುಕ್ಕಾ
> ಭೀಮಾ ಮಿಷನ್ ಅಧ್ಯಕ್ಷ

ಕಾರಣ ಎಲ್ಲಾ ಮೂರು ಜಿಲ್ಲೆಗಳಲ್ಲಿ ಜಲಾಶಯ ನೀರು ಸಾಕಷ್ಟುಯಿದ್ದು ಸಮರ್ಪಕವಾಗಿ ರೈತರ ಜಮೀನುಗಳಿಗೆ ನೀರು ಸರಬರಾಜು ಆಗದೆ ರೈತರು ಕಂಗಾಲಾಗುತ್ತಿದ್ದಾರೆ,ಆದರೆ ನೀರಾವರಿ ಇಲಾಖೆಯವರಿಗೆ ಕೇಳಿದರೆ ನೀರು ಹರಿಸಲಾಗಿದೆ ಎಂದು ಅಪ್ಪಟ ಸುಳ್ಳು ಹೇಳುತ್ತಾರೆ.

ದತ್ತ ಜಯಂತಿಗೆ ಚಾಲನೆ: ಮೊದಲ ದಿನ ಸಂಕೀರ್ತನಾ ಯಾತ್ರೆ

• ಉದಯವಾಹಿನಿ, ಚಿಕ್ಕಮಗಳೂರು

ವಿಶ್ವ ಹಿಂದೂ ಪರಿಷದ್, ಬಜರಂಗದಳದ ವತಿಯಿಂದ ಆಯೋಜಿಸಿರುವ ದತ್ತ ಜಯಂತಿ ಉತ್ಸವದ ಆರಂಭದ ದಿನವಾದ ಗುರುವಾರ ಅನಸೂಯ ದೇವಿ ಸಂಕೀರ್ತನಾ ಯಾತ್ರೆ ನಡೆಯಿತು. ನಗರದ ಬೋಳರಾಮೇಶ್ವರ ದೇವಾಲಯ ಆವರಣದಿಂದ ಕಾಲ್ನಡಿಗೆ ಮೂಲಕ ಹೊರಟ ಸಂಕೀರ್ತನಾ ಯಾತ್ರೆ ಐ.ಜಿ. ರಸ್ತೆ, ರತ್ನಗಿರಿ ರಸ್ತೆಯ ಶ್ರೀರಾಮ ದೇವಸ್ಥಾನ ಹಾದು ಕಾಮಧೇನು ಗಣಪತಿ ದೇವಾಲಯ ತಲುಪಿತು.

ನೂರಾರು ಮಹಿಳೆಯರು ಕೊರಳಿಗೆ ಕೇಸರಿ ಶಾಲು ಧರಿಸಿ, ಅನಸೂಯ ದೇವಿಯ ಚಿತ್ರಪಟ ಹಿಡಿದು ಸಾಗಿದರು. ಮತ್ತೊಂದೆಡೆ ಭಜನಾ ಮಂಡಳಿ ಮಹಿಳೆಯರು ಭಜನೆ ಪದಗಳನ್ನು ಹಾಡುತ್ತಾ, ದತ್ತಾತ್ರೇಯ ಸ್ವಾಮಿ ಸ್ಮರಣೆಯೊಂದಿಗೆ ಹೆಜ್ಜೆಹಾಕಿದರು. ಕೆಲವರು ಕೇಸರಿ ಭಾಗವತ ಧ್ವಜ ಹಿಡಿದು, ದತ್ತಾತ್ರೇಯ ಸ್ವಾಮಿ ಮೂರ್ತಿಯ ಅಡ್ಡೆಯನ್ನು ಹೊತ್ತು ಸಾಗಿದರು.

ಸಂಕೀರ್ತನಾ ಯಾತ್ರೆಯನ್ನು ರಸ್ತೆಯುದ್ದಕ್ಕೂ ನಿಂತು ಜನ ಕಣ್ಣುಂಬಿಕೊಂಡರು. ಮೆರವಣಿಗೆ ಅಂಗವಾಗಿ ಹೋಟೆಲ್, ಅಂಗಡಿ- ಮುಂಗಟ್ಟುಗಳನ್ನು ಮುಚ್ಚಲಾಗಿತ್ತು ಬಳಿಕ ವಾಹನಗಳಲ್ಲಿ ಶ್ರೀಗುರು ದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ದರ್ಗಾಕ್ಕೆ ತೆರಳಿದರು. ಬಿ ಜಿಲ್ಲೆ ಅಲ್ಲಿ ಅನಸೂಯದೇವಿ ಪೂಜೆ, ಗಣಪತಿಪೂಜೆ, ದುರ್ಗಾ ಹೋಮ, ಕಲಾಶಾಭಿಷೇಕ ಮಾಡಿದರು.

ಉದಯವಾಹಿನಿ ಚಿತ್ರ

ದೇವಿಗೆ ವಿಶೇಷ ಪೂಜೆ

ದೇವಾಲಯದಲ್ಲಿ ಬೆಳಿಗ್ಗೆ ಅನಸೂಯ ದೇವಿಗೆ ವಿಶೇಷ ಪೂಜೆ ನಡೆಯಿತು. ಬಳಿಕ ಯಾತ್ರೆ ಆರಂಭವಾಗುತ್ತಿದ್ದಂತೆ ವಿವಿಧೆಡೆಗಳಿಂದ ಬಂದಿದ್ದ ನೂರಾರು ಭಕ್ತರು, ಹಿಂದೂಪರ ಸಂಘಟನೆ, ಭಜನಾ ಮಂಡಳಿ ಮಹಿಳಾ ಕಾರ್ಯಕರ್ತೆಯರು ಮೆರವಣಿಗೆಯಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.

ಸಿದ್ದರಾಮಯ್ಯ ಹೃದಯಹೀನ ಸಿಎಂ: ಸ್ವಾಮೀಜಿ ಕಿಡಿ

• ಉದಯವಾಹಿನಿ, ಹಿರೇಬಾಗೇವಾಡಿ

ಲಿಂಗಾಯತರ ವಿರುದ್ಧ ಸಿದ್ದರಾಮಯ್ಯ ಹೃದಯಹೀನರಾಗಿ ನಡೆದುಕೊಂಡಿದ್ದಾರೆ. ನೀವು ಅಧಿಕಾರಕ್ಕೆ ಬರಲು ನಾವು ಆಶೀರ್ವಾದ ಮಾಡಿದ್ದೇವು. ಅದಕ್ಕೆ ಪ್ರತಿಯಾಗಿ ನಮ್ಮನ್ನೇ ಹೊಡೆದಿದ್ದೀರಿ. ಮುಂದಿನ ಚುನಾವಣೆಯಲ್ಲಿ ಇದರ ಪರಿಣಾಮ ಎದುರಿಸುತ್ತೀರಿ ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠಾಧಿಪತಿ ಬಸವಜಯ ಮೃತ್ಯುಂಜಯ ಸ್ವಾಮೀಜಿ ಎಚ್ಚರಿಸಿದರು. ಪಂಚಮಸಾಲಿ ಮೀಸಲಾತಿ ಹೋರಾಟಗಾರರ ಮೇಲೆ ನಡೆದ ಲಾಠಿಚಾರ್ಜ್ ಖಂಡಿಸಿ, ಇಲ್ಲಿನ ರಾಷ್ಟ್ರೀಯ ಹೆದ್ದಾರಿ ಮೇಲೆ ಗುರುವಾರ ಧರಣಿ ನಡೆಸಿದ ಬಳಿಕ ಅವರು ಮಾತನಾಡಿದರು.

ಲಾಠಿಚಾರ್ಜ್ ನಡೆಸಿದಾಗ ನಮ್ಮ ಸಮಾಜದ ಒಬ್ಬ ಶಾಸಕರು ಮುಖ್ಯಮಂತ್ರಿ ಬಳಿ ಹೋಗಿ ಪರಿಪರಿಯಾಗಿ ಬೇಡಿಕೊಂಡಿದ್ದಾರೆ. ಲಾಠಿಚಾರ್ಜ್ ನಿಲ್ಲಿಸಿ ಎಂದು ಕೇಳಿದ್ದಾರೆ. ಏಯ್ ಹೊಡೀಲಿ ಬಿಡರಿ ಅವರನ್ನು ಅವರು ನಮ್ಮನ್ನೇ ಹೆದರಿಸುತ್ತಾರೆಯೇ? ನಮ್ಮ ಬಳಿಯೂ ಲಾಠಿ ಇದೆ' ಎಂದು ಸಿದ್ದರಾಮಯ್ಯ ಮರುತ್ತರ ನೀಡಿದ್ದಾರೆ. ಈ ವಿಷಯವನ್ನು ಶಾಸಕರೇ ಬಂದು ನನಗೆ ಹೇಳಿದ್ದಾರೆ. ಸುವರ್ಣ ವಿಧಾನಸೌಧದ ಸಿಸಿಟಿವಿ ಕ್ಯಾಮೆರಾಗಳನ್ನು ತಪಾಸಣೆ ಮಾಡಿ ಖಾತ್ರಿ ಮಾಡಿಕೊಳ್ಳಬಹುದು' ಎಂದರು.

ಉದಯವಾಹಿನಿ ಚಿತ್ರ

> ಬಸವಣ್ಣ ಅವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿದಾಗ ನಾವೆಲ್ಲ ನಿಮ್ಮ ತಲೆ ಮೇಲೆ ಹೂವು ಹಾಕಿ ಆಶೀರ್ವಾದ ಮಾಡಿದ್ದೇವು. ಆದರೆ, ಲಿಂಗಾಯತರ ಬಗ್ಗೆ ನಿಜವಾಗಿಯೂ ನಿಮ್ಮ ಧೋರಣೆ ಏನು ಎಂಬುದನ್ನು ಈಗ ತೋರಿಸಿದ್ದೀರಿ. 2028ಕ್ಕೆ ನಮ್ಮ ಸಮಾಜಕ್ಕೆ ಗೌರವ ಕೊಡುವ ಮುಖ್ಯಮಂತ್ರಿಯನ್ನೇ ನಾವು ಆರಿಸುತ್ತೇವೆ' ಎಂದೂ ಸ್ವಾಮೀಜಿ ಎಚ್ಚರಿಸಿದರು.

ಲಾಠಿಚಾರ್ಜ್ ಮಾಡಿರುವುದನ್ನು ಖಂಡಿಸಿ ತೀವ್ರ ಪ್ರತಿಭಟನೆ

• ಉದಯವಾಹಿನಿ ಕಾರಟಗಿ

ಬೆಳಗಾವಿ ಘಟನೆಯಿಂದ ಇಡೀ ಸಮಾಜಕ್ಕೆ ಅಪಾರ ನೋವಾಗಿದೆ. ಪಂಚಮಸಾಲಿ ಸಮಾಜ ಬಾಂಧವರು ಸರ್ಕಾರಕ್ಕೆ ಕೆಟ್ಟ ಹೆಸರು ತರಲಿಕ್ಕೆ ಬಂದವರಲ್ಲ, ನ್ಯಾಯಯತ ಬೇಡಿಕೆ ಈಡೇರಿಸುವಂತೆ ಒತ್ತಾಯ ಮಾಡಲು ಬಂದವರು. ಅಂತಹವರ ಮೇಲೆ ಲಾಠಿ ಚಾರ್ಜ್ ನಡೆಸಿರುವುದು ಖಂಡನೀಯ ಎಂದು ಪಂಚಮಸಾಲಿ ಸಮಾಜದ ಮುಖಂಡ ಚನ್ನಬಸಪ್ಪ ಸುಂಕದ ಹೇಳುದರು.

ಬೆಳಗಾವಿಯಲ್ಲಿ ಪಂಚಮಸಾಲಿ ಮೀಸಲಾತಿ ಹೋರಾಟ ಸಂದರ್ಭದಲ್ಲಿ ಲಾಠಿ ಚಾರ್ಜ್ ನಡೆಸಿರುವುದನ್ನು ವಿರೋಧಿಸಿ ಪಂಚಮಸಾಲಿ ಸಮಾಜದ ಮುಖಂಡರು ಗುರುವಾರ ಪಟ್ಟಣದ ಪುರಸಭೆಯಿಂದ ಕನಕದಾಸ ವೃತ್ತದವರೆಗೆ ಮೆರವಣಿಗೆ ನಡೆಸಿ ಟೈಯರ್ ಗೆ ಬೆಂಕಿ ಹಚ್ಚುವ ಮೂಲಕ 20 ನಿಮಿಷಗಳ ಕಾಲ ರಸ್ತೆ ತಡೆ ನಡೆಸಿ ಸರಕಾರದ ವಿರುದ್ಧ ಘೋಷಣೆ ಕೂಗುವ ಮೂಲಕ ತೀವ್ರ ಪ್ರತಿಭಟನೆ ನಡೆಸಿದರು.

ಸಮಾಜಕ್ಕೆ ಎದುರಾದ ಕಪ್ಪುಚುಕ್ಕೆ ತೆಗೆದು ಹಾಕಬೇಕು ಎಂದು ಆಗ್ರಹಿಸಿದರು. ಬೆಳಗಾವಿ ಘಟನೆಗೆ ಸಂಬಂಧಿಸಿದಂತೆ ಹೋರಾಟಗಾರರ ವಿರುದ್ಧ ಎಲ್ಲಾ ಪ್ರಕರಣ ರದ್ದುಪಡಿಸಬೇಕು.

ಸರ್ಕಾರವೇ ಗಾಯಾಳುಗಳಿಗೆ ಚಿಕಿತ್ಸೆ ವ್ಯವಸ್ಥೆ ಮಾಡಬೇಕು. ಮುಂದೆ ಈ ರೀತಿಯಲ್ಲಿ ಎಲ್ಲಿಯೂ ಆಗದಂತೆ ಸರ್ಕಾರ ಜಾಗ್ರತೆ ವಹಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಈ ವೇಳೆ ಸಮಾಜದ ಮುಖಂಡರಾದ ವಿರೂಪಾಕ್ಷಪ್ಪ ಕಟಾಂಬಲಿ, ಕಳಕನ ಗೌಡ, ಪಾಲಾಕ್ಷಪ್ಪ ಕೆಂಡದ್, ಶರಣಪ್ಪ ಶಿವಪೂಜೆ. ಬಸವರಾಜ್ ಎತ್ತಿನಮನೆ, ಶಿವಶರಣೆಗೌಡ ಯರಡೋಣಾ, ವಿರೂಪಾಕ್ಷ ಗುಂಡೂರು. ಅಮರೇಶ್ ಪಾಟೀಲ್. ನಾಗರಾಜ್ ಗುಂಡೂರು. ಮುರುಡಪ್ಪ ಹೊಸಮನಿ, ಶರಣಪ್ಪ ಹೊಸಮನಿ, ಅಮರೇಶ್ ಕುಳಗಿ, ಸಂಗನಗೌಡ, ಶಿವು ಮೇಲ್ಗಡೆ. ಮಂಜು ಬಸಾಪುರ. ಶ್ಯಾಮ್ ರಾಯ್, ಶಿವರಾಜ್ ಈಳಿಗನೂರು, ಭದ್ರಗೌಡ ಪನ್ನಾಪುರ, ಬಸವರಾಜ್ ಗುಂಡೂರು,ಶರಣಗೌಡ್ರು, ಚಳ್ಳೂರ್ ಬಸವರಾಜಪ್ಪ, ತೆಂಗಿನಕಾಯಿ ಬಸನಗೌಡ ಬಸವರಾಜ್ ಶಿವಶಕ್ತಿ, ಶರಣಪ್ಪ ಕಟಾಂಬಲಿ, ವಿಜಯ ಕೋಲ್ಕಾರ್ ಸೇರಿ ತಾಲ್ಲೂಕಿನ ಪಂಚಮಸಾಲಿ ಸಮಾಜದ ಮುಖಂಡರು ಇದ್ದರು.

ಉದಯವಾಹಿನಿ ಚಿತ್ರ

ಸೂಕ್ತ ಕ್ರಮ ಕೈಗೊಳ್ಳಿ

ಬೆಳಗಾವಿಯಲ್ಲಿ ನಡೆದ ಹೋರಾಟದ ಸಂದರ್ಭದಲ್ಲಿ ಯಾರೋ ಕಿಡಿಗೇಡಿಗಳು ಕಲ್ಲು ತೂರುವ ಮೂಲಕ ಹೋರಾಟದ ದಿಕ್ಕು ತಪ್ಪಿಸುವ ಮತ್ತು ಸಮಾಜಕ್ಕೆ ಕಪ್ಪು ಚುಕ್ಕೆ ತರುವ ಕೆಲಸ ಮಾಡಿದ್ದಾರೆ. ಸರ್ಕಾರ ಇಡೀ ಘಟನೆಯ ಬಗ್ಗೆ ಸಮಗ್ರ ತನಿಖೆ ನಡೆಸಬೇಕು. ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಕ್ರೀಡಾಪಟುಗಳು ಗುರುತಿಸುವ ಚೈತ್ರಾ ಬಳಗದ ಕಾರ್ಯ ನಿಜಕ್ಕೂ ಶ್ಲಾಘನೀಯ

• ಉದಯವಾಹಿನಿ, ಸಿಂಧನೂರು

ಇಂಡಿಯನ್ ಪ್ರೀಮಿಯರ್ ಲೀಗ್ ಮಾದರಿಯಲ್ಲಿ ನಡೆಯುವ ಸಿಂಧನೂರು ಪ್ರೀಮಿಯರ್ ಲೀಗ್ ಗ್ರಾಮೀಣ ಪ್ರದೇಶದ ಪ್ರತಿಭೆಗಳನ್ನು ಗುರು ತಿಸಿವ ಒಳ್ಳೆಯ ಅವಕಾಶ ಜೊತೆಗೆ ಉತ್ತಮ ವೇದಿಕೆಯಾಗಿದೆ ಎಂದರೆ ತಪ್ಪಾಗಲಾರದು ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ಬಾಬುಗೌಡ ಬಾದರ್ಲಿ ಹೇಳಿದರು.

ನಗರದ ಪಿಡಬ್ಲ್ಯೂಡಿ ಕ್ಯಾಂಪನ ಬಳಿ ಬರುವ ಗುಂಡಮ್ಮ ಕ್ಯಾಂಪ್ ಆಯೋಜಿಸಿದ್ದ ಎಸ್ ಪಿ ಎಲ್ ಸೀಸನ್ 7ರ ಆಟಗಾರ ಹರಾಜು ಪ್ರಕ್ರಿಯೆಯ ಪ್ರತಿ ವರ್ಷ ಚೈತ್ರ ಸಿ.ಸಿ. ಗೆಳೆಯರ ಬಳಗದ ವತಿಯಿಂದ ಸಿಂಧನೂರು ಪ್ರೀಮಿಯರ್ ಲೀಗ್ ನಾಗರಾಜ್ ಎಸ್. ಪಿ ಎಲ್ ಅಧ್ಯಕ್ಷರು ಅವರು ನೇತೃತ್ವದಲ್ಲಿ ನಡೆಯುವ ಗ್ರಾಮೀಣ ಪ್ರದೇಶದ ಪಂದ್ಯಗಳಿಗೆ ಒಳ್ಳೆ ಅವಕಾಶ ಕಲ್ಪಿಸಲಾಗಿದೆ ಎಂದು ಆಟಗಾರರ ಬಿಡ್ಡಿಂಗ್ ಗೆ ಚಾಲನೆ ನೀಡಿ ಮಾತನಾಡಿದರು

ಇದೇ ರೀತಿಯಲ್ಲಿ ಇಂತಹಾ ವೇದಿಕೆಯನ್ನು ಬಳಸಿಕೊಂಡು ಸಿಂಧನೂರನ ಮನೋಜ್ ಭಾ

ದಿನ ಭವಿಷ್ಯ

ರಾಹುಕಾಲ	ಬೆಳಿಗ್ಗೆ	10:30 ರಿಂದ 12:00
ಗುಳಿಕ ಕಾಲ	ಬೆಳಿಗ್ಗೆ	07:30 ರಿಂದ 09:00
ಯಮಗಂಡ ಕಾಲ	ಮಧ್ಯಾಹ್ನ	03:00 ರಿಂದ 04:30

ಮೇಷ ಇಂದು ನಿಮ್ಮ ತಂದೆ ತಾಯಿಯರಲ್ಲಿ ಯಾರಾದರೂ ಒಬ್ಬರು ಹಣವನ್ನು ಸಂಗ್ರಹಿಸುವ ಬಗ್ಗೆ ಉಪನ್ಯಾಸಗಳನ್ನು ನೀಡಬಹುದು, ನೀವು ಅವರ ಮಾತುಗಳನ್ನು ಬಹಳ ಗಮನವಾಗಿ ಕೇಳಬೇಕಾದ ಅಗತ್ಯವಿದೆ.

ವೃಷಭ ಇಂದು ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ನೀವು ಹಣಕಾಸಿನ ಲಾಭ ತರುವ ಅದ್ಭುತವಾದ ಹೊಸ ಕಲ್ಪನೆಗಳನ್ನು ಪ್ರಸ್ತುತಪಡಿಸುತ್ತೀರಿ.

ಮಿಥುನ ಸ್ನೇಹಿತರು ಇಂದು ರಾತ್ರಿ ರೋಮಾಂಚಕವಾದದ್ದನ್ನೇನಾದರೂ ಯೋಜಿಸಿ ನಿಮಗೆ ಆನಂದ ತರುತ್ತಾರೆ. ಪ್ರೇಮಪ್ರಯಾಣ ಮಧುರವಾಗಿದ್ದರೂ ಅಲ್ಪಾವಧಿಯದ್ದಾಗಿರುತ್ತದೆ.

ಕರ್ಕಾಟಕ ವ್ಯಾಪಾರಿಗಳಿಗೆ ಇಂದು ಹಣದ ನಷ್ಟವಾಗುವ ಸಾಧ್ಯತೆ ಇದೆ ಆದ್ದರಿಂದ ಇಂದು ಯೋಚಿಸಿ ಅರ್ಥಮಾಡಿಕೊಂಡು ನಡೆಯಿರಿ ನೀವು ಪ್ರೀತಿಸುವವರ ಜೊತಗಿನ ತಪ್ಪು ಕಲ್ಪನೆಯನ್ನು ಪರಿಹರಿಸಲಾಗುತ್ತದೆ.

ಸಿಂಹ ನಿಮ ಹವ್ಯಾಸಗಳನ್ನು ಪೂರೈಸಲು ನೀವು ಈ ಸಮಯವನ್ನು ಬಳಸಬಹುದು. ನೀವು ಯಾವುದಾದರು ಪುಸ್ತಕವನ್ನು ಓದಬಹುದ್ ಅಥವಾ ನಿಮಗೆ ನೆಚ್ಚಿದ ಸಂಗೀತ ಕೇಳಬಹುದು.

ಕನ್ಯಾ ತಾತ್ಕಾಲಿಕವಾದ ಉದ್ವೇಗದಲ್ಲಿ ನಿರ್ಧಾರ ಕೈಗೊಳ್ಳಬೇಡಿ ಇದು ನಿಮ್ಮ ಮಕ್ಕಳ ಹಿತಾಸಕ್ತಿಗೆ ಹಾನಿ ಮಾಡಬಹುದು. ನಿಮ್ಮ ಹಣವನ್ನು ಉಳಿಸಲು ನೀವು ಇಂದು ನಿಮ್ಮ ಮನೆಯ ಜನರೊಂದಿಗೆ ಮಾತನಾಡಬೇಕು.

ತುಲಾ ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು ಮತ್ತು ಆ ಸಲಹೆಗೆ ಜೀವನದಲ್ಲಿ ಸ್ಥಾನವನ್ನು ಸಹ ನೀಡಬಹುದು.

ವೃಶ್ಚಿಕ ಗರ್ಭಿಣಿಯರಿಗೆ ಉತ್ತಮ ದಿನವಲ್ಲ. ನೀವು ನಡೆಯುವಾಗ ಹೆಚ್ಚು ಜಾಗರೂಕರಾಗಿರಬೇಕು. ನಿಮ್ಮ ಖರ್ಚುಗಳನ್ನು ನಿಯಂತ್ರಿಸಲು ಮತ್ತು ಕೇವಲ ಅಗತ್ಯವಾದ ವಸ್ತುಗಳ ಮಾತ್ರ ಇಂದು ಖರೀದಿಸಲು ಪ್ರಯತ್ನಿಸಿ.

ಧನಸ್ಸು ಕುಡಿಯುವ ಅಭ್ಯಾಸವನ್ನು ತೊಡೆದುಹಾಕಲು ಇದೊಂದು ಅತ್ಯಂತ ಪವಿತ್ರವಾದ ದಿನ. ನೀವು ವೈನ್ ಕುಡಿಯುವುದು ಆರೋಗ್ಯದ ಪ್ರಾಣಾಂತಿಕ ಶತ್ರು ಎಂದು ನೀವು ಅರ್ಥ ಮಾಡಿಕೊಳ್ಳಬೇಕು.

ಮಕರ ಮನೆಯಲ್ಲಿ ಒತ್ತಡ ನಿಮಗೆ ಸಿಟ್ಟು ತರಿಸಬಹುದು. ಅವುಗಳನ್ನು ದಮನಗೊಳಿಸುವುದು ಕೇವಲ ದೈಹಿಕ ಸಮಸ್ಯೆಯನ್ನು ಹೆಚ್ಚಿಸುತ್ತದೆ. ದೈಹಿಕ ಚಟುವಟಿಕೆಯೊಂದಿಗೆ ಇದನ್ನು ತೊಡೆದುಹಾಕಿ.

ಕುಂಭ ನೀವು ಎಲ್ಲಾ ಸಾಧ್ಯವಿರುವ ಕೋನಗಳಿಂದ ಹೂಡಿಕೆಯನ್ನು ಪರಿಶೀಲಿಸದೇ ಹೋದರೆ ನಷ್ಟ ಖಚಿತ. ನಿಮ್ಮ ಕುಟುಂಬದ ಜೊತೆ ಕಟ್ಟುನಿಟ್ಟಾಗಿ ವರ್ತಿಸಬೇಡಿ ಇದು ಶಾಂತಿ ಭಂಗವುಂಟುಮಾಡಬಹುದು.

ಮೀನ ನಿಮಗೇನು ಒಳ್ಳೆಯದೆಂದು ನಿಮಗೆ ಮಾತ್ರ ಗೊತ್ತು – ಆದ್ದರಿಂದ ಧೃಢವಾಗಿರಿ ಮತ್ತು ಧೈರ್ಯಶಾಲಿಗಳಾಗಿರಿ ಮತ್ತು ತಕ್ಷಣದ ನಿರ್ಧಾರಗಳನ್ನು ತೆಗೆದುಕೊಳ್ಳಿ ಹಾಗೂ ಫಲಿತಾಂಶಗಳಿಗೆ ಸಿದ್ಧವಾಗಿರಿ.

ಕಾಂಗ್ರೇಸ್ ಸರಕಾರ ವೀರಶೈವ ಲಿಂಗಾಯತ ವಿರೋಧಿ ಸರಕಾರ

● ಪಂಚಮಸಾಲಿ ಸಮಾಜದ ಹಾಗೂ ಪೂಜ್ಯರಿಗೆ ಕ್ಷಮೆಯನ್ನು ಸಿಎಂ ಕೇಳಬೇಕು: ಎ.ಎಸ್ ಪಾಟೀಲ್ ನಡಹಳ್ಳಿ

• ಉದಯವಾಹಿನಿ, ಮುದ್ದೇಬಿಹಾಳ

ರಾಜ್ಯ ಕಾಂಗ್ರೇಸ್ ಸರಕಾರ ವೀರಶೈವ ಲಿಂಗಾಯತ ಸಮಾಜದ ವಿರೋಧಿ ಸರಕಾರವಾಗಿದೆ ಲಿಂಗಾಯತ ಪಂಚಮಸಾಲಿ ಸಮಾಜದ 2ಎ ಮೀಸಲಾತಿ ಹೋರಾಟ ಹತ್ತಿಕ್ಕುವ ಕೆಲಸವನ್ನು ರಾಜ್ಯ ಕಾಂಗ್ರೇಸ್ ಸರಕಾರ ಮಾಡಿದೆ ಎಂದು ಮಾಜಿ ಶಾಸಕ ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ ಎ.ಎಸ್ ಪಾಟೀಲ್ ನಡಹಳ್ಳಿ ಹೇಳಿದರು.

ಅವರು ಗುರುವಾರ ಪಂಚಮಸಾಲಿ2ಎ ಮೀಸಲಾತಿ ಹೋರಾಟ ಹತ್ತಿಕ್ಕಲು ಬೆಳಗಾವಿಯಲ್ಲಿ ಹೋರಾಟಗಾರರ ಮೇಲೆ ಲಾಠಿ ಚಾರ್ಜ್ ಹಾಗೂ ಪಂಚಮಸಾಲಿ ಸಮಾಜದ ಬಸವಜಯ ಮೃತ್ಯುಂಜಯ ಮಹಾಸ್ವಾಮಿಜೀ ಅವರ ಬಂಧನ ಖಂಡಿಸಿ ನಡಹಳ್ಳಿ ಅವರ ನೇತೃತ್ವದಲ್ಲಿ ನಡೆದ ಮುದ್ದೇಬಿಹಾಳ ಮತಕ್ಷೇತ್ರದ ಪಂಚಮಸಾಲಿ ಸಮಾಜದ ಹೋರಾಟದಲ್ಲಿ ಪಾಲ್ಗೊಂಡು ಮಾತನಾಡಿದರು.

ಕಾಂಗ್ರೇಸ್ ಪಕ್ಷದ ಶಾಸಕರು ನಾಯಕರಿಗೆ ದಮ್ ತಾಕತ್ತು ಇದ್ರೆ ಬೆಳಗಾವಿ ಅಧಿವೇಶನದಲ್ಲಿ ಪಂಚಮಸಾಲಿ 2ಎ ಮೀಸಲಾತಿ ಹಕ್ಕೊತ್ತಾಯ ಪಂಚಮಸಾಲಿ ಸಮಾಜದ ಹಾಗೂ ಬಸವಜಯ ಮೃತ್ಯುಂಜಯ ಮಹಾಸ್ವಾಮಿಗಳಿಗೆ ಕ್ಷಮೆಯನ್ನು ಕೂರಬೇಕು ಸಿಎಂ ಗೆ ಕ್ಷಮೆ ಕೋರಲು ಆಗ್ರಹಿಸಬೇಕು ಮತ್ತು ಪಕ್ಷಾತೀತವಾಗಿ ಎಲ್ಲಾ ವೀರಶೈವ ಲಿಂಗಾಯತ ಸಮಾಜದ ಶಾಸಕರು ಸದನದ ಬಾವಿಗೆ ಇಳಿದು ಧರಣಿ ಮಾಡಬೇಕು ಎಂದು ಆಗ್ರಹಿಸಿದರು.

ಪಂಚಮಸಾಲಿ 2ಎ ಮೀಸಲಾತಿ ಹಕ್ಕೊತ್ತಾಯ 12 ವರ್ಷಗಳಿಂದ ಇದೆ ಬಿಜೆಪಿ ಸರಕಾರದ ಅವಧಿಯಲ್ಲಿ ಲಕ್ಷಾಂತರ ಜನರು ಬೆಂಗಳೂರು ಅರಮನೆ ವರಗೆ ಪಾದಯಾತ್ರೆ ಮಾಡಿ ಹೋರಾಟ ಮಾಡಿದಾಗ ನಮ್ಮ ಬಿಜೆಪಿ ಸರಕಾರ ಅವರಿಗೆ ರಕ್ಷಣೆ ನೀಡಿದೆ ಆದ್ರೆ ಲಿಂಗಾಯತ ವಿರೋಧಿ ಕಾಂಗ್ರೇಸ್ ಸರಕಾರ ಮಾತ್ರ ಅವರ ಮೇಲೆ ಲಾಠಿಚಾರ್ಜ್ ಮಾಡಿ ಹೋರಾಟ ಹತ್ತಿಕ್ಕಲು ಯತ್ನ ಮಾಡುತ್ತಿದೆ

ಸಿವಿಲ್ ಡ್ರೆಸ್ ನಲ್ಲಿಯ ಪೂಲೀಸರು ಹೋರಾಟಗಾರರ ಮಧ್ಯೆ ಸೇರಿಕೊಂಡು ಅವರೇ ಕಲ್ಲು ಚಪ್ಪಲಿ ಎಸೆದು ಲಾಠಿ ಚಾರ್ಜ್ ಮಾಡಿದ್ದಾರೆ ಎಂದು ಆರೋಪಿಸದ ನಡಹಳ್ಳಿ ಅವರು ಎಡಿಜಿಪಿ ಎಸ್ ಪಿ ಅವರನ್ನು ಕರ್ತವ್ಯದಿಂದ ವಜಾಗೂಳಿಸಬೇಕೆಂದರು. ಈಗಾಗಲೇ ನಮ್ಮ ಬಿಜೆಪಿ ಸರ್ಕಾರ 2 ಡಿ ಮೀಸಲಾತಿ ನೀಡಿದೆ ಆದನ್ನು ಕಾಂಗ್ರೇಸ್ ಸರಕಾರ ಅನುಷ್ಠಾನ ಮಾಡಬೇಕಿದೆ. ಪಂಚಮಸಾಲಿ ಸಮಾಜದ ಮುಖಂಡರಾದ ಎಂ.ಎಸ್ ಪಾಟೀಲ್, ಮುತ್ತು ಸಾಹುಕಾರ್ ಅಂಗಡಿ, ಎಂ.ಎಸ್ ಹಗಟಗಿ ಮಾತನಾಡಿ ನಮ್ಮ ಪಂಚಮಸಾಲಿ ಸಮಾಜದ ಹೋರಾಟ ಹತ್ತಿಕ್ಕಲು ಕಾಂಗ್ರೇಸ್ ಸರಕಾರ ಲಾಠಿ ಚಾರ್ಜ್ ಮಾಡಿಸಿದೆ ಇದರಲ್ಲಿ ನಮ್ಮ ಸಮಾಜದ ಅನೇಕ ಹಿರಿಯರು ಸೇರಿದಂತೆ ಆಸ್ಪತ್ರೆ ಗೆ ದಾಖಲು ಆಗಿದ್ದಾರೆ ಇದರ ಜವಾಬ್ದಾರಿಯನ್ನು ರಾಜ್ಯ ಸರಕಾರ ವಹಿಸಿಕೊಳ್ಳಬೇಕು, 12 ಶತಮಾನದಲ್ಲಿ ಕೂಂಡಿಮಂಚಣ್ಣ ಲಿಂಗಾಯತರ ಹತ್ಯೆ ಮಾಡಿಸಿದ್ದರು. ಇಂದು ಕಾಂಗ್ರೇಸ್ ನ ಲಿಂಗಾಯತ ವಿರೋಧಿ ಸಿಎಂ ಸಿದ್ದರಾಮಯ್ಯ ಲಿಂಗಾಯತರ ಮೇಲೆ ಲಾಠಿ ಚಾರ್ಜ್ ಮಾಡಿಸಿದ್ದಾರೆ ಪಂಚಮಸಾಲಿ ಸಮಾಜದ ಮುಖಂಡರು ಇದ್ದರು.

ಕಾಂಗ್ರೇಸ್ ವಿರುದ್ಧ ಘೋಷಣೆ

ಮೆರವಣಿಗೆ ಉದ್ದಕ್ಕೂ ರಾಜ್ಯ ಕಾಂಗ್ರೇಸ್ ಹಾಗೂ ಸಿಎಂ ಸಿದ್ದರಾಮಯ್ಯ ವಿರುದ್ಧ ಘೋಷಣೆ ಕೂಗಿದರು ಬಸವೇಶ್ವರ ವೃತ್ತದಲ್ಲಿ ಕಾಂಗ್ರೇಸ್ ಸರಕಾರ ಪ್ರತಿಕೃತಿಯನ್ನು ದಹಿಸಲಾಯಿತು , ಬಸವೇಶ್ವರ ವೃತ್ತದಲ್ಲಿ ನಡೆದ ಹೋರಾಟ ಸ್ಥಳಕ್ಕೆ ಆಗಮಿಸಿದ ತಹಶೀಲ್ದಾರ ಬಲರಾಮ ಕಟ್ಟಿಮನಿಯವರಿಗೆ ಮನವಿಯನ್ನು ಸಲ್ಲಿಸಲಾಯಿತು.

ಉದಯವಾಹಿನಿ ಚಿತ್ರ

ಲಾಠಿ ಚಾರ್ಜ್ ನಲ್ಲಿ ಭಾಗವಹಿಸಿದ ಹಿರಿಯ ಪೂಲೀಸ್ ಅಧಿಕಾರಿಗಳು ಸೇರಿದಂತೆ ಎಲ್ಲರನ್ನೂ ಕರ್ತವ್ಯದಿಂದ ಅಮಾನತ್ತುಗೂಳಿಸಬೇಕು ನಮ್ಮ ಸಮಾಜ ಎಫ್ಐಆರ್ ಗೆ ಹೆದರವುದಿಲ್ಲಾ ಎಷ್ಟು ಜನರನ್ನು ಜೈಲಿಗೆ ಹಾಕ್ತಿರ ಹಾಕಿರಿ ನಮ್ಮ ಹೋರಾಟ ಇನ್ನೂ ಉಗ್ರವಾಗಿ ಮುಂದುವರೆಯುತ್ತದೆ -ನಡಹಳ್ಳಿ

ಬಸವೇಶ್ವರ ವೃತ್ತದಲ್ಲಿ ಅರ್ಧಗಂಟೆಗೂ ಹೆಚ್ಚು ನಡೆದ ರಸ್ತೆ ತಡೆ ಹೋರಾಟದಿಂದ ವಾಹನಗಳು ವಾಹನ ಸಂಚಾರಿಗಳು ಜನರು ಪರದಾಡಿದರು.ಪಕ್ಷಾತೀತ ಹೋರಾಟಕ್ಕೆ ಕರೆ ನೀಡಿದ್ದ ಪಂಚಮಸಾಲಿ ಸಮಾಜದ ಹೋರಾಟದಲ್ಲಿ ಕಾಂಗ್ರೆಸ್ ಬೆಂಬಲಿತ ಮುಖಂಡರು ಭಾಗವಹಿಸಿರಲಿಲ್ಲಾ.

ಲಿಂಗಾಯತ ವಿರೋಧಿ ಕಾಂಗ್ರೇಸ್

ರೈತರ ಸಮಸ್ಯೆ: 3 ತಾಲ್ಲೂಕುಗಳಲ್ಲಿ ಕಚೇರಿಗಳ ಅಭಿವೃದ್ಧಿಗಾಗಿ ಮನವಿ

• ಉದಯವಾಹಿನಿ, ಯಾದಗಿರಿ

ಜಿಲ್ಲೆಯ ರೈತರ ವಿವಿಧ ಬೇಡಿಕೆಗಳು ಹಾಗೂ ಮೂರು ನೂತನ ತಾಲ್ಲೂಕಿನಲ್ಲಿ ತಾಲ್ಲೂಕು ಕಚೇರಿಗಳ ಆರಂಭಿಸುವುದರ ಜೊತೆಗೆ ಅಭಿವೃದ್ಧಿ ಪಡಿಸುವಂತೆ ಒತ್ತಾಯಿಸಿ ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ರಾಜ್ಯ ರೈತ ಸಂಘ ಹಸಿರು ಸೇನೆ ವಾಸುದೇವ ಮೇಟಿ ಬಣದ ವತಿಯಿಂದ ಬೆಳಗಾವಿಯ ಸುವರ್ಣ ಸೌಧದ ಎದುರುಗಡೆ ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆ ರಾಜ್ಯಧ್ಯಕ್ಷರಾದ ವಾಸುದೇವ್ ಮೇಟಿ ರವರ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಧರಣಿ ಸ್ಥಳಕ್ಕೆ ಸರಕಾರದ ಪರವಾಗಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್‌ರವರು ಧರಣಸ್ಥಳಕ್ಕೆ ಆಗಮಿಸಿದಾಗ ರೈತ ಸಂಘ ಜಿಲ್ಲಾಧ್ಯಕ್ಷ ಮಲ್ಲನಗೌಡ ಹಗರಟಗಿ ಹಾಗೂ ಇನ್ನಿತರರು ಸೇರಿ ಸಚಿವರಿಗೆ ಮನವಿ ಸಲ್ಲಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ನೂತನವಾಗಿ ಘೋಷಣೆ ಮಾಡಿರುವ ಮೂರು ತಾಲೂಕುಗಳಾದ ಗುರುಮಿಟ್ಕಲ್ .ವಡಗೇರಾ. ಹುಣಸಗಿ ತಾಲೂಕು ಕೇಂದ್ರಗಳಲ್ಲಿ ವಿವಿಧ ಸರಕಾರಿ

ಉದಯವಾಹಿನಿ ಚಿತ್ರ

ಕಚೇರಿಗಳ ಆರಂಭಿಸುವುದರ ಜೊತೆಗೆ ನೂತನ ತಾಲ್ಲೂಕುಗಳ ಅಭಿವೃದ್ಧಿಗೆ ಸರಕಾರ ಹೆಚ್ಚಿನ ಅನುದಾನ ನೀಡಬೇಕು ಮತ್ತು ಆಕಸ್ಮಿಕ ಮಳೆಗೆ ಭತ್ತ ಹತ್ತಿ ಬೆಳೆ ಹಾನಿಯಾಗಿದ್ದು ಇತ್ತೀಚಿಗೆ ತೊಗರಿ ಬೆಳೆಗೆ ನೆಟೆ ರೋಗ ಬಂದಿದ್ದು ತುಂಬಾ ಹಾನಿಯಾಗಿದ್ದು ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ ಸರ್ಕಾರ ಸೂಕ್ತ ಪರಿಹಾರ ಒದಗಿಸಬೇಕು ರೈತರು ಬೆಳೆ ವಿಮೆ ತುಂಬಿದ್ದು ಕೆಲ ಬೆಳೆ ವಿಮಾ ಕಂಪನಿಗಳು ರೈತರಿಗೆ ಸಮರ್ಪಕವಾಗಿ ಹಣ ನೀಡದೆ ಮೋಸಮಾಡುತ್ತಿದ್ದಾರೆ ಅಂತವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು .

ಕಲಬುರಗಿ ಜಿಲ್ಲಾಧ್ಯಕ್ಷ ಪ್ರಶಾಂತ್ ಗೌಡ ಪಾಟೀಲ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಶರಣಪ್ಪ ಸಾಹುಕಾರ ತಡಿಬಿಡಿ, ಹುಣಸಗಿ ತಾಲ್ಲೂಕ ಅಧ್ಯಕ್ಷ ಮಲ್ಲನಗೌಡ ಬಿರಾದರ, ಕಾರ್ಯಧ್ಯಕ್ಷ ಮಲ್ಲೇಶಪ್ಪ ಗೌಡ ಪಾಟೀಲ್, ವಡಗೇರಾ ತಾಲ್ಲೂಕು ಅಧ್ಯಕ್ಷ ವಿದ್ಯಾಧರ್ ಜಾಕ,ಗುರು ಗುಂಡಕನಾಳ, ಪರಶುರಾಮ್ ಇಸ್ಲಾಂಪುರ, ಹಾಗೂ ಪದಾಧಿಕಾರಿಗಳು ಸದಸ್ಯರು ರೈತ ಮುಖಂಡರು ಉಪಸ್ಥಿತರಿದ್ದರು.

ಪ್ರಮುಖವಾಗಿ ವಡಗೇರಾ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವಲ್ಲಿ ಸರ್ಕಾರ ಮುಂದಾಗಬೇಕು ಈ ಎಲ್ಲಾ ರೈತರ ಪ್ರಮುಖ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು. ಮನವಿ ಸ್ವೀಕರಿಸಿ ಮಾತನಾಡಿದ ಸಚಿವರು ತಮ್ಮ ಬೇಡಿಕೆಗಳ ಕುರಿತು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಸೂಕ್ತ ಪರಿಹಾರ ಒದಗಿಸುವ ಭರವಸೆ ನೀಡಿದರು.

ಪ್ರಶ್ನೆ ಪತ್ರಿಕೆ ಸೀಲ್ ಓಪನ್ ಆಗಿರುವ ಫೋಟೋ ವೈರಲ್

• ಉದಯವಾಹಿನಿ, ಧಾರವಾಡ

ಕಳೆದ ಡಿಸೆಂಬರ್ 8ರಂದು ನಡೆದ ಪಿಡಿಒ ನೇಮಕಾತಿ ಪರೀಕ್ಷೆಯಲ್ಲೂ ಕೂಡ ಅಕ್ರಮ ನಡೆದಿದೆ ಎನ್ನುವ ಆರೋಪ ಇದೀಗ ಕೇಳಿ ಬರುತ್ತಿದೆ. ಧಾರವಾಡದಲ್ಲಿ ಪ್ರಶ್ನೆ ಪತ್ರಿಕೆಗಳ ಮೇಲಿನ ಸೀಲ್ ಓಪನ್ ಮಾಡಲಾಗಿದೆ ಎಂದು ಆರೋಪಿಸಲಾಗಿದ್ದು, ಪರೀಕ್ಷೆಗೆ ಮುನ್ನ ಪ್ರಶ್ನೆ ಪತ್ರಿಕೆಯ ಸೀಲ್ ಓಪನ್ ಆಗಿರುವ ಫೋಟೋ ಇದೀಗ ವೈರಲ್ ಆಗಿದ್ದು. ಕೆಪಿಎಸ್ಸಿಯಿಂದ ಈಗ ಮತ್ತೊಂದು ಮಹಾ ಎಡವಟ್ಟು ಆಗಿದೆ ಎನ್ನಲಾಗಿದೆ.

ಹೌದು ಕಳೆದ ಡಿಸೆಂಬರ್ 8ರಂದು ನಡೆದಿದ್ದ ಪರೀಕ್ಷೆಯಲ್ಲೂ ಅಕ್ರಮ ನಡೆದಿರುವ ಬಗ್ಗೆ ಆರೋಪಗಳು ಕೇಳಿಬಂದಿವೆ.

ಪ್ರಶ್ನೆ ಪತ್ರಿಕೆ ಸೀಲ್ ಓಪನ್ ಮಾಡಿರುವ ಫೋಟೋ ಈಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ತಪ್ಪಿತಸ್ಥರನ್ನು ಶಿಕ್ಷಿಸಿ ಮರುಪರೀಕ್ಷೆಗೆ ಆದೇಶ ನೀಡಬೇಕೆಂಬ ಆಗ್ರವೂ ವ್ಯಕ್ತವಾಗಿದೆ. ಇದರೊಂದಿಗೆ, ಈ ಸಲವೂ ಪಾರದರ್ಶಕವಾಗಿ

ಉದಯವಾಹಿನಿ ಚಿತ್ರ

ಪರೀಕ್ಷೆ ನಡೆಸಲು ಕೆಪಿಎಸ್‌ಸಿ ವಿಫಲವಾಯ್ತಾ ಎಂಬ ಪ್ರಶ್ನೆಯೂ ಹುಟ್ಟಿಕೊಂಡಿದೆ.

ಪಿಡಿಒ ನೇಮಕಾತಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಸಾಮಾನ್ಯವಾಗಿ ಮೂರು ಹಂತದ ಸೀಲ್ ಭದ್ರತೆ ಹೊಂದಿರುತ್ತವೆ. ಪರೀಕ್ಷಾ ಕೇಂದ್ರದ ಪ್ರಶ್ನೆ ಪತ್ರಿಕೆಗಳ ಬಂಡಲ್‌ಗೆ ಸಮಗ್ರವಾಗಿ ಪ್ಲಾಸ್ಟಿಕ್ ಕವರ್‌ನ ಸೀಲ್ ಹಾಕಿರಲಾಗುತ್ತದೆ. ಬಳಿಕ ಆಯಾ ಪರೀಕ್ಷಾ ಕೊಠಡಿಯ ಪ್ರಶ್ನೆ ಪತ್ರಿಕೆಗಳಿಗೆ ಕಾಗದದ ಕವರ್‌ನ ಜೊತೆಗೆ ಸೀಲ್ ಹಾಕಿರುತ್ತಾರೆ. ಕೊನೆಗೆ ಪ್ರತಿಯೊಂದು ಪ್ರಶ್ನೆ ಪತ್ರಿಕೆಗೂ ಪ್ರತ್ಯೇಕ ಸೀಲ್ ಇರುತ್ತದೆ. ಆದರೆ, ಪ್ರಶ್ನೆ ಪತ್ರಿಕೆಯ ಮೇಲಿನ ಸೀಲ್ ಓಪನ್ ಮಾಡಿ ಪುನಃ ಅಂಟಿಸಿದ್ದಾರೆಂದು ಅಭ್ಯರ್ಥಿಗಳು ಆರೋಪಿಸಿದ್ದಾರೆ.

ರೈಲ್ವೆಭೂಸ್ವಾಧೀನ: ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣ ಲೋಕ್ ಅದಾಲತ್‌ನಲ್ಲಿ ಇತ್ಯರ್ಥಪಡಿಸಲು ಕ್ರಮವಹಿಸಿ: ಡಿಸಿ

• ಉದಯವಾಹಿನಿ, ಚಿತ್ರದುರ್ಗ

ರೈಲ್ವೆಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಲೋಕ್ ಅದಾಲತ್‌ನಲ್ಲಿ ಇತ್ಯರ್ಥ ಪಡಿಸುವ ಪ್ರಕರಣಗಳನ್ನು ನಿಯಾಮಾನುಸಾರ ಇತ್ಯರ್ಥಪಡಿಸಲು ಅಗತ್ಯ ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ರೈಲ್ವೆ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಲೋಕಾ ಅದಾಲತ್‌ನಲ್ಲಿ ಇತ್ಯರ್ಥಪಡಿಸುವ ಬಗ್ಗೆ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತುಮಕೂರು-ಚಿತ್ರದುರ್ಗ-ದಾವಣಗೆರೆ ನೇರ ರೈಲ್ವೆ ಯೋಜನೆಗೆ ಸಂಬಂಧಿಸಿದಂತೆ ಬಾಕಿ ಇರುವ ಭೂಸ್ವಾಧೀನ ಪ್ರಕ್ರಿಯೆಯನ್ನು ಶೀಘ್ರದಲ್ಲಿ ಪೂರ್ಣಗೊಳಿಸಿ, ಕಾಮಗಾರಿ

ಉದಯವಾಹಿನಿ ಚಿತ್ರ

ಪ್ರಾರಂಭಿಸಬೇಕು.

ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಮುಂದಿನ ಲೋಕ್ ಅದಾಲತ್‌ನಲ್ಲಿ ಇತ್ಯರ್ಥಪಡಿಸಲು ಕ್ರಮವಹಿಸಬೇಕು ಎಂದು ತಿಳಿಸಿದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಉಪವಿಭಾಗಾಧಿಕಾರಿ ಎಂ.ಕಾರ್ತಿಕ್, ತುಮಕೂರು-ಚಿತ್ರದುರ್ಗ-ದಾವಣಗೆರೆ ನೇರ ರೈಲ್ವೆಮಾರ್ಗದ ವಿಭಾಗೀಯ ಅಭಿಯಂತರ ರಜತ್ ತೆನಿಯಾ, ವಿಶೇಷ ಭೂಸ್ವಾಧೀನಾಧಿಕಾರಿ ವೆಂಕಟೇಶ್ ನಾಯ್ಕ್ ಸೇರಿದಂತೆ ಮತ್ತಿತರರು ಇದ್ದರು.

ಡಿ.20ರಂದು ರೇಷ್ಮೆ ಕೃಷಿ ಮೇಳ

• ಉದಯವಾಹಿನಿ, ಚಿತ್ರದುರ್ಗ

ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ರೇಷ್ಮೆ ಇಲಾಖೆ ವತಿಯಿಂದ ಇದೇ ಡಿ.20ರಂದು ಬೆಳಿಗ್ಗೆ 10.30ಕ್ಕೆ ಚಿತ್ರದುರ್ಗ ನಗರದ ಎಸ್.ಜಿ ಕಲ್ಯಾಣ ಮಂಟಪದಲ್ಲಿ ರೈಷ್ಮೆ ಕೃಷಿ-ಐಸಿರಿಗೆ ದಾರಿ ಎಂಬ ವಿಷಯದೊಂದಿಗೆ ''ರೇಷ್ಮೆ ಕೃಷಿ ಮೇಳ'' ಆಯ

ಒಂದು ರಾಷ್ಟ್ರ ಒಂದು ಚುನಾವಣೆ ಬಿಲ್ ಅನ್ನು ಸಂಸತ್ತಿನಲ್ಲಿ ಮಂಡಿಸಲು ಸಿದ್ಧತೆ

ದೇಶದ ಚುನಾವಣಾ ವ್ಯವಸ್ಥೆ ಬದಲಾವಣೆ, ಐತಿಹಾಸಿಕ ಚುನಾವಣಾ ಪದ್ಧತಿ ಜಾರಿಗೆ ಬರಬೇಕೆಂದು ಮೋದಿ ಬಲವಾಗಿ ಪ್ರತಿಪಾದನೆ

ಹೊಸದಿಲ್ಲಿ: ಮಹಾರಾಷ್ಟ್ರದಲ್ಲಿ ಕಾಂಗ್ರೇಸ್ ನೇತೃತ್ವದ ಮೈತ್ರಿಕೂಟ ಹೀನಾಯ ಸೋಲು ಅನುಭವಿಸಿದ ನಂತರ, ಇವಿಎಂ ಮೇಲಿನ ದೂರುದುಮ್ಮಾನ ಜಾಸ್ತಿಯಾಗುತ್ತಿದೆ. ರಾಹುಲ್ ಗಾಂಧಿ ನೇತೃತ್ವದಲ್ಲಿ ಇವಿಎಂ ಬೇಡ, ಬ್ಯಾಲೆಟ್ ಪೇಪರ್ ನಲ್ಲಿ ಚುನಾವಣೆ ಬೇಕು ಎನ್ನುವ ಅಭಿಯಾನ ನಡೆಸಲು ಕಾಂಗ್ರೇಸ್ ಪೂರ್ವ ತಯಾರಿ ಮಾಡಿಕೊಳ್ಳುತ್ತಿದೆ. ಇನ್ನೊಂದು ಕಡೆ, ಬಿಜೆಪಿ ನೇತೃತ್ವ ಎನ್ಡಿಎ ಮೈತ್ರಿಕೂಟ ಒಂದು ರಾಷ್ಟ್ರ ಒಂದು ಚುನಾವಣೆ ಬಿಲ್ ಅನ್ನು ಸಂಸತ್ತಿನಲ್ಲಿ ಮಂಡಿಸಲು ಎಲ್ಲಾ ಸಿದ್ಧತೆಯನ್ನು ಮಾಡುತ್ತಿದೆ. ಅದಕ್ಕೆ ಪೂರ್ವಭಾವಿಯಾಗಿ, ಮೋದಿ ನೇತೃತ್ವದ ಕೇಂದ್ರ ಕ್ಯಾಬಿನೆಟ್ ನಲ್ಲಿ ಇದಕ್ಕೆ ಅನುಮೋದನೆಯನ್ನು ಗುರುವಾರ (ಡಿ 12) ಪಡೆದುಕೊಳ್ಳಲಾಗಿದೆ. ಹಾಲೀ ಚಳಿಗಾಲದ ಅಧಿವೇಶನದಲ್ಲೇ ಇದನ್ನು ಮಂಡಿಸಲು ಕೇಂದ್ರ ಸರ್ಕಾರ ನಿರ್ಧರಿಸಿದ್ದು, ಲೋಕಸಭೆ, ರಾಜ್ಯಸಭೆಯಲ್ಲಿ ಭಾರೀ ಹಂಗಾಮ ಆಗುವ ಸಾಧ್ಯತೆ ದಟ್ಟವಾಗಿದೆ. ಈ ಮಸೂದೆ ಪಾಸ್ ಆದರೆ, ದೇಶಕ್ಕಾಗುವ ಲಾಭವೇನು, ಆರ್ಥಿಕತೆಯಲ್ಲಿ ಭಾರೀ ಬದಲಾವಣೆಯಾಗಲಿದೆ ಎಂದು ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅಭಿಪ್ರಾಯ ಪಟ್ಟಿದ್ದಾರೆ.

ಏನಿದು ಹೊಸ ಬಿಲ್

ಒಂದು ರಾಷ್ಟ್ರ ಒಂದು ಚುನಾವಣೆಯಿಂದಾಗುವ ಲಾಭವೇನು?

ದೇಶದಲ್ಲಿ ಲೋಕಸಭಾ ಚುನಾವಣೆ ಸಾಮಾನ್ಯವಾಗಿ ಐದು ವರ್ಷಕ್ಕೊಮ್ಮೆ ಏಪ್ರಿಲ್ - ಮೇ ತಿಂಗಳಲ್ಲಿ ನಡೆಯುತ್ತದೆ. ಇನ್ನು, ಆಯಾಯ ರಾಜ್ಯಗಳ ವಿಧಾನಸಭಾ ಚುನಾವಣೆಯು ಐದು ವರ್ಷದ ಅವಧಿ ಯಾವಾಗ ಮುಗಿಯುತ್ತೋ, ಆ ವೇಳೆ ನಡೆಯುತ್ತದೆ. ಇಂತಹ ಚುನಾವಣಾ ಪದ್ಧತಿಯಿಂದಾಗಿ ಎರಡು ಬಾರಿ ಪ್ರತ್ಯೇಕವಾಗಿ ಆರ್ಥಿಕ ಸಂಪನ್ಮೂಲದ ಆಯೋಜನೆ, ಸಿಬ್ಬಂದಿಗಳು ಸೇರಿದಂತೆ ಆಡಳಿತಾತ್ಮಕವಾದ ಕೆಲಸ ಕಾರ್ಯಗಳನ್ನು ಆಯೋಜಿಸಬೇಕಾಗುತ್ತದೆ. ಇದನ್ನು ಉಳಿಸಲು, ಒಂದು ರಾಷ್ಟ್ರ ಒಂದು ಚುನಾವಣೆ ಪದ್ಧತಿಯೇ ಉತ್ತಮ ಎನ್ನುವುದು ಕೇಂದ್ರ ಸರ್ಕಾರದ ವಾದ. ಜೊತೆಗೆ, ಒಂದೇ ಬಾರಿ ಚುನಾವಣೆ ನಡೆದರೆ, ಮತದಾನದ ಪ್ರಮಾಣ ಕೂಡಾ ಹೆಚ್ಚಾಗುತ್ತದೆ ಎನ್ನುವುದು ಕೇಂದ್ರ ಸರ್ಕಾರದ ನಿಲುವು.

ಏನಿದು ಒಂದು ರಾಷ್ಟ್ರ ಒಂದು ಚುನಾವಣೆ?: ದೇಶದಲ್ಲಿ ಕೆಲವು ರಾಜ್ಯಗಳನ್ನು ಹೊರತು ಪಡಿಸಿ, ಅಸೆಂಬ್ಲಿ ಮತ್ತು ಲೋಕಸಭಾ ಚುನಾವಣೆಯು ಅವಧಿ ಮುಗಿಯುವ ಸಮಯದಲ್ಲಿ ಪ್ರತ್ಯೇಕವಾಗಿ ನಡೆಯುತ್ತಿದೆ. ಉದಾಹರಣೆಗೆ, ಈ ವರ್ಷದ ಮೇ ತಿಂಗಳಲ್ಲಿ ಮಹಾರಾಷ್ಟ್ರದಲ್ಲಿ ಲೋಕಸಭಾ ಚುನಾವಣೆ ನಡೆದಿತ್ತು. ಇನ್ನು, ನವೆಂಬರ್ ತಿಂಗಳಲ್ಲಿ ವಿಧಾನಸಭಾ ಚುನಾವಣೆ ನಡೆದಿತ್ತು.

ಇಂಹತ ಪದ್ಧತಿಯಿಂದ, ಕೇಂದ್ರ ಮತ್ತು ರಾಜ್ಯಗಳು ತಮ್ಮತಮ್ಮ ಬಜೆಟ್ ನಲ್ಲಿ ಕೋಟ್ಯಾಂತರ ಹಣವನ್ನು ಚುನಾವಣೆಗಾಗಿ ಮೀಸಲಿಡಬೇಕಾಗುತ್ತದೆ. ಇದನ್ನು ತಪ್ಪಿಸಲು, ಎಲ್ಲಾ ಚುನಾವಣೆಗಳನ್ನು ಏಕಕಾಲದಲ್ಲಿ ನಡೆಸುವ ಉದ್ದೇಶದಿಂದ, ಈ ಮಸೂದೆಯನ್ನು ಮಂಡನೆ ಮಾಡಲು ಕೇಂದ್ರ ಸರ್ಕಾರ ಮುಂದಾಗಿದೆ.

ಪ್ರಧಾನಿ ಮೋದಿಯವರು ತಮ್ಮ ಎರಡನೇ ಅವಧಿಯಿಂದಲೇ ಈ ಐತಿಹಾಸಿಕ ಚುನಾವಣಾ ಪದ್ಧತಿ ಜಾರಿಗೆ ಬರಬೇಕು ಎಂದು ಬಲವಾಗಿ ಪ್ರತಿಪಾದಿಸುತ್ತಾ ಬರುತ್ತಿದ್ದಾರೆ. ಆದರೆ, ತಮ್ಮದೇ ಕೆಲವು ಮೈತ್ರಿ ಪಕ್ಷದಿಂದ ಬೆಂಬಲ ಸಿಗದೇ ಇರುವುದು ಮತ್ತು ವಿಪಕ್ಷಗಳ ಭಾರೀ ವಿರೋಧದಿಂದಾಗಿ ಮಸೂದೆ ಮಂಡನೆ ಮುಂದಕ್ಕೆ ಹೋಗುತ್ತಲೇ ಇತ್ತು. ಈಗ, ಇದಕ್ಕೊಂದು ತಾರ್ಕಿಕ ಅಂತ್ಯ ಹಾಡಲು, ಗಂಭೀರ ಹೆಜ್ಜೆಯನ್ನು ಮೋದಿ ಸರ್ಕಾರ ಇಟ್ಟಿದೆ.

ಇಸ್ರೇಲ್ ದಾಳಿಗೆ ಗಾಜಾದಲ್ಲಿ ಮಕ್ಕಳು ಸೇರಿದಂತೆ 33 ಮಂದಿ ಬಲಿ

ದೇರ್ ಅಲ್-ಬಲಾಹ್: ಜನರು ಆಶ್ರಯ ಪಡೆದಿದ್ದ ಮನೆಗಳ ಮೇಲೆ ರಾತ್ರೋರಾತ್ರಿ ಇಸ್ರೇಲ್ ದಾಳಿ ನಡೆಸಿದ ಘಟನೆಯಲ್ಲಿ ಮಕ್ಕಳು ಸೇರಿದಂತೆ ಕನಿಷ್ಠ 33 ಜನರು ಸಾವನ್ನಪ್ಪಿದ್ದಾರೆ ಎಂದು ಪ್ಯಾಲೇಸ್ಟಿನಿಯನ್ ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ. ಲೆಬನಾನ್‌ನ ಹಿಜ್ಬುಲ್ಲಾ ಉಗ್ರಗಾಮಿಗಳೊಂದಿಗೆ ಇಸ್ರೇಲ್ ಕದನ ವಿರಾಮವನ್ನು ತಲುಪಿದ ನಂತರ ಮತ್ತು ಸಿರಿಯಾದ ಅಧ್ಯಕ್ಷ ಬಶರ್ ಅಸ್ಸಾದ್ ಅವರನ್ನು ಬಂಡುಕೋರರು ಪದಚ್ಯುತಗೊಳಿಸುವತ್ತ ಗಮನ ಹರಿಸಿದ ನಂತರವೂ ಇಸ್ರೇಲ್-ಹಮಾಸ್ ಯುದ್ಧ ಅಂತ್ಯಗೊಂಡಿಲ್ಲ. ಪ್ರಸ್ತುತ ಮತ್ತು ಒಳಬರುವ ಅಮೆರಿಕ ಆಡಳಿತವು ಜನವರಿಯಲ್ಲಿ ಉದ್ಘಾಟನೆಗೊಳ್ಳುವ ಮೊದಲು ಗಾಜಾದಲ್ಲಿ ಯುದ್ಧವನ್ನು ಕೊನೆಗೊಳಿಸಲು ಆಶಿಸುತ್ತಿದೆ ಎಂದು ಹೇಳಿದ್ದಾರೆ, ಆದರೆ ಕದನ ವಿರಾಮ ಮಾತುಕತೆಗಳು ಪದೇ ಪದೇ ಸ್ಥಗಿತಗೊಂಡಿವೆ.

ಮನೆಯ ಮೇಲಿನ ಮುಷ್ಕರವು ಇಸ್ರೇಲ್‌ನ ಗಡಿಯ ಸಮೀಪವಿರುವ ಉತ್ತರ ಪಟ್ಟಣವಾದ ಬೀಟ್ ಲಾಹಿಯಾದಲ್ಲಿ 19 ಜನರನ್ನು ಕೊಂದಿತು ಎಂದು ಹತ್ತಿರದ ಕಮಲ್ ಅಡ್ವಾನ್ ಆಸ್ಪತೆ ಮೂಲಗಳು ತಿಳಿಸಿವೆ. ಆಸ್ಪತ್ರೆಯ ದಾಖಲೆಗಳು ಎಂಟು ಜನರ ಕುಟುಂಬವು ಸತ್ತವರಲ್ಲಿ ಸೇರಿದೆ. ನಾಲ್ಕು ಮಕ್ಕಳು, ಅವರ ಪೋಷಕರು ಮತ್ತು ಇಬ್ಬರು ಅಜ್ಜಿಯರು.

ಆಸ್ಪತ್ರೆಯ ಆಸುಪಾಸಿನಲ್ಲಿ ಹಮಾಸ್ ಉಗ್ರರನ್ನು ಗುರಿಯಾಗಿಸಿಕೊಂಡಿರುವುದಾಗಿ ಇಸ್ರೇಲಿ ಸೇನೆ ತಿಳಿಸಿದೆ. ಮುಷ್ಕರದಲ್ಲಿ ಸಾವನ್ನಪ್ಪಿದವರ ಸಂಖ್ಯೆಯ ಬಗ್ಗೆ ವರದಿಗಳು ನಿಖರವಾಗಿಲ್ಲ, ವಿವರಿಸದೆಯೇ ಎಂದು ಅದು ಹೇಳಿದೆ. ಸೇನೆಯು ನಾಗರಿಕರಿಗೆ ಹಾನಿಯಾಗುವುದನ್ನು ತಪ್ಪಿಸಲು ಪ್ರಯತ್ನಿಸುತ್ತಿದೆ ಎಂದು ಹೇಳುತ್ತದೆ ಮತ್ತು ಉಗ್ರಗಾಮಿಗಳು ಅವರ ನಡುವೆ ಅಡಗಿಕೊಂಡು ತಮ ಪ್ರಾಣವನ್ನು ಅಪಾಯಕ್ಕೆ ತಳ್ಳುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಆಸ್ಪತ್ರೆಯ ಪ್ರವೇಶದ್ವಾರದ ಬಳಿ ಬುಧವಾರ ನಡೆದ ಮತ್ತೊಂದು ಮುಷ್ಕರ ಮಹಿಳೆ ಮತ್ತು ಆಕೆಯ ಇಬ್ಬರು ಮಕ್ಕಳನ್ನು ಬಲಿ ತೆಗೆದುಕೊಂಡಿದೆ ಎಂದು ಆಸ್ಪತ್ರೆ ತಿಳಿಸಿದೆ.

ಆಸ್ಪತ್ರೆಯ ನಿರ್ದೇಶಕ, ಡಾ ಹುಸ್ಸಾಮ್ ಅಬು ಸಫಿಯಾ, ಇಸ್ರೇಲಿ ಡ್ರೋನ್‌ಗಳು ರಾತ್ರಿಯಿಡೀ ಹತ್ತಿರದ ವಸತಿ ಬ್ಲಾಕ್‌ಗಳನ್ನು ಹೊಡೆದವು, ಇದರಿಂದಾಗಿ ಸ್ಫೋಟಗಳು ಸೌಲಭ್ಯದ 120 ಕ್ಕೂ ಹೆಚ್ಚು ರೋಗಿಗಳು ಮತ್ತು ಗಾಯಗೊಂಡ ರೋಗಿಗಳಲ್ಲಿ ಭೀತಿಯನ್ನು ಉಂಟುಮಾಡಿದವು. ನಾವು ನೆರೆಹೊರೆಯವರು ಮತ್ತು ಸಿಕ್ಕಿಬಿದ್ದ ಜನರಿಂದ ತೊಂದರೆಯ ಕರೆಗಳನ್ನು ಸ್ವೀಕರಿಸಿದ್ದೇವೆ, ಆದರೆ ಮುಂದುವರಿದ ಅಪಾಯದಿಂದಾಗಿ ನಾವು ಆಸ್ಪತ್ರೆಯಿಂದ ಹೊರಬರಲು ಸಾಧ್ಯವಾಗುತ್ತಿಲ್ಲ ಎಂದು ಅವರು ಹೇಳಿದರು.

ಮಾರಾಟವಾಗದ ಗಾಂಧೀಜಿ ಧರಿಸಿದ್ದ ಹಾರ

ಲಂಡನ್: ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು 1930 ರ ಐತಿಹಾಸಿಕ ಉಪ್ಪಿನ ಸತ್ಯಾಗ್ರಹದ ಸಮಯದಲ್ಲಿ ಧರಿಸಿದ್ದ ಹಾರವು ಹರಾಜಿನಲ್ಲಿ ಮಾರಾಟವಾಗದೆ ಹಾಗೆಯೇ ಉಳಿದಿದೆ.ಈ ಹರಾಜು ಲಂಡನ್‌ನಲ್ಲಿ ನಡೆದಿದೆ.ಈ ಮಾಲೆಯ ಅಂದಾಜು ಮೌಲ್ಯ 20,000-30,000 (ರೂ. 21 ಲಕ್ಷದಿಂದ 30 ಲಕ್ಷ). ಆದರೆ ಈ ಮಾಲೆ ಖರೀದಿಸಲು ಯಾರೂ ಮುಂದೆ ಬರಲಿಲ್ಲ. ಹರಾಜಿನಲ್ಲಿ ಗಾಂಧೀಜಿಯವರ ಛಾಯಾಚಿತ್ರವೂ ಇದ್ದು, ಅದರಲ್ಲಿ ಅವರಿಗೆ ಹಾರ ಹಾಕಲಾಗಿದೆ.

ಮಹಾತ್ಮ ಗಾಂಧೀಜಿಯವರು ಸ್ವಾತಂತ್ರ್ಯಕ್ಕಾಗಿ ಚಳವಳಿಗಳನ್ನು ನಡೆಸಿದ್ದಾರೆ. ಅವರ ಅಹಿಂಸಾತ್ಮಕ ಪ್ರತಿಭಟನೆ ಇಂದಿಗೂ ಪ್ರಪಂಚದಾದ್ಯಂತ ಸ್ಮರಣೀಯವಾಗಿದೆ. 1930ರಲ್ಲಿ ಉಪ್ಪಿಗಾಗಿ ಗಾಂಧೀಜಿ ನಡೆಸಿದ ಸತ್ಯಾಗ್ರಹ ದಂಡಿ ಯಾತ್ರೆಯೂ ಪ್ರಮುಖ ಚಳವಳಿಯಾಗಿದೆ. ದಂಡಿಯಾತ್ರೆ ವೇಳೆ ಮಹಾತ್ಮ ಗಾಂಧೀಜಿ ಅವರಿಗೆ ಮಾಲಾರ್ಪಣೆ ಮಾಡಲಾಗಿದೆ. ಈ ಹಾರವನ್ನು ಗಾಂಧೀಜಿಯವರ ಆಪ್ತ ವೈದ್ಯ ಡಾ.ಬಲವಂತರಾಯ್ ಎನ್. ಕನುಗ ಅವರ ಸಂಗ್ರಹದ ಭಾಗವಾಗಿದೆ .ಇತ್ತೀಚೆಗೆ ಇದನ್ನು ಲಂಡನ್‌ನಲ್ಲಿ ಹರಾಜಿಗೆ ಇಡಲಾಗಿದೆ, ಆದರೆ ಯಾವುದೇ ಖರೀದಿದಾರರು ಸಿಗದ ಕಾರಣ ಅದನ್ನು ಮಾರಾಟ ಮಾಡಲು ಸಾಧ್ಯವಾಗಲಿಲ್ಲ ಎನ್ನಲಾಗಿದೆ.

ಗಾಂಧಿಯವರ ವೈಯಕ್ತಿಕ ವೈದ್ಯರ ಸಂಗ್ರಹದಿಂದ ಪಡೆದ ಅದೇ ಹರಾಜಿನಲ್ಲಿ ಅನೇಕ ಭಾರತೀಯ ಕಲಾಕೃತಿಗಳು ಇದ್ದವು, ಅವುಗಳು ಉತ್ತಮ ಬೆಲೆಗೆ ಮಾರಾಟವಾದವು. ಈ ಹರಾಜನ್ನು ಲಿಯಾನ್, ಟರ್ನ್‌ಬುಲ್ ಹರಾಜು ಸಂಸ್ಥೆ ನಡೆಸಿದೆ. ಇದರಲ್ಲಿ ಗಾಂಧಿಯವರ ಈ ಜಪಮಾಲೆ ಸೇರಿದಂತೆ ಹಲವು ಇಸ್ಲಾಮಿಕ್, ಭಾರತೀಯ ಕಲಾಕೃತಿಗಳನ್ನು ಆನ್‌ಲೈನ್ ಮಾರಾಟಕ್ಕೆ ಇಡಲಾಗಿದೆ.

ಕೊಳವೆ ಬಾವಿಗೆ ಬಿದ್ದು 5 ವರ್ಷದ ಬಾಲಕ ಸಾವು

ಜೈಪುರ: ಇಲ್ಲಿನ ದೌಸಾದಲ್ಲಿ 160 ಅಡಿ ಆಳದ ಬೋರ್‌ವೆಲ್‌ಗೆ ಬಿದ್ದಿದ್ದ 5 ವರ್ಷದ ಬಾಲಕನನ್ನು ಮೇಲೆತ್ತಿದರು ಆತ ಕೊನೆಯುಸಿರೆಳೆದಿದ್ದಾನೆ. ಸುಮಾರು 55 ಗಂಟೆಗೂ ಹೆಚ್ಚು ಕಾಲ ನಡೆದ ರಕ್ಷಣಾ ಕಾರ್ಯಾಚರಣೆಯ ನಂತರ ಕಳೆದ ರಾತ್ರಿ ಆರ್ಯನ್ ಎಂಬ ಐದು ವರ್ಷದ ಬಾಲಕನನ್ನು ಬೋರ್‌ವೆಲ್ ಕೊಳವೆಯಿಂದ ಹೊರತೆಗೆಯಲಾಯಿತು ಆದರೆ ಆತ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ತಕ್ಷಣ ಅಲ್ಲಿದ್ದ ಆಂಬ್ಯುಲೆನ್ಸ್‌ನಲ್ಲಿ ಜಿಲ್ಲಾ ಆಸ್ಪತ್ರೆಗೆ ಸಾಗಿಸಲಾಯಿತು, ಅಲ್ಲಿ ವೈದ್ಯರು ಆತ ಈಗಾಗಲೆ ಸಾವನ್ನಪ್ಪಿದ್ದಾನೆ ಎಂದು ಘೋಷಿಸಿದರು ಎಂದು ಪೊಲೀಸರು ತಿಳಿಸಿದ್ದಾರೆ.

ಕಳೆದ ಸೋಮವಾರ ಮಧ್ಯಾಹ್ನ 3 ಗಂಟೆ ಸುಮಾರಿಗೆ ಕಾಲಿಖಾಡ್ ಗ್ರಾಮದಲ್ಲಿ ಈ ಘಟನೆ ಸಂಭವಿಸಿದ್ದು, ಆರ್ಯನ್ ಜಮೀನಿನಲ್ಲಿ ಆಟವಾಡುತ್ತಿದ್ದಾಗ ಆಕಸಿಕವಾಗಿ ತಾಯಿಯ ಎದುರಿನ ಬೋರ್‌ವೆಲ್‌ಗೆ ಬಿದ್ದಿದ್ದಾನೆ. ನಂತರ ವಿಷಯ ತಿಳಿದು ಗ್ರಾಮಸ್ಥರು ಸ್ಥಳಕ್ಕೆ ಬಂದು ಪೊಲೀಸರಿಗೆ ಮಾಹಿತಿ ನೀಡಿದರು ಒಂದು ಗಂಟೆಯ ನಂತರ ರಕ್ಷಣಾ ಕಾರ್ಯಾಚರಣೆ ಆರಂಭವಾಯಿತು. ರಕ್ಷಣಾ ತಂಡ ಅಲ್ಲಿಗೆ ತಲುಪಿದ ತಕ್ಷಣ ಪೈಪ್ ಮೂಲಕ ಆಮ್ಲಜನಕ ಪೂರೈಕೆ ಆರಂಭಿಸಿ ಅವರ ಚಲನವಲನವನ್ನು ಸೆರೆಹಿಡಿಯಲು ಕ್ಯಾಮರಾ ಇರಿಸಲಾಗಿತ್ತು.

ಮಗುವನ್ನು ತಲುಪಲು ಸಮಾನಾಂತರ ಹೊಂಡವನ್ನು ಅಗೆಯಲಾಯಿತು. ಕಾರ್ಯಾಚರಣೆಯಲ್ಲಿ ಅಸಂಖ್ಯಾತ ಸವಾಲುಗಳಿವೆ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಸಿಬ್ಬಂದಿ ಹೇಳಿದರು .

ಈ ಪ್ರದೇಶದಲ್ಲಿ ನೀರಿನ ಮಟ್ಟ ಸುಮಾರು 160 ಅಡಿಗಳಷ್ಟಿತ್ತು, ಮಗುವಿನ ಯಾವುದೇ ಚಲನವಲನವನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯುವುದು ಕಷ್ಟಕರವಾಗಿತ್ತು ಮತ್ತು ಸಿಬ್ಬಂದಿಗೆ ಸುರಕ್ಷತೆಯ ಕಾಳಜಿಯೂ ಇತ್ತು.ಆದರೂ ಚಲಬಿಡದೆ ನಡೆಸಿದ ಹೋರಾಟ ಮಗು ಜೀವ ಉಳಿಸುವಲ್ಲಿ ವಿಫಲವಾಗಿದೆ.

ಎಫ್‌ಬಿಐ ನಿರ್ದೇಶಕ ಕ್ರಿಸ್ಟೋಫರ್ ವ್ರೇ ರಾಜೀನಾಮೆ

ವಾಷಿಂಗ್ಟನ್: ಅಮೆರಿಕಾದ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್-ಎಫ್‌ಬಿಐ ಹಾಲಿ ನಿರ್ದೇಶಕ ಕ್ರಿಸ್ಟೋಫರ್ ವ್ರೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಪ್ರಕಟಿಸಿದ್ದಾರೆ. ಡೊನಾಲ್ಡ್ ಟ್ರಂಪ್ ಅವರ ಮೊದಲ ಅವಧಿಯಲ್ಲಿ 2017 ರಲ್ಲಿ 10ವರ್ಷಗಳ ಅವಧಿಗೆ ಎಫ್‌ಬಿಐ ನಿರ್ದೇಶಕರಾಗಿ ನಾಮನಿರ್ದೇಶನಗೊಂಡ ಕ್ರಿಸ್ಟೋಫರ್ ವ್ರೇ ಅವರು ಡೊನಾಲ್ಡ್ ಟ್ರಂಪ್ ಅವರ ಎರಡನೇ ಅವಧಿಯಲ್ಲಿ ಅಧಿಕಾರ ವಹಿಸಿಕೊಳ್ಳುವ ಮುನ್ನ ಕೆಲ ದಿನಗಳ ವರೆಗೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು ಮತ್ತೆ ಜನವರಿ 20 ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎನ್ನಲಾಗಿದೆ.



ಕ್ರಿಸ್ಟೋಫರ್ ವ್ರೇ ಅವರ ಅಧಿಕಾರ, ನಡೆಯ ಬಗ್ಗೆ ರಿಪಬ್ಲಿಕನ್ ಪಕ್ಷದ ಸದಸ್ಯರು, ಕಾರ್ಯಕರ್ತರಿಂದ ಟೀಕೆಗಳನ್ನು ಎದುರಿಸಿದ್ದರು ಈ ಹಿನ್ನೆಲೆಯಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಪ್ರಕಟಿಸಿದ್ದಾರೆ. ಮುಂದಿನ ತಿಂಗಳು ಅಧಿಕಾರ ವಹಿಸಿಕೊಳ್ಳಲು ಸೂಚಿಸಿರುವ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಅಧಿಕಾರ ವಹಿಸಿಕೊಳ್ಳುವ ಮೊದಲು ರಾಜೀನಾಮೆ ನೀಡುವುದಾಗಿ ಹೇಳಿದ್ದಾರೆ.

ವಾರಗಳ ಪರಿಗಣನೆಯ ನಂತರ ಅವರು ದೂರವಿರಲು ನಿರ್ಧರಿಸಿರುವುದಾಗಿ ಎಂದು ಎಫ್‌ಬಿಐ ಸಭೆಯಲ್ಲಿ ಘೋಷಿಸಿದ್ದು ಎಫ್‌ಬಿಐ ಅಧಿಕಾರವನ್ನು ನಾಟಕೀಯವಾಗಿ ಸೀಮಿತಗೊಳಿಸುವಂತೆ ಕರೆ ನೀಡಿರುವ ಕಾಶ್ ಪಟೇಲ್ ಅವರನ್ನು ಕಾನೂನು ಜಾರಿ ಸಂಸ್ಥೆಯನ್ನು ಮುನ್ನಡೆಸಲು ಡೊನಾಲ್ಡ್ ಟ್ರಂಪ್ ಈಗಾಗಲೇ ನಾಮನಿರ್ದೇಶನ ಮಾಡಿದ್ದಾರೆ.

ಎಫ್‌ಬಿಐನ ಆಂತರಿಕ ಸಭೆಯಲ್ಲಿ ಮಾತನಾಡಿದ ಕ್ರಿಸ್ಟೋಫರ್ ವ್ರೇ, ಜನವರಿಯಲ್ಲಿ ಪ್ರಸ್ತುತ ಆಡಳಿತದ ಅಂತ್ಯದವರೆಗೆ ಸೇವೆ ಸಲ್ಲಿಸಲು ಮತ್ತು ನಂತರ ಕೆಳಗಿಳಿಯಲು ನಿರ್ದರಿಸಿದ್ದೇನೆ, ಜನವರಿ 20 ರಂದು ಮತ್ತೆ ಮುಖ್ಯಸ್ಥನಾಗಿ ಅಧಿಕಾರ ವಹಿಸಿಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

2016 ರ ಡೊನಾಲ್ಡ್ ಟ್ರಂಪ್ ಪ್ರಚಾರ ಮತ್ತು ರಷ್ಯಾದ ನಡುವಿನ ಆಪಾದಿತ ಸಂಪರ್ಕಗಳ ಕುರಿತು ಎಫ್‌ಬಿಐ ತನಿಖೆಯ ನಂತರ ಡೊನಾಲ್ಡ್ ಟ್ರಂಪ್ ಅವರ ಸರ್ಕಾರ ಹಿಂದಿನ ಜೇಮ್ಸ್ ಕಾಮಿ ಅವರನ್ನು ವಜಾಗೊಳಿಸಿದ ನಂತರ ಎಫ್‌ಬಿಐ ಅನ್ನು ಮುನ್ನಡೆಸಲು ಕ್ರಿಸ್ಟೋಫರ್ ವ್ರೇ ಅವರನ್ನು ನೇಮಿಸಲಾಗಿತ್ತು

ನನ್ನ ದೃಷ್ಟಿಯಲ್ಲಿ, ಕೆಲಸವನ್ನು ನಾವು ಹೇಗೆ ಮಾಡುತ್ತೇವೆ ಎಂಬುದಕ್ಕೆ ತುಂಬಾ ಮುಖ್ಯವಾದ ಮೌಲ್ಯಗಳು ಮತ್ತು ತತ್ವಗಳನ್ನು ಬಲಪಡಿಸುವಾಗ, ಬ್ಯೂರೋವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಕಟ್ಟುವುದು ನಮ್ಮ ಮುಂದಿರುವ ಮಾರ್ಗ ಎಂದು ಅವರು ಹೇಳಿದ್ದಾರೆ.

ಕುಂಭಮೇಳಕ್ಕೆ ಅತ್ಯಾಧುನಿಕ ಟೆಂಟ್ ನಿರ್ಮಾಣ

ಪ್ರಯಾಗ ರಾಜ್: ತ್ರಿವೇಣಿ ನದಿಗಳು ಸಂಗಮ ಸ್ಥಳ ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ 12 ವರ್ಷಗಳಿಗೊಮ್ಮೆ ಮಹಾ ಕುಂಭಮೇಳ ನಡೆಯುತ್ತದೆ. ಈ ಬಾರಿ ಜನವರಿ 13 ರಿಂದ ಫೆಬ್ರವರಿ 28 ರವರೆಗೆ ಮಹಾ ಕುಂಭಮೇಳ ನಡೆಯಲಿದೆ. ಸರ್ಕಾರವು ಬಹುತೇಕ ಸಂಪೂರ್ಣ ಸಿದ್ಧತೆಗಳನ್ನು ಮಾಡಿದೆ. ಜತೆಗೆ ಭಕ್ತರಿಗೆ ಎಲ್ಲಾ ರೀತಿಯ ಸೌಲಭ್ಯ ಕಲ್ಪಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಆರ್ ಸಿಟಿಸಿ (ಭಾರತೀಯ ರೈಲ್ವೆಕ್ಯಾಟರಿಂಗ್, ಪ್ರವಾಸೋದ್ಯಮ ನಿಗಮ) ಮಹಾಕುಂಭಮೇಳದ ಹಿನ್ನೆಲೆಯಲ್ಲಿ ಪ್ರಯಾಗರಾಜ್‌ನಲ್ಲಿ ಟೆಂಟ್ ಸಿಟಿಯನ್ನು ನಿರ್ಮಿಸಿದೆ ಎಂದು ಐಆರ್ ಸಿಟಿಸಿ ಪ್ರವಾಸೋದ್ಯಮ ನಿಗಮದ ಮೇಲ್ವಿಚಾರಕರಾದ ಹರ್ಷದೀಪ್ ಮತ್ತು ನವೀನ್ ತಿಳಿಸಿದ್ದಾರೆ.

ಸಿಂಗಲ್ ಮತ್ತು ಡಬಲ್ ಟೆಂಟ್‌ಗಳು ಸಹ ಲಭ್ಯ

ಸಂಗಮದಲ್ಲಿ ಸ್ನಾನಕ್ಕೆಂದು ಆಗಮಿಸುವ ಸಾರ್ವಜನಿಕರ ಅನುಕೂಲಕ್ಕಾಗಿ ಐಆರ್ ಸಿಟಿಸಿ ಸುಸಜ್ಜಿತ ಅತ್ಯಾಧುನಿಕ ಟೆಂಟ್ ನಿರ್ಮಿಸಿ ವಸತಿ ವ್ಯವಸ್ಥೆ ಕಲ್ಪಿಸಿದೆ. ಟೆಂಟ್ ವ್ಯವಸ್ಥೆಯಲ್ಲಿ ಎರಡು ವಿಧಗಳಿವೆ ಮತ

ಐಷಾರಾಮಿ ಕಾರಲ್ಲಿ ಬಂದಿದ್ದ ರಜನಿ



ರಜನಿಕಾಂತ್ ಅವರ ಜೀವನ ಕೇವಲ ಚಲನಚಿತ್ರ ನಟನ ಕಥೆಯಲ್ಲ, ಅದು ಒಂದು ಸಾಧನೆಯ ಕಥೆ. ಕಂಡಕ್ಟರ್ ಆಗಿ ವೃತ್ತಿ ಪ್ರಾರಂಭಿಸಿ, ಅವಮಾನ, ಆರ್ಥಿಕ ಸಂಕಷ್ಟಗಳನ್ನು ಎದುರಿಸಿ ಅವರು ಸೂಪರ್ ಸ್ಟಾರ್ ಆದರು. 'ದರ್ಬಾರ್' ಚಿತ್ರದ ರಿಲೀಸ್ ಸಂದರ್ಭದಲ್ಲಿ ತಮ್ಮ ಹಳೆಯ ದಿನಗಳನ್ನು ನೆನಪಿಸಿಕೊಂಡ ರಜನಿಕಾಂತ್, ಆರಂಭದ ದಿನಗಳಲ್ಲಿ ಎದುರಿಸಿದ ಅವಮಾನಗಳನ್ನು ಹಂಚಿಕೊಂಡಿದ್ದಾರೆ.

ರಜನಿಕಾಂತ್ ಎಂಬುದು ಕೇವಲ ಹೆಸರಲ್ಲ, ಅದೊಂದು ಬ್ರ್ಯಾಂಡ್. ಕಾಲಿವುಡ್‌ನಲ್ಲಿ ರಜನಿ ಎರಾ ಸಾಗುತ್ತಿದೆ. ಅವರು ಈಗಲೂ ಬೇಡಿಕೆಯ ಹೀರೋ. ಅವರಿಗೆ ಈಗ 74 ವರ್ಷ. ಡಿಸೆಂಬರ್ 12 ಜನ್ಮದಿನ. ಅವರಿಗೆ ಎಲ್ಲಾ ಕಡೆಗಳಿಂದ ವಿಶ್ಗಳು ಬರುತ್ತಿವೆ. ಅವರು ಮಾಡಿದ ಸಾಧನೆ ಅನೇಕರಿಗೆ ಮಾದರಿ. ಆರಂಭದಲ್ಲಿ ಕಂಡಕ್ಟರ್ ಆಗಿದ್ದ ಅವರು ನಂತರ ಹೀರೋ ಆದರು. ಕರ್ನಾಟಕದಿಂದ ತಮಿಳುನಾಡಿಗೆ ತೆರಳಿ ಹೆಸರು ಮಾಡಿದರು. ಅವರಿಗೆ ನಿರ್ಮಾಪಕರಿಂದ ಅವಮಾನ ಆಗಿತ್ತು. ಅವರ ಎದುರೇ ದುಬಾರಿ ಕಾರಲ್ಲಿ ಬಂದರು. 2020ರಲ್ಲಿ 'ದರ್ಬಾರ್' ಸಿನಿಮಾ ರಿಲೀಸ್ ಸಂದರ್ಭದಲ್ಲಿ ರಜನಿಕಾಂತ್ ಮಾತನಾಡಿದ್ದರು. ತಮ್ಮ ಹಳೆಯ ದಿನಗಳನ್ನು ಅವರು ನೆನಪಿಸಿಕೊಂಡಿದ್ದರು. ತಮಿಳು ಚಿತ್ರರಂಗದಲ್ಲಿ ರಜನಿ ಆಗತಾನೇ ಹೆಸರು ಮಾಡುತ್ತಿದ್ದರು. ಆಗ ಅವರಿಗೆ ನಿರ್ಮಾಪಕರಿಂದ ಅವಮಾನ ಆಗಿತ್ತು. ಕಾರಿನಲ್ಲಿ ಲಿಫ್ಟ್ ಕೇಳಿದ್ದಕ್ಕೆ ಕೊಡಲು ಆ ನಿರ್ಮಾಪಕರು ನಿರಾಕರಿಸಿದ್ದರು.

ಆರ್‌ಆರ್‌ಆರ್ ಕುರಿತು ಬರಲಿದೆ ಡಾಕ್ಯುಮೆಂಟರಿ

'ಬಿಹೈಂಡ್ ಆಂಡ್ ಬಿಯಾಂಡ್' ಹೆಸರಿನ ಡಾಕ್ಯುಮೆಂಟರಿ ನೆಟ್‌ಫ್ಲಿಕ್ಸ್‌ನಲ್ಲಿ ಇದೇ ತಿಂಗಳು ಬಿಡುಗಡೆ ಆಗಲಿದೆ. ಈಗಾಗಲೇ ಡಾಕ್ಯುಮೆಂಟರಿಯ ಪೋಸ್ಟರ್ ಬಿಡುಗಡೆ ಆಗಿದ್ದು, ಸಿನಿಮಾ ಟೇಪ್‌ಗಳ ನಡುವೆ ರಾಜಮೌಳಿ ಕುಳಿತಿರುವ ಚಿತ್ರವನ್ನು ಪೋಸ್ಟರ್‌ನಲ್ಲಿ ಬಳಸಲಾಗಿದೆ. ಆರ್‌ಆರ್‌ಆರ್ ಸಿನಿಮಾದ ಹಲವು ವಿಷಯಗಳು ಡಾಕ್ಯುಮೆಂಟರಿಯಲ್ಲಿ ಬೆಳಕಿಗೆ ಬರಲಿವೆ. ರಾಜಮೌಳಿ ನಿರ್ದೇಶಿಸಿ ಜೂ ಎನ್‌ಟಿಆರ್ ಮತ್ತು ರಾಮ್ ಚರಣ್ ಮುಖ್ಯ ಪಾತ್ರಗಳಲ್ಲಿ ನಟಿಸಿದ್ದ 'ಆರ್‌ಆರ್‌ಆರ್' ಸಿನಿಮಾ ಭಾರಿ ದೊಡ್ಡ ಯಶಸ್ಸು ಗಳಿಸಿತು. ಬಾಕ್ಸ್ ಆಫೀಸ್ ಯಶಸ್ಸಿನ ಜೊತೆಗೆ ಆಸ್ಕರ್ ಅಂಗಳಕ್ಕೂ ಹೋಗಿ, 'ನಾಟು ನಾಟು' ಹಾಡಿಗೆ ಆಸ್ಕರ್ ಸಹ ಗೆದ್ದಿತು. 'ಆರ್‌ಆರ್‌ಆರ್' ಸಿನಿಮಾ ಮೂಲಕ ಮತ್ತೊಮ್ಮೆ ವಿಶ್ವದ ಚಿತ್ರರಂಗ ಭಾರತದ ಕಡೆಗೆ ತಿರುಗಿ ನೋಡುವಂತಾಯ್ತು. ಜೇಮ್ಸ್ ಕ್ಯಾಮರನ್, ಸ್ಟಿವನ್ ಸ್ಪೀಪ್‌ಬರ್ಗ್ ಅಂಥಹಾ ದಿಗ್ಗಜ ನಿರ್ದೇಶಕರು 'ಆರ್‌ಆರ್‌ಆರ್' ಸಿನಿಮಾವನ್ನು ಮೆಚ್ಚಿಕೊಂಡಾಡಿದರು. ವಿದೇಶದಲ್ಲಿ ಈ ಸಿನಿಮಾ ಭಾರಿ ಯಶಸ್ಸು ಗಳಿಸಿತು. ಭಾರತ ಚಿತ್ರರಂಗದ ಪಾಲಿಗೆ ಅತ್ಯಂತ ಪ್ರಮುಖ ಸಿನಿಮಾ ಆಯ್ತು 'ಆರ್‌ಆರ್‌ಆರ್' ಇದೀಗ ಈ ಸಿನಿಮಾದ ಡಾಕ್ಯುಮೆಂಟರಿ ನಿರ್ಮಾಣ ಆಗಲಿದೆ.

ಬಿಹೈಂಡ್ ಆಂಡ್ ಬಿಯಾಂಡ್' ಹೆಸರಿನ ಡಾಕ್ಯುಮೆಂಟರಿ ನೆಟ್‌ಫ್ಲಿಕ್ಸ್‌ನಲ್ಲಿ ಇದೇ ತಿಂಗಳು ಬಿಡುಗಡೆ ಆಗಲಿದೆ. ಈಗಾಗಲೇ ಡಾಕ್ಯುಮೆಂಟರಿಯ ಪೋಸ್ಟರ್ ಬಿಡುಗಡೆ ಆಗಿದ್ದು, ಸಿನಿಮಾ ಟೇಪ್ ಗಳ ನಡುವೆ ರಾಜಮೌಳಿ ಕುಳಿತಿರುವ ಚಿತ್ರವನ್ನು ಪೋಸ್ಟರ್‌ನಲ್ಲಿ ಬಳಸಲಾಗಿದೆ. 'ವೈಭವವನ್ನು ವಿಶ್ವ ನೋಡಿದೆ, ಈಗ ಅದರ ಹಿಂದಿನ ಕತೆಯನ್ನು ನೋಡಲಿದೆ' ಎಂದು ಕ್ಯಾಪ್ಷನ್ ನೀಡಲಾಗಿದೆ. 'ಆರ್‌ಆರ್‌ಆರ್' ಸಿನಿಮಾ ಡಾಕ್ಯುಮೆಂಟರಿಯಲ್ಲಿ ಸಿನಿಮಾದ ಕತೆ ಹುಟ್ಟಿದ ಬಗೆ, ಚಿತ್ರೀಕರಣಕ್ಕೆ ಮಾಡಿಕೊಂಡ ತಯಾರಿ, ಕತೆ ಬೆಳೆದ ರೀತಿ, ಕೋವಿಡ್‌ನಿಂದ ಆದ ಹಿನ್ನಡೆ, ಆ ನಂತರ ಮತ್ತೆ ಚಿತ್ರೀಕರಣ ಶುರುವಾಗಿದ್ದು, ಸಿನಿಮಾ ಚಿತ್ರೀಕರಣದಲ್ಲಿ ಎದುರಾದ ಸಮಸ್ಯೆಗಳು ಇನ್ನೂ ಹಲವು ವಿಷಯಗಳನ್ನು ಸ್ವತಃ ರಾಜಮೌಳಿ ಮತ್ತು ಸಿನಿಮಾದ ತಂಡ ಬಿಚ್ಚಿಡಲಿದೆ.

ಹಾಲಿವುಡ್ ನಟಿ ಜೊತೆ ಧನುಷ್ ರೊಮ್ಯಾನ್ಸ್



ತಮಿಳು ನಟ ಧನುಷ್ ಸದಾ ವಿಭಿನ್ನ ಪಾತ್ರಗಳ ಮೂಲಕ ರಂಜಿಸುತ್ತಲೇ ಇರುತ್ತಾರೆ. ಯಾವುದೇ ಪಾತ್ರ ಕೊಟ್ಟರೂ ಆ ಪಾತ್ರವೇ ತಾವಾಗಿ ನಟಿಸುತ್ತಾರೆ. ಬಹುಭಾಷೆಗಳಲ್ಲಿ ಕಮಾಲ್ ಮಾಡಿರುವ ಧನುಷ್ ಇದೀಗ ಮತ್ತೊಮ್ಮೆ ಹಾಲಿವುಡ್‌ಗೆ ಹಾರಲು ಮುಂದಾಗಿದ್ದಾರೆ. 27 ವರ್ಷದ ಹಾಲಿವುಡ್ ಬೆಡಗಿ ಸಿಡ್ನಿ ಸ್ವೀನಿ ಜೊತೆ ನಟ ರೊಮ್ಯಾನ್ಸ್ ಮಾಡಲಿದ್ದಾರೆ.

ದಿ ಎಕ್ಸಾರ್ಡಿನರಿ ಜರ್ನಿ ಆಫ್ ಎ ಫಕೀರ್, ದಿ ಗ್ರೇ ಮ್ಯಾನ್ ಎಂಬ ಇಂಗ್ಲಿಷ್ ಸಿನಿಮಾಗಳಲ್ಲಿ ನಟ ಅಭಿನಯಿಸಿದ್ದಾರೆ. ಇದೀಗ 'ಸ್ಟ್ರೀಟ್ ಫೈಟರ್' ಎಂಬ ಹಾಲಿವುಡ್ ಸಿನಿಮಾದಲ್ಲಿ ಧನುಷ್ ನಟಿಸಲು ರೆಡಿಯಾಗಿದ್ದಾರೆ. ಅವರಿಗೆ ಸಿಡ್ನಿ ಸ್ವೀನಿ ನಾಯಕಿಯಾಗಲಿದ್ದಾರೆ. ಇಬ್ಬರಿಗೂ ನಟನೆಗೆ ಸ್ಕೋಪ್ ಇರುವಂತಹ ಪಾತ್ರವೇ ಸಿಕ್ಕಿದೆ. ಇನ್ನೂ ಧನುಷ್ ಕೈಯಲ್ಲಿ 'ಕುಬೇರ' ಎಂಬ ಸಿನಿಮಾವಿದೆ. ಇವರೊಂದಿಗೆ ರಶ್ಮಿಕಾ ಮಂದಣ್ಣ, ನಾಗಾರ್ಜುನ ಅಕ್ಕಿನೇನಿ ಸೇರಿದಂತೆ ಅನೇಕರು ನಟಿಸಿದ್ದಾರೆ. 'ಇಡ್ಲಿ ಕಡೈ' ಎಂಬ ಚಿತ್ರವನ್ನು ಧನುಷ್ ನಿರ್ದೇಶನ ಮಾಡಲಿದ್ದಾರೆ. ಇಳಯರಾಜ ಜೀವನ ಆಧರಿಸಿ ಈ ಸಿನಿಮಾ ಮಾಡಲಾಗುತ್ತಿದೆ.

ಲೈಫ್ ಪಾರ್ಟ್ನರ್ ಬಗ್ಗೆ ಸುಳಿವು ಕೊಟ್ಟ ಸಮಂತಾ

ಟಾಲಿವುಡ್ ನಟ ನಾಗಚೈತನ್ಯ ಮದುವೆ ಬೆನ್ನಲ್ಲೇ ಮದುವೆ ಬಗ್ಗೆ ಸಮಂತಾ ಸುಳಿವು ನೀಡಿದ್ದಾರೆ. ಈ ರಾಶಿಯವರು 2025ರ ವರ್ಷದಲ್ಲಿ ಏನನ್ನೆಲ್ಲ ನಿರೀಕ್ಷೆ ಮಾಡಬಹುದು ಎಂಬ ಪಟ್ಟಿಯನ್ನು ಸಮಂತಾ ಹಂಚಿಕೊಂಡು, ಹಾಗೆಯೇ ಆಗಲಿ ಎಂದು ಕ್ಯಾಪ್ಷನ್ ನೀಡಿದ್ದಾರೆ. ಮದುವೆ ಮತ್ತು ಮಕ್ಕಳ ಬಗ್ಗೆ ಇದರಲ್ಲಿ ಸೂಚನೆ ಇದೆ. 2025ರಲ್ಲಿ ಅತ್ಯಂತ ಬಿಡುವಿಲ್ಲದ ವರ್ಷವಾಗಿರುವುದು, ಹೆಚ್ಚು ಪ್ರಗತಿ ಕಾಣಬೇಕು ಹಾಗೂ ಹೆಚ್ಚಿನ ಹಣವನ್ನು ಗಳಿಸುವುದು, ನಿಮಗೆ ಮತ್ತು ನಿಮಗೆ ಆರ್ಥಿಕ ಸ್ಥಿರತೆ ಇರುವುದು, ನೀವು ಹೊಂದಿದ್ದ ದೊಡ್ಡ ಗುರಿಗಳನ್ನು ಪೂರ್ಣಗೊಳಿಸುವುದು, ಆದಾಯಕ್ಕೆ ಹಲವು ಮಾರ್ಗಗಳು, ಸ್ಥಳಾಂತರಗೊಳ್ಳಲು ಒಂದು ಅವಕಾಶ, ಉತ್ತಮ ಮಾನಸಿಕ ಮತ್ತು ದೈಹಿಕ ಆರೋಗ್ಯ, ಫಲವತ್ತತೆ, ನೀವು ಗರ್ಭಿಣಿಯಾಗಲು ಪ್ರಯತ್ನಿಸುತ್ತಿದ್ದರೆ, ಅದು ಅದ್ಭುತವಾಗಿದೆ. ಇಲ್ಲದಿದ್ದರೆ, ಜಾಗರೂಕರಾಗಿರಿ ಎಂದು ಸಮಂತಾ ಹಾಕಿರುವ ಪೋಸ್ಟ್‌ನಲ್ಲಿದೆ.

ಇದೇ ಪಟ್ಟಿಯಲ್ಲಿ ಸಮಂತಾ ಅವರು ಅತ್ಯಂತ ನಿಷ್ಠಾವಂತ ಮತ್ತು ಪ್ರೀತಿಯ ಸಂಗಾತಿ ಎಂದು ಪೋಸ್ಟ್ ಮಾಡಿರುವುದು ಪ್ರಶ್ನೆಗಳನ್ನು ಮುಂದಿಟ್ಟಿದೆ. ಅಲ್ಲದೆ, ಸಮಂತಾ ಅವರು ಮುಂದಿನ ವರ್ಷದಲ್ಲಿ ತಮ್ಮ ಹೊಸ ಸಂಗಾತಿ ಹಾಗೂ ಗರ್ಭಿಣಿಯಾಗುವ ಬಗ್ಗೆಯೂ ಸುಳಿವು ನೀಡಿದ್ದಾರೆ. ಈ ಪೋಸ್ಟ್ ಹಂಚಿಕೊಂಡ ಬೆನ್ನಲ್ಲೇ ಸಮಂತಾ ಕೂಡ 2ನೇ ಮದುವೆಯ ನಿರೀಕ್ಷೆಯಲ್ಲಿದ್ದಾರೆ ಎಂದು ಫ್ಯಾನ್ಸ್ ಊಹಿಸುತ್ತಿದ್ದಾರೆ.

ಸದಗರದಿಂದ ನಡೆಯಿತು ಕೀರ್ತಿ ಸುರೇಶ್ ಮದುವೆ

ಬಹುಕಾಲದ ಗೆಳೆಯ ಆಂಟೊನಿ ತಟ್ಟಿಲ್ ಜೊತೆ ನಟಿ ಕೀರ್ತಿ ಸುರೇಶ್ ಅವರು ದಾಂಪತ್ಯ ಜೀವನ ಆರಂಭಿಸಿದ್ದಾರೆ. ಚಿತ್ರರಂಗದಲ್ಲಿ ಕೀರ್ತಿ ಸುರೇಶ್ ಅವರಿಗೆ ತುಂಬ ಡಿಮ್ಯಾಂಡ್ ಇದೆ. ಬಹುಭಾಷೆಯಲ್ಲಿ ಅವರು ಬ್ಯುಸಿ ಆಗಿದ್ದಾರೆ. ನ್ಯಾಷನಲ್ ಅವಾರ್ಡ್ ಪಡೆದಿರುವ ಕೀರ್ತಿ ಸುರೇಶ್ ಅವರನ್ನು ಬಾಲ್ಯದ ಗೆಳೆಯ ಆಂಟೊನಿ ತಟ್ಟಿಲ್ ಅವರು ಕೈ ಹಿಡಿದಿದ್ದಾರೆ. ಗೋವಾದಲ್ಲಿ ಕೀರ್ತಿ ಸುರೇಶ್ ಹಾಗೂ ಆಂಟೊನಿ ತಟ್ಟಿಲ್ ಅವರು ಡಿಸೆಂಬರ್ 12 ಹಸೆಮಣೆ ಏರಿದ್ದಾರೆ. ವೈವಾಹಿಕ ಜೀವನಕ್ಕೆ ಕಾಲಿಟ್ಟಿರುವ ಈ ಜೋಡಿಗೆ ಎಲ್ಲಾರೂ ಶುಭ ಕೋರುತ್ತಿದ್ದಾರೆ. ಆಪ್ತರು ಮತ್ತು ಕುಟುಂಬದವರು ಮಾತ್ರ ವಿವಾಹದಲ್ಲಿ ಭಾಗಿ ಆಗಿದ್ದಾರೆ. ನಟಿ ಕೀರ್ತಿ ಸುರೇಶ್ ಅವರಿಗೆ ಈಗ 32ರ ಪ್ರಾಯ. ಬಾಲನಟಿಯಾಗಿ ಬಣ್ಣದ ಲೋಕಕ್ಕೆ ಕಾಲಿಟ್ಟ ಅವರು ನಂತರ ಹೀರೋಯಿನ್ ಆಗಿಯೂ ಪ್ರಸಿದ್ಧಿ ಪಡೆದರು. ಅವರನ್ನು ಮದುವೆ ಆಗಿರುವ ಉದ್ಯಮಿ ಆಂಟೊನಿ ತಟ್ಟಿಲ್ ಅವರಿಗೆ ಈಗ 35 ವರ್ಷ ವಯಸ್ಸು. ಕೀರ್ತಿ ಸುರೇಶ್ ಮತ್ತು ಆಂಟೊನಿ ತಟ್ಟಿಲ್ ಅವರ ನಡುವೆ ಕೇವಲ 3 ವರ್ಷಗಳ ವಯಸ್ಸಿನ ಅಂತರ ಇದೆ. ಕಳೆದ 15 ವರ್ಷಗಳಿಂದ ಅವರಿಬ್ಬರು ಪ್ರೀತಿಸುತ್ತಿದ್ದರು. ಇತ್ತೀಚೆಗಷ್ಟೇ ಅವರ ಪ್ರೀತಿ ವಿಚಾರ ಬಹಿರಂಗ ಆಗಿತ್ತು. ಈಗ ಗೋವಾದಲ್ಲಿ ಸಂಭ್ರಮದಿಂದ ಮದುವೆ ನಡೆದಿದೆ. ಉದ್ಯಮಿಯಾಗಿ ಆಂಟೊನಿ ತಟ್ಟಿಲ್ ಅವರು ಯಶಸ್ಸು ಕಂಡಿದ್ದಾರೆ. ಕೀರ್ತಿ ಸುರೇಶ್ ಅವರು ಚಿತ್ರರಂಗದಲ್ಲಿ ಸಾಧನೆ ಮಾಡಿದ್ದಾರೆ. ಕೀರ್ತಿ ಸುರೇಶ್ ಅವರ ಮದುವೆಯ ಫೋಟೋಗಳು ವೈರಲ್ ಆಗಿವೆ. ಅಭಿಮಾನಿಗಳು, ಸೆಲೆಬ್ರಿಟಿಗಳು ಅಭಿನಂದನೆ ತಿಳಿಸುತ್ತಿದ್ದಾರೆ. ತೆಲುಗು, ತಮಿಳು, ಮಲಯಾಳಂ ಸಿನಿಮಾಗಳಲ್ಲಿ ನಟಿಸಿರುವ ಕೀರ್ತಿ ಸುರೇಶ್ ಅವರು 'ಬೇಬಿ ಜಾನ್' ಸಿನಿಮಾದ ಮೂಲಕ ಬಾಲಿವುಡ್‌ಗೂ ಕಾಲಿಡುತ್ತಿದ್ದಾರೆ. ಡಿಸೆಂಬರ್ 25ರಂದು ಬಿಡುಗಡೆ ಆಗಲಿರುವ ಈ ಸಿನಿಮಾದಲ್ಲಿ ವರುಣ್ ಧವನ್ ಜತೆ ಕೀರ್ತಿ ಸುರೇಶ್ ನಟಿಸಿದ್ದಾರೆ.

ಮತ್ತೊಬ್ಬ ವಿದೇಶಿ ಕೋಚ್‌ಗೆ ತಂಡದಿಂದ ಗೇಟ್‌ಪಾಸ್ ನೀಡಿದ ಪಾಕಿಸ್ತಾನ

ಪ್ರಸ್ತುತ ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿರುವ ಪಾಕಿಸ್ತಾನ ಕ್ರಿಕೆಟ್ ತಂಡದ ಸಹಾಯಕ ತರಬೇತುದಾರ ಟಿಮ್ ನೀಲ್ಸನ್ ಅವರನ್ನು ಅವರ ಹುದ್ದೆಯಿಂದ ವಜಾ ಮಾಡಲಾಗಿದೆ. ಇದು ದಕ್ಷಿಣ ಆಫ್ರಿಕಾ ವಿರುದ್ಧದ ಮಹತ್ವದ ಟೆಸ್ಟ್ ಸರಣಿಗೆ ಕೆಲವೇ ವಾರಗಳ ಮೊದಲು ನಡೆದಿದೆ. ಪಿಸಿಬಿ ಟಿಮ್ ನೀಲ್ಸನ್ ಅವರ ಒಪ್ಪಂದವನ್ನು ನವೀಕರಿಸಲು ನಿರ್ಧರಿಸಿಲ್ಲ ಎಂದು ವರದಿಯಾಗಿದೆ.

ಈ ನಿರ್ಧಾರದಿಂದ ಮುಖ್ಯ ತರಬೇತುದಾರ ಜೇಸನ್ ಗಿಲ್ಲೆಸ್ಪಿಯವರ ಭವಿಷ್ಯದ ಬಗ್ಗೆಯೂ ಅನಿಶ್ಚಿತತೆ ಮೂಡಿದೆ.

ಪ್ರಸ್ತುತ ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿರುವ ಪಾಕಿಸ್ತಾನ ಕ್ರಿಕೆಟ್ ತಂಡ ಹರಿಣಗಳ ನಾಡಲ್ಲಿ ಮೂರು ಮಾದರಿಯ ಸರಣಿಗಳನ್ನು ಆಡಲಿದೆ. ಮೊದಲಿಗೆ ಟಿ20 ಸರಣಿ ನಡೆಯುತ್ತಿದ್ದು, ಆ ಬಳಿಕ ಏಕದಿನ ಸರಣಿ, ಕೊನೆಗೆ ಟೆಸ್ಟ್ ಸರಣಿ ನಡೆಯಲ್ಲಿದೆ. ಆದರೆ ಡಿಸೆಂಬರ್ 26ರಿಂದ ಸೆಂಚುರಿಯನ್‌ನಲ್ಲಿ ಆರಂಭವಾಗಲಿರುವ ಟೆಸ್ಟ್ ಸರಣಿಗೆ ಕೇವಲ 2 ವಾರಗಳ ಮೊದಲು, ಪಾಕಿಸ್ತಾನ ಕ್ರಿಕೆಟ್ ಮಂಡಳಿ ಆಘಾತಕಾರಿ ನಿರ್ಧಾರವನ್ನು ತೆಗೆದುಕೊಂಡಿದೆ.

ಆ ಪ್ರಕಾರ ತಂಡದ ಸಹಾಯಕ ಕೋಚ್ ಟಿಮ್ ನೀಲ್ಸನ್ ಅವರನ್ನು ಅವರ ಹುದ್ದೆಯಿಂದ ತೆಗೆದುಹಾಕಿದೆ. ಕಳೆದ ಆಗಸ್ಟ್‌ನಲ್ಲಿ ಟೆಸ್ಟ್ ತಂಡದ ಸಹಾಯಕ ಕೋಚ್ ಆಗಿ ನೇಮಕಗೊಂಡಿದ್ದ ನೀಲ್ಸನ್, ಪಾಕಿಸ್ತಾನದ ಟೆಸ್ಟ್ ತರಬೇತುದಾರ ಜೇಸನ್ ಗಿಲ್ಲೆಸ್ಪಿಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು. ಆದರೀಗ ಅವರನ್ನು ಈ ಹುದ್ದೆಯಿಂದ ವಜಾಗೊಳಿಸಲಾಗಿದೆ. ವರದಿಯ ಪ್ರಕಾರ, ಟಿಮ್ ನೀಲ್ಸನ್ ಅವರ ಒಪ್ಪಂದವನ್ನು ನವೀಕರಿಸುವ ಇರಾದೆಯಲ್ಲಿ ಪಿಸಿಬಿ ಇಲ್ಲ.

ಹೀಗಾಗಿ ಅವರನ್ನು ಈ ಹುದ್ದೆಯಿಂಧ ತೆಗೆದುಹಾಕಿದೆ. ವಾಸ್ತವವಾಗಿ ನೀಲ್ಸನ್ ಅವರ ಒಪ್ಪಂದವು ಆಸ್ಟ್ರೇಲಿಯಾ ಪ್ರವಾಸದೊಂದಿಗೆ ಕೊನೆಗೊಂಡಿತ್ತು. ಆದರೆ ಮುಂಬರುವ ದಕ್ಷಿಣ ಆಫ್ರಿಕಾದೊಂದಿಗಿನ ಟೆಸ್ಟ್ ಸರಣಿ ಮತ್ತು ನಂತರ ವೆಸ್ಟ್ ಇಂಡೀಸ್ ವಿರುದ್ಧದ ಟೆಸ್ಟ್ ಸರಣಿಯ ದೃಷ್ಟಿಯಿಂದ, ಅವರನ್ನು ಈ ಹುದ್ದೆಯಲ್ಲೇ ಉಳಿಸಿಕೊಳ್ಳಲಾಗುವುದು ಎಂದು ನಿರೀಕ್ಷಿಸಲಾಗಿತ್ತು ಆದರೆ ಅದು ಸಂಭವಿಸಲಿಲ್ಲ. ಇದಲ್ಲದೆ ತಂಡದೊಂದಿಗೆ ತಾನು ಉತ್ತಮ ಪ್ರಗತಿಯನ್ನು ಸಾಧಿಸಿದ್ದೇನೆ ಮತ್ತು ಒಪ್ಪಂದದ ವಿಸ್ತರಣೆಯನ್ನು ನಿರೀಕ್ಷಿಸುತ್ತಿದ್ದೇನೆ ಎಂದು ನೀಲ್ಸನ್ ಹೇಳಿಕೊಂಡಿದ್ದಾರೆ ಎಂದು ವರದಿಯೊಂದರಲ್ಲಿ ಉಲ್ಲೇಖಿಸಲಾಗಿತ್ತು. ಆದರೆ ನೀಲ್ಸನ್ ಅವರ ಸೇವೆ ಇನ್ನು ಮುಂದೆ ತಂಡಕ್ಕೆ ಅಗತ್ಯವಿಲ್ಲ ಎಂದು ಮಂಡಳಿಯು ಸ್ಪಷ್ಟವಾಗಿ ಹೇಳಿದೆ. ನೀಲ್ಸನ್ ಅವರನ್ನು ತೆಗೆದುಹಾಕಿದ ನಂತರ, ಮುಖ್ಯ ತರಬೇತುದಾರ ಗಿಲ್ಲೆಸ್ಪಿ ಭವಿಷ್ಯದ ಬಗ್ಗೆಯೂ ಈಗ ಪ್ರಶ್ನೆ ಮೂಡಿದೆ. ಇದಲ್ಲದೆ ನೀಲ್ಸನ್ ಅವರನ್ನು ಈ ಹುದ್ದೆಯಿಂದ ತೆಗೆದುಹಾಕುವ ನಿರ್ಧಾರಕ್ಕೆ ಸಂಬಂಧಿಸಿದಂತೆ ಪಿಸಿಬಿ ಗಿಲ್ಲೆಸ್ಪಿಯಿಂದ ಯಾವುದೇ ಸಲಹೆಯನ್ನು ಪಡೆದಿಲ್ಲ ಮತ್ತು ಅದರ ಬಗ್ಗೆ ಅವರಿಗೆ ತಿಳಿಸಲಾಗಿಲ್ಲ ಎಂದು ವರದಿಯಾಗಿದೆ. ಇದರಿಂದಾಗಿ ಗಿಲ್ಲೆಸ್ಪಿ ಅಸಮಾಧಾನಗೊಂಡಿದ್ದು ಪಾಕಿಸ್ತಾನಿ ತಂಡದೊಂದಿಗೆ ಮುಂದುವರಿಯುವ ಬಗ್ಗೆ ಅವರು ಚಿಂತಿಸುತ್ತಿರುವುದಾಗಿಯೂ ವರದಿಯಲ್ಲಿ ಉಲ್ಲೇಖವಾಗಿದೆ.

ಹೀರೋ ಟು ವಿಲನ್



ಭಾರತಕ್ಕೆ ಎರಡೆರಡು ವಿಶ್ವಕಪ್ ಗೆಲ್ಲಿಸಿಕೊಟ್ಟಿದ್ದ ಸ್ಟಾರ್ ಆಲ್‌ರೌಂಡರ್ ಯುವರಾಜ್ ಸಿಂಗ್ ಇಂದು ತಮ್ಮ 43ನೇ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿದ್ದಾರೆ. ತಮ್ಮ ಹೊಡಿಬಡಿ ಆಟದ ಮೂಲಕ ಭಾರತ ಎರಡು ವಿಶ್ವಕಪ್ ಗೆಲ್ಲುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಯುವರಾಜ್ ಸಿಂಗ್ 2014 ರಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಫೈನಲ್‌ನಲ್ಲಿ ಆಮೆಗತಿಯ ಬ್ಯಾಟಿಂಗ್ ಮಾಡಿ ತಂಡದ ಸೋಲಿಗೆ ಕಾರಣರಾಗಿದ್ದರು.

ಭಾರತವನ್ನು ಎರಡೆರಡು ಮಾದರಿಗಳಲ್ಲಿ ವಿಶ್ವ ಚಾಂಪಿಯನ್ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಟೀಂ ಇಂಡಿಯಾದ ಮಾಜಿ ಆಟಗಾರ ಯುವರಾಜ್ ಸಿಂಗ್ ಇಂದು ತಮ್ಮ 43ನೇ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿದ್ದಾರೆ. 2000 ನೇ ಇಸವಿಯಲ್ಲಿ ಭಾರತ ಕ್ರಿಕೆಟ್‌ಗೆ ಕಾಲಿಟ್ಟಿದ್ದ ಯುವಿ 2007 ರಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಹಾಗೂ 2011 ರಲ್ಲಿ ನಡೆದಿದ್ದ ಏಕದಿನ ವಿಶ್ವಕಪ್ ಅನ್ನು ಟೀಂ ಇಂಡಿಯಾ ಗೆದ್ದುಕೊಳ್ಳುವಲ್ಲಿ ಸಾಕಷ್ಟು ಕೊಡುಗೆ ನೀಡಿದ್ದರು. ಈ ಎರಡು ವಿಶ್ವಕಪ್‌ಗಳಲ್ಲಿ ಬ್ಯಾಟಿಂಗ್ ಹಾಗೂ ಬೌಲಿಂಗ್ ಎರಡಲ್ಲೂ ಯುವಿ ಅಮೋಘ ಪ್ರದರ್ಶನ ನೀಡಿದ್ದರು. ಅದರಲ್ಲೂ ಬ್ಯಾಟಿಂಗ್‌ನಲ್ಲಿ ಸುನಾಮಿಯನ್ನೇ ಎಬ್ಬಿಸಿದ್ದ ಯುವಿ ರನ್‌ಗಳ ಗುಡ್ಡೆ ಹಾಕಿದ್ದರು. ಆದಾಗ್ಯೂ ಕೇವಲ 3 ವರ್ಷಗಳ ನಂತರ ನಡೆದಿದ್ದ ಟಿ20 ವಿಶ್ವಕಪ್‌ನಲ್ಲಿ ತಮ್ಮ ಆಮೆಗತಿಯ ಬ್ಯಾಟಿಂಗ್‌ನಿಂದಾಗಿ ತಂಡದ ಸೋಲಿಗೆ ಯುವಿ ಕಾರಣರಾಗಿದ್ದರು. ಇದರಿಂದಾಗಿ ಅವರ ಮನೆಯ ಮೇಲೆ ಅಭಿಮಾನಿಗಳು ಕಲ್ಲು ತೂರಾಟ ಕೂಡ ನಡೆಸಿದ್ದರು. ಆ ಕರಾಳ ರಾತ್ರಿಯನ್ನು ಯುವಿ ಮರೆಯಲು ಸಾಧ್ಯವಿಲ್ಲ. ವಾಸ್ತವವಾಗಿ ಕ್ರಿಕೆಟ್ ಲೋ